ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 43 | ಮಾರ್ಚ್ 11 ಶನಿವಾರ 2023

ಸಂಪುಟ: 43 | ಸಂಚಿಕೆ: 321 | ಪುಟಗಳು: 12 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೆ.ಬೆಳ್ತೂರಿನ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರ ರಥೋತ್ಸವ



ಮೈಸೂರು, ಮಾ.9–ಹೆಚ್.ಡಿ.ಕೋಟೆ ಸಮೀಪದ ಸರಗೂರು ತಾಲೂಕಿನ ಕೆ.ಬೆಳ್ತೂರಿನಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು. ಮುಂಜಾನೆ ದೇವರಿಗೆ ಅಭಿಷೇಕ, ರಥಬಲಿ, ಯಾತ್ರಾದಾನ, ರಥಾರೋಹಣ, ಪುಷ್ಪಕೈಂಕರ್ಯ, ನೈವೇದ್ಯ, ಸಮಾರಾಧನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಥದ ಮೆರವಣಿಗೆ, ಸಾರ್ವಜನಿಕರಿಗೆ ಹಾಗೂ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ, ಕೋಸಂಬರಿ, ಪ್ರಸಾದ ವಿನಿಯೋಗ ನಡೆಯಿತು.

ಡಾ.ರಾಧಾ ಮಲ್ಲಪ್ಪ ಅವರಿಗೆ ಪ್ರೈಡ್ ಆಫ್ ಇಂಡಿಯಾ ಪ್ರಶಸ್ತಿ



ಮೈಸೂರು, ಮಾ. 10–ಕಪ್ಪೆ ಚಿಪ್ಪಿನ ಕಲಾಕೃತಿಗಳನ್ನು ಮಾಡುವ ಕಲೆಗಾರಿಕೆಯಲ್ಲಿ ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿರುವ ಡಾ.ರಾಧಾ ಮಲ್ಲಪ್ಪ ಅವರಿಗೆ ಪ್ರೈಡ್ ಆಫ್ ಇಂಡಿಯಾ ಪ್ರಶಸ್ತಿ ಲಭ್ಯವಾಗಿದೆ. ಪ್ರತಿಷ್ಠಿತ ಇಂಟರ್ ನ್ಯಾಷನಲ್ ಅಚೀವರ್ ಕೌನ್ಸಿಲ್ ವತಿಯಿಂದ ನೀಡಲಾಗುತ್ತಿರುವ ಈ ಪ್ರಶಸ್ತಿಯನ್ನು ಮೈಸೂರಿನ ದಕ್ಷ ಕಾಲೇಜಿನಲ್ಲಿ ಮಾ. 18 ರಂದು ಪ್ರಧಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಪಿ. ಜಯಚಂದ್ರ ರಾಜುರವರ ಇಂಡಿಯಾ ಅಂಡ್ ಯುನೈಟೆಡ್ ನೇಷನ್ಸ್ ಕೃತಿ ಬಿಡುಗಡೆ ಸಹ ನೆರವೇರಲಿದೆ. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ, ಮಾಜಿ ಮಂತ್ರಿಗಳಾದ ಪಿಜಿಆರ್ ಸಿಂಧ್ಯಾ, ವಿಧಾನಪರಿಷತ್ ಮಾಜಿ ಸದಸ್ಯರಾದ ಡಿ.ಎಸ್.ವೀರಯ್ಯ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಮಾ.13, ಶ್ರೀ ಮಹಾಬಲೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ

ಮೈಸೂರು, ಮಾ.10–ಶ್ರೀಚಾಮುಂಡೇಶ್ವರಿ ಅಮ್ಮನವರ ಸಮೂಹ ದೇವಸ್ಥಾನದ ವತಿಯಿಂದ ಚಾಮುಂಡೇಶ್ವರಿ ಬೆಟ್ಟದ ಶ್ರೀ ಮಹಾಬಲೇಶ್ವರ ಸ್ವಾಮಿಯವರ ಬ್ರಹ್ಮ ರಥೋತ್ಸವ ಮಾ.13 ರಂದು ನಡೆಯಲಿದೆ. ಮಾ.11 ರಂದು ವೃಷಭ ವಾಹನ, ಮಾ.12 ರಂದು ರಾತ್ರಿ ಕಳಶಾರೋಹಣ ನಂತರ ಗಜವಾಹನ, ಮಾ.13 ರಂದು ಬೆಳಿಗ್ಗೆ 6–45 ರಿಂದ 7–15 ರವರೆಗೆ ಬ್ರಹ್ಮ ರಥೋತ್ಸವ ಹಾಗೂ ಸಾಯಂಕಾಲ ಹಂಸವಾಹನ ಹಾಗೂ ರಾತ್ರಿ ನಟೇಶೋತ್ಸವ, ಮಾ.14 ರಂದು ಸಂಜೆ ಅಶ್ವಾರೋಹಣ, ರಾತ್ರಿ ಭೂತವಾಹನ, ಮಾ.15 ರಂದು ಬೆಳಗ್ಗೆ ತೀರ್ಥಸ್ನಾನ ಹಾಗೂ ರಾತ್ರಿ ಪಲ್ಲಕ್ಕಿ ಉತ್ಸವ ಧ್ವಜಾವರೋಹಣ, ಮಾ.16 ರಂದು ಶಯನೋತ್ಸವ ಹಾಗೂ ಮಾ.17ರಂದು ಬೆಳಗ್ಗೆ ಮಹಾಭಿಷೇಕ ಮತ್ತು ವೃಷಭ ವಾಹನ ನಡೆಯಲಿದೆ ಎಂದು ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಗೋವಿಂದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಮಹಿಳಾ ದಿನಾಚರಣೆ



ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಶಕ್ತಿಧಾಮ ಕೇಂದ್ರದ ನಿರ್ದೇಶಕಿ ಮಂಜುಳ, ಡಾ.ರಮ್ಯಾ, ಡಾ.ಸುಹಾಸಿನಿ, ಡಾ.ಸುಧಾರಾಣಿ ನಾಯಕ್ ಮತ್ತು ಕಮಲಮ್ಮ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ಶೋರೂಂನ ಸ್ಟೋರ್ ಹೆಡ್ ಶರಫುದ್ದೀನ್ ಇದ್ದಾರೆ.

ಬೆಳ್ಳೂರು ಸಹೋದರಿಯರು ಖ್ಯಾತಿಯ ನೃತ್ಯ ಕಲಾವಿದೆ ಉಮಾರಾವ್ ನಿಧನ



ಮೈಸೂರು, ಮಾ. 10–ಬೆಳ್ಳೂರು ಸಹೋದರಿಯರು ಖ್ಯಾತಿಯ ನೃತ್ಯ ಕಲಾವಿದೆ ಉಮಾರಾವ್(69) ಗುರುವಾರ ಸಂಜೆ ಸರಸ್ವತಿಪುರಂನ ತಮ್ಮ ನಿವಾಸದಲ್ಲಿ ನಿಧನರಾದರು.

ದಿವಂಗತ ರೋ. ಬಿ.ಎಸ್.ಎಸ್. ರಾವ್ ಅವರ ಪುತ್ರಿಯಾದ ಉಮಾರಾವ್, ಸಹೋದರಿಯರಾದ ರಾಧಾ ತಾಂಡವೇಶ್ವರ್, ವರಲಕ್ಷ್ಮಿ ಮತ್ತು ಗಾಯತ್ರಿ, ಸಹೋದರ ಡಿ.ಎಸ್. ರಾಮಚಂದ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡ್ಯ ಜಿಲ್ಲೆಯ ಬೆಳ್ಳೂರಿನ ಕವಿ ದಿಗ್ಗಜ ದಿವಂಗತ ಬಿಎಂಶ್ರೀ ಕುಟುಂಬದಲ್ಲಿ ಜನಿಸಿದ ಉಮಾರಾವ್, ತಾವು 10 ವರ್ಷ ವಯಸ್ಸಿನವರಿದ್ದಾಗಲೇ ಪ್ರೊ ತೀರ್ಥರಾಮ್ ಅಜಾದ್ ಅವರ ಮಾರ್ಗದರ್ಶನದಲ್ಲಿ ಕಥಕ್‌ನಲ್ಲಿ ತರಬೇತಿ ಪಡೆದು ನವದೆಹಲಿಯ ಗಂಧರ್ವ ಮಹಾವಿದ್ಯಾಲಯದಲ್ಲಿ ಪಾರಮ್ಯ ಸಾಧಿಸಿದ್ದರು.

ಉಮಾರಾವ್ ಅವರು ಮೆಟ್ರೋ ಗೋಲ್ಡ್‌ವಿನ್ ಮಯರ್ (ಎಂಜಿಎಂ) ನಿರ್ಮಾಣದ ಹಾಲಿವುಡ್ ಚಿತ್ರ 'ಮಾಯಾ'ದಲ್ಲಿ ಅಭಿನಯಿಸಿದ್ದು, ಇದು ಅವರನ್ನು ವಿಶ್ವಭೂಪಟದಲ್ಲಿ ಗುರುತಿಸುವಂತೆ ಮಾಡಿತು. ನಂತರ ಅವರು ಶಾಸ್ತ್ರೀಯ ಸಂಗೀತವನ್ನು ಪದ್ಮವಿಭೂಷಣ ದಿವಂಗತ ರುಕ್ಮಿಣಿದೇವಿ ಅವರ ಮಾರ್ಗದರ್ಶನದಲ್ಲಿ ಪಡೆದುಕೊಂಡಿದ್ದರು. ಅಲ್ಲದೆ ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಮುಗಿಸಿದ್ದ ಇವರು, 1972ರಲ್ಲಿ ಮದ್ರಾಸ್ (ಚೆನ್ನೈ)ನ ಲಲಿತ ಕಲೆಗಳ ಕಾಲೇಜಿನ ಕಲಾ ಕ್ಷೇತ್ರದಲ್ಲಿ ಭರತನಾಟ್ಯ ಪ್ರವೇಶ ಮಾಡಿದ್ದರು. ಉಮಾರಾವ್ ಅವರು ಸಿಂಗಾಪೂರ್‌ನ ಭಾರತೀಯ ಲಲಿತ ಕಲೆಗಳ ಭರತನಾಟ್ಯ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ ಸಿಂಗಾಪೂರ್‌ನಲ್ಲಿ ತಮ್ಮ ವಾಸ್ತವ್ಯದ ಮೂರು ವರ್ಷಗಳ ಅವಧಿಯಲ್ಲಿ ಸಿಂಗಪೂರ ಕಲಾ ರಂಗದಲ್ಲಿ ಅಸಾಧ್ಯವಾದ ಇತಿಹಾಸವನ್ನು ಸೃಷ್ಟಿಸಿದ್ದರು.


ನಿಧನ

ಪ್ರೊ.ಪಿ.ಜೆ.ಗೆರ್ವಾಸಿಸ್



ಮೈಸೂರು, ಮಾ.10–ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಹಾಗೂ ಉದಯಗಿರಿ ನಿವಾಸಿ ಪ್ರೊ.ಪಿ.ಜೆ.ಗೆರ್ವಾಸಿಸ್ (78) ಶುಕ್ರವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ನಿವೃತ್ತ ಪ್ರಾಧ್ಯಾಪಕಿ ಎ.ಸಿ.ಮಾರ್ಯಮ್ಮ, ಪುತ್ರಿ ಡಾ.ಅಲ್ಫೋನ್ಸೋ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ರಾಜೀವ್‌ನಗರದಲ್ಲಿರುವ ಸೇಂಟ್ ತೇರೇಸಾ ಆಫ್ ಕೊಲ್ಕತ್ತಾ ಚರ್ಚ್‌ನಲ್ಲಿ ಶುಕ್ರವಾರ ಮಧ್ಯಾಹ್ನ 3.30ಕ್ಕೆ ಸಾಮೂಹಿಕ ಪ್ರಾರ್ಥನೆ ನಂತರ ರಿಂಗ್ ರಸ್ತೆ ಸಮೀಪವಿರುವ ಕಾಮನಕೆರೆಹುಂಡಿ ಮೌಂಟ್ ಕಾರ್ಮೆಲ್ ಚರ್ಚ್ ಸಿಮೆಟ್ರಿಯಲ್ಲಿ ಸಂಜೆ 5ಕ್ಕೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವನಂಜಪ್ಪ



ಮೈಸೂರು, ಮಾ.10– ಜಿಲ್ಲೆಯ ಸರಗೂರು ಹೋಬಳಿ, ಶಾಂತಿಪುರ ಗ್ರಾಮದ ನಿವಾಸಿ, ಪ್ರಥಮ ದರ್ಜೆ ಗುತ್ತಿಗೆದಾರ ಎಸ್.ಎನ್.ಶಿವನಂಜಪ್ಪ(73) ಅವರು ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಇಚ್ಛೆಯಂತೆ ಪಾರ್ಥೀವ ಶರೀರವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ದಾನವಾಗಿ ನೀಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ರಾಜ್ಯಕ್ಕೆ ಪ್ರಧಾನಿ ಮೋದಿ: ಬೆಂಗಳೂರು–ಮೈಸೂರು ಹೆದ್ದಾರಿ, ಧಾರವಾಡದಲ್ಲಿ ಐಐಟಿ ಉದ್ಘಾಟನೆ



ಬೆಂಗಳೂರು, ಮಾ.10(ಕೆಎಂಶಿ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾರ್ಚ್ 12 ರಂದು ರಾಜ್ಯಕ್ಕೆ ಆಗಮಿಸುತ್ತಿದ್ದು, ಮಂಡ್ಯದಲ್ಲಿ ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ, ಧಾರವಾಡದಲ್ಲಿ ಐಐಟಿ, ಜಲ್‌ಜೀವನ್ ಮಿಷನ್ ಹಾಗೂ ಜಯದೇವ ಹೃದ್ರೋಗ ಸಂಸ್ಥೆಯ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಅತ್ಯಂತ ಅವಶ್ಯಕವಿರುವ ಮೂಲ ಸೌಕರ್ಯಗಳಿಗೆ ಅವರು ಅನುದಾನ ನೀಡಿರುವ ಹಿನ್ನೆಲೆಯಲ್ಲಿ ಪೂರ್ಣಗೊಂಡಿರುವ ಹಲವು ಕಾರ್ಯಕ್ರಮಗಳ ಲೋಕಾರ್ಪಣೆ ಹಾಗೂ ಇನ್ನು ಕೆಲವೊಂದಕ್ಕೆ ಚಾಲನೆ ನೀಡುವರು ಎಂದರು.

ಕಳೆದ ವರ್ಷಗಳಲ್ಲಿ ಅತೀ ಹೆಚ್ಚು ಹಣ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಬಂದರುಗಳು ಹಾಗೂ ವಿವಿಧ ಸಂಸ್ಥೆಗಳಿಗೆ ವಿಶೇಷವಾಗಿ ರಾಜ್ಯ ಹಾಗೂ ಅಂತರ ರಾಜ್ಯಗಳ ಮೂಲಭೂತ ಸೌಕರ್ಯಗಳಿಗೆ ಬಹಳ ದೊಡ್ಡ ಪ್ರಮಾಣದ ಕೊಡುಗೆಯನ್ನು ಪ್ರಧಾನಿಗಳು ನೀಡಿದ್ದಾರೆ. ಅವೆಲ್ಲವೂ ಲೋಕಾರ್ಪಣೆಯಾಗುತ್ತಿವೆ ಎಂದು ಹೇಳಿದರು. ಹಂತ ಹಂತವಾಗಿ ಐಐಟಿಗೆ ಅನುದಾನ ಒದಗಿಸಲಾಗಿದೆ. ಐಐಟಿ ಪ್ರತಿಷ್ಠಿತ ಸಂಸ್ಥೆಯಾಗಿದ್ದು ದೇಶದಲ್ಲಿಯೇ ನಂಬರ್ ಒನ್ ಐಐಟಿ ಮಾಡುವ ಉದ್ದೇಶವಿದೆ. ಧಾರವಾಡ ಸರಸ್ವತಿಯ ನಗರ. ಇಲ್ಲಿ ಐಐಟಿ ಸ್ಥಾಪನೆಯಾಗಿರುವುದು ಕಿರೀಟ ಪ್ರಾಯವಾಗಿದೆ ಎಂದರು.

ಬೇಲಿಕೇರಿ ಬಂದರು ಅಭಿವೃದ್ಧಿಯನ್ನು ಸಾಗರಮಾಲಾ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವುದು. ಕೇಂದ್ರ ಸರ್ಕಾರದ 12 ಯೋಜನೆಗಳಿಗೆ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು. ರಾಜ್ಯದ 2 ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್ ಕರೆಯಲಾಗಿದೆ ಎಂದರು.

ಪಕ್ಷದಲ್ಲಿ ಗಟ್ಟಿಯಾದ ಸಂಘಟನೆ ಬೂತ್ ಮಟ್ಟದಲ್ಲಿದ್ದು ಅದೇ ನಮ್ಮ ಶಕ್ತಿ. ಚುನಾವಣೆ ಮೂರನೇ ಹಂತದ ಪ್ರಚಾರ ನಡೆಯುತ್ತಿದೆ. ಬೂತ್ ವಿಜಯ, ಬೂತ್ ಮಟ್ಟದ ವಿಜಯ ಸಂಕಲ್ಪ, ಈಗ ವಿಜಯ ಸಂಕಲ್ಪ ಯಾತ್ರೆ ಕೈಗೊಳ್ಳಲಾಗಿದೆ. ಎಲ್ಲಾ ಜಿಲ್ಲೆಯಲ್ಲಿ ಮೋರ್ಚಾಗಳ ಸಮ್ಮೇಳನ ಆಗುತ್ತಿದೆ. ನನ್ನ ಪ್ರಕಾರ 224 ಕ್ಷೇತ್ರಗಳಲ್ಲಿ ಒಂದಿಲ್ಲೊಂದು ಸಂಘಟನಾತ್ಮಕ ಕೆಲಸಗಳು ನಡೆಯುತ್ತಿವೆ ಎಂದು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾಡಿರುವ ಕೆಲಸ, ನರೇಂದ್ರ ಮೋದಿಯವರ ಕಾರ್ಯಕ್ರಮ, ನನ್ನ ಕೆಲಸಗಳೂ ಸೇರಿ ದೊಡ್ಡ ಪ್ರಮಾಣದ ಕೆಲಸಗಳಾಗಿವೆ. ಕಳೆದ ಒಂದೂವರೆ ತಿಂಗಳಲ್ಲಿ ನಾವು ಕೈಗೊಂಡಿರುವ ಪ್ರಚಾರಗಳಿಗೆ ಅದ್ಭುತವಾದ ಬೆಂಬಲ ದೊರೆಯುತ್ತಿದ್ದು, ಸಂಪೂರ್ಣವಾದ ಬಹುಮತದಿಂದ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬಿಜೆಪಿಗೆ 65 ಸ್ಥಾನ ಬರುತ್ತದೆ ಎಂದಿದ್ದು, ತಮ್ಮ ಪಕ್ಷಕ್ಕೆ ದೊರೆಯುವ ಸ್ಥಾನ 65 ಎಂದು ಬಹುಶಃ ಹೇಳುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಹಾಲಿ ಶಾಸಕರಿಗೆ ಟಿಕೆಟ್ ತಪ್ಪಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿ ಹಾಗೇನಿಲ್ಲ. ಹಲವಾರು ಆಯಾಮಗಳಲ್ಲಿ ಸಮೀಕ್ಷೆ ಮಾಡಿ ಅದರ ಆಧಾರದ ಮೇಲೆ ತೀರ್ಮಾನ ಮಾಡಲಾಗುತ್ತದೆ. ಒಂದೇ ಬಾರಿಗೆ ಟಿಕೆಟ್ ತಪ್ಪುತ್ತದೆ ಎಂದು ಹೇಳುವುದು ಅಥವಾ ಎಲ್ಲರಿಗೂ ಸಿಗಲಿದೆ ಎನ್ನುವುದು ರಾಜಕಾರಣದಲ್ಲಿ ಸರಿಯಲ್ಲ ಎಂದರು.

ರೆಡ್ಡಿ ತೀರ್ಮಾನಿಸಲಿ: ಜನಾರ್ದನ ರೆಡ್ಡಿಯವರು ಬಿಜೆಪಿಗೆ ಪುನಃ ಸೇರ್ಪಡೆಯಾಗುವ ಬಗ್ಗೆ ಪ್ರತಿಕ್ರಿಯೆ ನೀಡಿ, ಅವರು ಇನ್ನೂ ತಮ್ಮ ತೀರ್ಮಾನವನ್ನು ಪ್ರಕಟ ಮಾಡಿಲ್ಲ. ಮೂರು ದಶಕಗಳಿಂದ ರಾಜಕಾರಣದಲ್ಲಿದ್ದಾರೆ. ಅವರ ನಿರ್ಣಯವನ್ನು ಅವರು ತೆಗೆದುಕೊಳ್ಳುತ್ತಾರೆ. ಅವರು ಮತ್ತು ಬಿಜೆಪಿಗೆ ಹಳೆ ಸಂಬಂಧವಿರುವುದು ಸತ್ಯ. ಸೂಕ್ತ ನಿರ್ಧಾರ ತೆಗೆದುಕೊಳ್ಳುವ ವಿಶ್ವಾಸವಿದೆ ಎಂದರು.

ನಾಳೆ ಜಗದ್ಗುರು ರೇಣುಕಾಚಾರ್ಯ ಜಯಂತಿ

ಮೈಸೂರು,ಮಾ.10–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಾ.12 ರಂದು ಸಂಜೆ 5 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಅರಮನೆ ಜಪದಕಟ್ಟೆ ಮಠದ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸುವರು. ಮುಖ್ಯ ಅತಿಥಿಗಳಾಗಿ ಪಾಲಿಕೆ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ. ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್ ಕುಮಾರ್, ಹೆಚ್.ಪಿ. ಮಂಜುನಾಥ್, ಎಸ್.ಎ. ರಾಮದಾಸ್, ಡಾ.ಯತೀಂದ್ರ ಎಸ್, ಅನಿಲ್ ಕುಮಾರ್ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ. ಮಾದೇಗೌಡ ಹಾಗೂ ವಿವಿಧ ನಿಗಮ–ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ. ಡಿ. ಸುದರ್ಶನ್ ತಿಳಿಸಿದ್ದಾರೆ.

ಬಣಜಿಗ ವಿದ್ಯಾರ್ಥಿ ನಿಲಯದಲ್ಲಿ ಕೈವಾರ ತಾತಯ್ಯ ಜಯಂತ್ಯೋತ್ಸವ ಆಚರಣೆ



ಮೈಸೂರು, ಮಾ. 10–ಒಂದು ಸಾಧಾರಣ ಸಂಸಾರದಲ್ಲಿದ್ದು, ಓರ್ವ ಬಳೆ ವ್ಯಾಪಾರಿಯಾಗಿ ಜೀವನ ಸಾಗಿಸುತ್ತಾ, ನಂತರದ ದಿನಗಳಲ್ಲಿ ಸಂಸಾರ ತ್ಯಜಿಸಿ, ಸನ್ಯಾಸ ಸ್ವೀಕರಿಸಿ ಸಮಾಜವನ್ನು ಅಧ್ಯಾತ್ಮಿಕ ಮಾರ್ಗಕ್ಕೆ ಕೊಂಡೊಯ್ಯುವ ಕೆಲಸದಲ್ಲಿ ತೊಡಗಿಸಿಕೊಂಡ ಕೈವಾರ ಯೋಗಿ ನಾರಾಯಣ ಯತೀಂದ್ರರ ಜೀವನ ಒಂದು ಅದ್ಭುತ ಪವಾಡ ಎಂದು ಅರಗು ಮತ್ತು ಬಣ್ಣದ ಕಾರ್ಖಾನೆಯ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಬಣಜಿಗ(ಬಲಿಜ) ವಿದ್ಯಾರ್ಥಿನಿಲಯದಲ್ಲಿ ಏರ್ಪಡಿಸಿದ್ದ ಕೈವಾರ ತಾತಯ್ಯನವರ 297ನೇ ಜಯಂತೋತ್ಸವ ಸಮಾರಂಭವನ್ನು ತಾತಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ, ಮಾತನಾಡಿದರು. ಬಳೆಗಾರರ ವೃತ್ತಿ ನಿರತರಾಗಿದ್ದ ತಾತಯ್ಯನವರು ಕವಿಯಾಗಿ, ಸಮಾಜಮುಖಿ ಚಿಂತಕರಾಗಿ, ಸಾಮಾಜಿಕ ಪಿಡುಗುಗಳನ್ನು ಪರಿಹರಿಸಿದ ಹರಿಕಾರನಾಗಿ ಕೈವಾರ ನಾರಾಯಣಪ್ಪ ಸಾರ್ಥಕತೆಯನ್ನು ಕಂಡಿದ್ದಾರೆ.

ಕಾಲಜ್ಞಾನ, ನಾರಾಯಣ ಕವಿ ಶತಕ, ಸೂಕ್ಷ್ಮ ಭೀಮ ಲಿಂಗ ಶತಕ ಮತ್ತು ಪ್ರಪಂಚ ನಾರಾಯಣ ಕವಿ ಪದ್ಯಗಳು ತಾತಯ್ಯನವರು ಬರೆದಿರುವ ಪ್ರಮುಖ ಕೃತಿಗಳು. ಇವು ಆಧ್ಯಾತ್ಮಿಕ ವಿಚಾರಗಳನ್ನು ಪರಕೀಯರ ದಬ್ಬಾಳಿಕೆ, ಸ್ವಾರ್ಥಿಗಳಿಂದ ಸಮಾಜದ ಮೇಲಾಗುವ ಪರಿಣಾಮ ಹಾಗೂ ಅತಿಯಾದ ಸಂಪತ್ತಿನ ಕ್ರೋಢೀಕರಣ ದೆಸೆಯಲ್ಲಿ ಕೆಡುವ ಸಮಾಜದ ಸ್ವಾಸ್ಥ್ಯ ಕುರಿತಾದ ವಿಚಾರಧಾರೆ ಒಳಗೊಂಡಿವೆ. ಕೆ.ಸಿ.ಪ್ರಕಾಶ್ ಕಿತ್ತೂರು ಮಾತನಾಡಿ ಸರಳ ಜೀವನದ ಬಗ್ಗೆ ತಾತಯ್ಯನವರು ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ ಎಂದರು.


ನಿವೃತ್ತ ಪ್ರಾಂಶುಪಾಲ ವಿಜಯ್‌ಕುಮಾರ್, ಸಂಘದ ಅಧ್ಯಕ್ಷ ಎಂ.ನಾರಾಯಣ್, ಪ್ರಧಾನ ಕಾರ್ಯದರ್ಶಿ ಎಚ್.ಆರ್. ಗೋಪಾಲಕೃಷ್ಣ, ಖಜಾಂಚಿ ಕೆ.ಚಂದ್ರಶೇಖರ್, ಲೆಕ್ಕ ಪರಿಶೋಧಕ ಡಿ.ನಾಗರಾಜ್, ನಿರ್ದೇಶಕ ಎಚ್.ಕೆಜಗನ್ನಾಥ್, ಎನ್.ವಿಜಯ್‌ಕುಮಾರ್, ಕೆ.ಸಿ.ಪ್ರಕಾಶ್, ಪಾರ್ಥಸಾರಥಿ, ಟಿ.ಎಸ್. ರಮೇಶ್, ಹೆಚ್.ಎ.ಜಗದೀಶ, ಎಚ್.ಆರ್. ವೆಂಕಟೇಶ್ ಇತರರು ಭಾಗವಹಿಸಿದ್ದರು.

ನಿರ್ವಹಣಾ ಸಮಿತಿ ಸಂಚಾಲಕರಾಗಿ ಶೋಭ ಕರಂದ್ಲಾಜೆ ನೇಮಕದಿಂದ ಪ್ರಯೋಜನವಿಲ್ಲ

ಮೈಸೂರು, ಮಾ. 10–ರಾಜ್ಯ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ನಿರ್ವಹಣಾ ಸಮಿತಿ ಸಂಚಾಲಕರಾಗಿ ಶೋಭಾ ಕರಂದ್ಲಾಜೆ ನೇಮಕದಿಂದ ಬಿಜೆಪಿ ಪಕ್ಷಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಸವರಾಜ್ ಬೊಮ್ಮಾಯಿ ಅವರು ಯಾವುದೇ ಕಾರ್ಯಕ್ರಮಗಳನ್ನು ಜನತೆಗೆ ನೀಡಿಲ್ಲ. ಈಗಾಗಲೇ ವಿಜಯ ಸಂಕಲ್ಪ ಯಾತ್ರೆಯಲ್ಲಿ ಜನ ಭಾಗವಹಿಸುತ್ತಿಲ್ಲ. ಸರ್ಕಾರಿ ಹಣದಲ್ಲಿ ಸರ್ಕಾರದ ಸೌಲಭ್ಯಗಳನ್ನು ನೀಡಲು ವಿಜಯ ಸಂಕಲ್ಪ ಯಾತ್ರೆ ಉಪಯೋಗಿಸಿಕೊಂಡರು ಜನತೆ ಕಾರ್ಯಕ್ರಮವನ್ನು ತಿರಸ್ಕರಿಸಿದ್ದಾರೆ. ಇದೀಗ ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡಿರುವುದು ಬಿಜೆಪಿ ಅಧಃಪತನಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷವು ಈಗಾಗಲೇ ಉಚಿತ 200 ಯೂನಿಟ್ ವಿದ್ಯುತ್ ಯೋಜನೆಯ ಗೃಹ ಭಾಗ್ಯ, ಸಂಕಷ್ಟದಲ್ಲಿರುವ ಜನತೆಯ ನೆಮ್ಮದಿ ಬದುಕಿಗೆ ರೂ.2000 ಪ್ರತಿ ತಿಂಗಳ ಹಣ ಗೃಹಲಕ್ಷ್ಮಿ, ತಿಂಗಳಿಗೆ ಹತ್ತು ಕೆಜಿ ಅಕ್ಕಿ ಅನ್ನಭಾಗ್ಯ ಯೋಜನೆ ನೀಡುವ ಬಗ್ಗೆ ಗ್ಯಾರಂಟಿ ಕಾರ್ಡ್ ವಿತರಣೆಗೆ ಜನ ಮೆಚ್ಚಿದ್ದಾರೆ. ಚುನಾವಣೆಗೆ ಮೊದಲೇ ಗ್ಯಾರಂಟಿ ಕಾರ್ಡ್ ವಿತರಣೆ ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಮೈಲಿ ಗಲ್ಲಾಗಿದೆ. ಇಂತಹ ದೃಢಸಂಕಲ್ಪವನ್ನು ರಾಜ್ಯದ ಜನತೆಗೆ ಮುಟ್ಟಿಸುವಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಯಶಸ್ವಿಯಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.3.2023 ಶನಿವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಮಹಾಭಿಷೇಕ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಬೆಳಗ್ಗೆ 8 ರಿಂದ ಮುಖ್ಯ ಪ್ರಾಣದೇವರಿಗೆ ಬೆಣ್ಣೆ ಅಲಂಕಾರ, ಮಧು ಅಭಿಷೇಕ ಹಾಗೂ ಹೂವಿನ ಅಲಂಕಾರ, ಸ್ಥಳ: ಶ್ರೀ ಗಣಪತಿ, ನವಗ್ರಹ ಹಾಗೂ ಅಶ್ವತ್ಥವೃಕ್ಷ ಸನ್ನಿಧಾನ, ಕೆ.ಆರ್.ಎಸ್. ರಸ್ತೆ, ಯಾದವಗಿರಿ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪೈಲೋನೈಡಲ್ ಸೈನಸ್ ಮತ್ತು ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಮೈಂಡ್ ಅಂಡ್ ಮ್ಯಾಟರ್ ಚಾರಿಟಬಲ್ ಟ್ರಸ್ಟ್ :** ಮೆಂಟರ್‌ಶಿಪ್ ತರಬೇತಿ ಕಾರ್ಯಕ್ರಮ, ಅಧ್ಯಕ್ಷತೆ : ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್, ಅತಿಥಿಗಳು: ನಿಮ್ಹಾನ್ಸ್ ಪ್ರಾಧ್ಯಾಪಕ ಡಾ. ಇ. ಅರವಿಂದ್‌ರಾಜ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ಕಾನೂನು ಕಾಲೇಜು :** ಭಾರತದಲ್ಲಿ ಮಾಹಿತಿ ತಂತ್ರಜ್ಞಾನದ ಕಾನೂನು : ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ನ್ಯಾಷನಲ್ ಲಾ ಯೂನಿವರ್ಸಿಟಿ ನಿವೃತ್ತ ಕುಲಪತಿ ಪ್ರೊ. ಜೆ.ಎಸ್. ಪಾಟೀಲ್, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಸ್. ನಟರಾಜು, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 9.30ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು :** ರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಸು. ರಾಮಣ್ಣ, ಅಧ್ಯಕ್ಷತೆ : ಕೆಪಾಸಿಟಿ ಬಿಲ್ಡಿಂಗ್ ಮಿಷನ್ ಮಾನವ ಸಂಪನ್ಮೂಲಗಳ ಸದಸ್ಯ ಡಾ. ಬಾಲಸುಬ್ರಮಣ್ಯಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ನೂತನವಾಗಿ ನೇಮಕಗೊಂಡ ನ್ಯಾಯಾಧೀಶರು, ಎಪಿಪಿಗಳಿಗೆ ಸನ್ಮಾನ ಸಮಾರಂಭ, ಉದ್ಘಾಟನೆ :ಹೈಕೋರ್ಟ್ ನ್ಯಾಯಾಧೀಶ ಬಿ.ಎಂ. ಶ್ಯಾಮ್‌ಪ್ರಸಾದ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾನೂನು ವಿಭಾಗದ ಹೆಚ್ಚುವರಿ ಕಾರ್ಯದರ್ಶಿ–1 ಸಂತೋಷ್ ಗಜಾನನ ಭಟ್, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–77, ತಿಂಗಳ ಸಾಧಕರು ಧೈರ್ಯವಂತ ವಿಕಲಚೇತನೆ ಶ್ರೀಮತಿ ಸುಮಿತ್ರ, ಮುಖ್ಯ ಅತಿಥಿಗಳು: ಡಾ.ಸುಜಾತ ಭಾಸ್ಕರ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು: ಕೆ.ಆರ್. ಹೇಮಲತಾ, ರೇಣುಕ, ರೇಖಾ, ಎನ್. ಜಯಶ್ರೀ, ಟಿ.ಎಸ್. ರೋಹಿಣಿ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ವಿಜ್ಞಾನ ದಿನಾಚರಣೆ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಮಹಾವಿದ್ಯಾಲಯ ಶೈಕ್ಷಣಿಕ ಸಂಯೋಜಕ ಡಾ. ಎಂ.ಆರ್. ಜಯಪ್ರಕಾಶ್, ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಮಾಜ ಕಾರ್ಯ ಅಧ್ಯಯನ ವಿಭಾಗ :** ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧ ವಿತರಣೆ ಕಾರ್ಯಕ್ರಮ, ಮಹಿಳಾ ಆರೋಗ್ಯ ಕುರಿತು ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಅತಿಥಿಗಳು: ಉಪ ಪೊಲೀಸ್ ಆಯುಕ್ತೆ ಎಸ್.ಜಾಹ್ನವಿ, ವಿಶೇಷ ಉಪನ್ಯಾಸ: ಸ್ತ್ರೀ ರೋಗ ತಜ್ಞೆ ಡಾ.ರೂಪ ಪ್ರಕಾಶ್, ಅಧ್ಯಕ್ಷತೆ: ಸಮಾಜ ಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ.ಹೆಚ್.ಪಿ.ಜ್ಯೋತಿ, ಉಪಸ್ಥಿತರು: ಎಸ್.ಇ. ಗಿರೀಶ್, ಡಾ. ಚಂದ್ರಮೌಳಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ರಾಜಸ್ಥಾನ್ ಸಮಸ್ತ ಸಂಸ್ಥೆಗಳು :** ಶ್ರೀಮದ್ ಭಾಗವತ ಕಥಾ ಪ್ರವಚನ–ಸಪ್ತಾಹ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ರಾಜಸ್ಥಾನ ಜೋಧ್‌ಪುರ್‌ನ ಶ್ರೀ ಗುರುಕೃಪ ಆಶ್ರಮದ ಶ್ರೀ ರಾಮರಾಮ್‌ಜಿ ಮಹಾರಾಜ್, ಪ್ರವಚನಕಾರರು : ಸಂತಶ್ರೀ ಕೃಪಾರಾಮ್‌ಜಿ ಮಹಾರಾಜ್, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಸೀರ್ವಿ ಸಮಾಜ, ಕೆ.ಆರ್.ಎಸ್. ರಸ್ತೆ, ಮಧ್ಯಾಹ್ನ 12.30ಕ್ಕೆ.

■ **ಗಾನವೈದ್ಯಲೋಕ:** ವಾರ್ಷಿಕೋತ್ಸವದ ಅಂಗವಾಗಿ ಗಾನ ಸವಿಸಂಜೆ ಎಂದೂ ಮರೆಯದ ಹಾಡು–4, ಉದ್ಘಾಟನೆ: ಹಿರಿಯ ರಂಗಕರ್ಮಿ ಪ್ರೊ.ಸಿ.ವಿ.ಶ್ರೀಧರಮೂರ್ತಿ, ಅಧ್ಯಕ್ಷತೆ: ಗಾನವೈದ್ಯಲೋಕ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಪ್ರಾಸ್ತಾವಿಕ ನುಡಿ: ಗಾನ ವೈದ್ಯಲೋಕ ಅಧ್ಯಕ್ಷ ಡಾ. ಟಿ.ರವಿಕುಮಾರ್, ಮುಖ್ಯ ಅತಿಥಿಗಳು: ಹಿರಿಯ ಲೇಖಕ ಎಂ.ಎಲ್. ರಮೇಶ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಅಮೃತ ವಿಶ್ವ ವಿದ್ಯಾಪೀಠಂ :** ಸಿನಿರಮಾ–2023, ರಾಷ್ಟ್ರ ಮಟ್ಟದ ಕಿರು ಚಲನಚಿತ್ರೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು: ಕನ್ನಡ ಚಲನಚಿತ್ರ ನಟ ಡಾಲಿ ಧನಂಜಯ, ಡಿಆರ್‌ಸಿ ಮಲ್ಟಿಪ್ಲೆಕ್ಸ್ ಸಿನಿಮಾಸ್ ಮಾಲೀಕರಾದ ಶ್ರೀಮತಿ ವೈಶಾಲಿ ಹನುಮಂತ್ ಮತ್ತು ಹನುಮಂತ್, ಅಧ್ಯಕ್ಷತೆ : ಅಮೃತ ವಿಶ್ವವಿದ್ಯಾಪೀಠಂ ಪ್ರಿನ್ಸಿಪಾಲ್ ಡಾ. ಜಿ. ರವೀಂದ್ರನಾಥ್, ವಿದ್ಯಾಪೀಠಂ ನಿರ್ದೇಶಕ ಅನಂತನಂದ ಚೈತನ್ಯ, ಕರೆಸ್ಪಾಂಡೆಂಟ್ ಮುಕ್ತಿದಾಮೃತ ಚೈತನ್ಯ, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ, ಬೆಳಗ್ಗೆ 11.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವ್ಯವಸ್ಥಾಪಕರು :** ಪಂಡಿತ್ ಸರೋಜ್ ಮುಖರ್ಜಿ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಸಯಾನ್ ಘೋಷ್ ಅವರಿಂದ ಸಿತಾರ್ ವಾದನ, ಪಂಡಿತ್ ರಮೇಶ್ ಧನ್ನೂರ್–ತಬಲ, ಸ್ಥಳ: 192, 2ನೇ ಮುಖ್ಯ ರಸ್ತೆ, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಸಂಗೀತ ವಿದ್ವಾನ್ ಜಿ.ಕೆ. ಮನಮೋಹನ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಕಲಾಸುರುಚಿ ಮತ್ತು ಕುತೂಹಲಿ :** ಸೈನ್ಸ್ ಸಂಜೆ ಕಾರ್ಯಕ್ರಮ, ಪ್ರೊ ಕೆ.ಎಸ್. ಮಲ್ಲೇಶ್ ಅವರಿಂದ "ಕ್ವಾಂಟಮ್ ಭೌತಶಾಸ್ತ್ರದ ಇತಿಹಾಸ" ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.

ಸಜ್ಜೆಹುಂಡಿಯಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ :** ಶ್ರೀ ಶನೇಶ್ವರಸ್ವಾಮಿ ಆರಾಧನಾ ಹಾಗೂ ಮಂಟಪೋತ್ಸವ ಸಮಾರಂಭ, ಬೆಳಗ್ಗೆ 4 ಗಂಟೆಯಿಂದ ಶ್ರೀ ಸ್ವಾಮಿಗೆ ಏಕಾವಾರ ರುದ್ರಾಭಿಷೇಕ, ಪ್ರಾಕಾರ ಹೋಮಾದಿಯಾಗಿ ಕುಂಭಾಭಿಷೇಕ, ಕಳಾಹೋಮ, ನವಗ್ರಹ ಪರಸ್ಪರ ಶ್ರೀ ಶನೇಶ್ವರಸ್ವಾಮಿ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಬೆಳಗ್ಗೆ 10.30 ರಿಂದ ಶ್ರೀ ಶನೇಶ್ವರಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ಶನಿಪ್ರಭಾವ ಅಥವಾ ರಾಜಾವಿಕ್ರಮ ಪೌರಾಣಿಕ ನಾಟಕ ಪ್ರದರ್ಶನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ–ಸಿಎಫ್‌ಟಿಆರ್‌ಐ ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಮೇಲುಕೋಟೆಯ ಜನಪದ ಟ್ರಸ್ಟ್‌ನ ಸಂತೋಷ್ ಕೌಲಗಿ ಅವರೊಂದಿಗೆ ಸಂವಾದ ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಪಿ. ಸುರಭಿ–ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಜಯಮ್ಮ ಮತ್ತು ತಂಡ–ತತ್ವಪದಗಳು, 1.20 ಭಾವಗೀತೆ–ಶಾಂತಲಾ ಎಲ್.ರಾವ್, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಹಾಡುವ ಪ್ರತಿಭೆ ಪ್ರಜ್ಞಾ ಜೆ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ, 4.30 ನೆನಪಿನಂಗಳ–ಪ್ರೊ.ಎಸ್.ವಿ. ರಂಗಣ್ಣನವರ ಬದುಕು ಬರಹ ಕುರಿತ ವಿಚಾರ ಸಂಕಿರಣದಲ್ಲಿ ಡಾ. ಸಿ.ಪಿ.ಕೃಷ್ಣಕುಮಾರ್ ಅವರ ಭಾಷಣದಿದ ಆಯ್ದ ಭಾಗಗಳು, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ನಿರ್ಮಲ್ಯದೇವ್, ದ್ರುಪದ್, ಧಮಾರ್



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 11 ಶನಿವಾರ 2023

ಸಂಪುಟ: 43 | ಸಂಚಿಕೆ: 321 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ನನ್ನ ಬೆಂಬಲ ಪ್ರಧಾನಿ ಮೋದಿ, ಬಿಜೆಪಿಗೆ

● ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಕೊನೆಗೂ 'ನೆಲೆ' ನಿರ್ಧಾರ ● ಕಾನೂನಾತ್ಮಕ ಕಾರಣಗಳಿಂದಾಗಿ ಬಿಜೆಪಿಗೆ ಅಧಿಕೃತ ಸೇರ್ಪಡೆ ಇಲ್ಲ

ಮಂಡ್ಯ, ಮಾ.10–ಮಂಡ್ಯ ಪಕ್ಷೇತರ ಸಂಸದೆ ಸುಮಲತಾ ಅವರು ತಾವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ಬೆಂಬಲಿಸುವುದಾಗಿ ಘೋಷಿಸಿದ್ದಾರೆ. ತಾವು ಪಕ್ಷೇತರ ಸಂಸದೆಯಾಗಿದ್ದು, ರಾಜಕೀಯ ಪಕ್ಷ ಸೇರ್ಪಡೆಗೆ ತಾಂತ್ರಿಕ ಸಮಸ್ಯೆ ಇರುವ ಕಾರಣ ಬಿಜೆಪಿಗೆ ಸೇರ್ಪಡೆಯಾಗದೆ ಬೆಂಬಲ ಘೋಷಿಸಿರುವುದಾಗಿ ಅವರು ಹೇಳಿದರು.

ಮಂಡ್ಯದ ಚಾಮುಂಡೇಶ್ವರಿ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಸುದೀರ್ಘ ಕಾಲ ತಮ್ಮ ಪತಿ ಅಂಬರೀಷ್ ಜೊತೆ ರಾಜಕೀಯ ಮಾಡಿದ ಜಿಲ್ಲೆಯ ಸಾವಿರಾರು ಅಭಿಮಾನಿಗಳು ಹಾಗೂ ಬೆಂಬಲಿಗರು ಅನಾಥರಾಗಬಾರದೆಂದು ಅವರ ಒತ್ತಡಕ್ಕೆ ಮಣಿದು ರಾಜಕಾರಣಕ್ಕೆ ಬಂದು ಪಕ್ಷೇತರಳಾಗಿ ಗೆದ್ದಿದ್ದೇನೆ. ಇದೀಗ ಅವರಿಗೂ ಒಂದು ದಾರಿ ಮಾಡಬೇಕು. ಅದಕ್ಕಾಗಿ ಕಳೆದ ಒಂದು ವರ್ಷದಿಂದ ಸುದೀರ್ಘ ಸಭೆಗಳು ಹಾಗೂ ಆಪ್ತರೊಂದಿಗೆ ಸಮಾಲೋಚನೆ ನಡೆಸಿ ಬಿಜೆಪಿ ಆಯ್ಕೆ ಮಾಡಿದ್ದೇನೆ ಎಂದರು. ವಿಶ್ವ ಮಟ್ಟದಲ್ಲಿ ನಾನೊಬ್ಬ ಭಾರತೀಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಕೆಲಸಗಳನ್ನು ಪ್ರಧಾನಿ ಮೋದಿ ಮಾಡುತ್ತಿದ್ದಾರೆ. ದೇಶ ಹಾಗೂ ರಾಜ್ಯದಲ್ಲಿ ಸುಸ್ಥಿರ ಸರ್ಕಾರ ಮೋದಿಯಿಂದ ಮಾತ್ರ ಸಾಧ್ಯವಿದ್ದು, ದೇಶಕ್ಕೆ ಅಭಿವೃದ್ಧಿಯ ನಾಯಕತ್ವ ಬೇಕಾಗಿದೆ. ಅದಕ್ಕಾಗಿ ನಾನು ಮೋದಿ ಅವರನ್ನು ಬೆಂಬಲಿಸಬೇಕು ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಸ್ವಚ್ಛತಾ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಹಾಗೇ ಮಂಡ್ಯ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕಲುಷಿತವಾಗಿರುವ ▶ 7ನೇ ಪುಟಕ್ಕೆ

ಸುದ್ದಿಗೋಷ್ಠಿಯ ಮುಖ್ಯಾಂಶಗಳು

- ಮಂಡ್ಯ ಅಭಿವೃದ್ಧಿಗಾಗಿ ನನ್ನ ಈ ನಿರ್ಧಾರ
- ಮೋದಿಯವರ ಸ್ವಚ್ಛತಾ ಅಭಿಯಾನದಂತೆ ಮಂಡ್ಯದಲ್ಲಿ ರಾಜಕೀಯ ಸ್ವಚ್ಛತಾ ಅಭಿಯಾನ ಅಗತ್ಯ.
- ನನ್ನನ್ನು ಬೆಂಬಲಿಸಿದ್ದು ಕಾಂಗ್ರೆಸ್ ಅಲ್ಲ, ಕಾರ್ಯಕರ್ತರು.
- ಪ್ರಾಣ ಬಿಡುತ್ತೇನೆಯೇ ಹೊರತು ಮಂಡ್ಯ ಬಿಡಲ್ಲ.
- ಪಕ್ಷ ಒಪ್ಪಿದರೆ ರಾಜ್ಯ ರಾಜಕಾರಣಕ್ಕೆ ಬರುವೆ.
- ನಾನಿರುವವರೆಗೂ ಅಭಿಷೇಕ್ ರಾಜಕೀಯಕ್ಕೆ ಬರಲ್ಲ.


ಸುದ್ದಿಗೋಷ್ಠಿಯಲ್ಲಿ ಮಂಡ್ಯ ಸಂಸದೆ ಸುಮಲತಾ ಅಂಬರೀಶ್

ದೊಡ್ಡವರು ದೊಡ್ಡ ಪಕ್ಷ ಸೇರಿದ್ದಾರೆ



ಹಾಸನ, ಮಾ.10– ಅವರು (ಸುಮಲತಾ ಅಂಬರೀಶ್) ಬಹಳ ದೊಡ್ಡವರಿದ್ದಾರೆ. ಹೀಗಾಗಿ, ದೊಡ್ಡ ಪಕ್ಷಕ್ಕೆ ಸೇರಿದ್ದಾರೆ. ಅವರ ಬಗ್ಗೆ ಮಾತನಾಡುವಷ್ಟು ದೊಡ್ಡಮಟ್ಟಕ್ಕೆ ನಾನು ಬೆಳೆದಿಲ್ಲ ಎಂದು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ. ಮಂಡ್ಯ ಪಕ್ಷೇತರ ಸಂಸದೆ ಸುಮಲತಾ ಅಂಬರೀಶ್ ಬಿಜೆಪಿ ಪಕ್ಷಕ್ಕೆ ಬೆಂಬಲ ಸೂಚಿಸಿರುವ ಬಗ್ಗೆ ಹಾಸನದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ, ನಮ್ಮ ಭದ್ರಕೋಟೆಯಲ್ಲಿ ಅವರು ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ, ಮಂಡ್ಯ ಜನತೆ ಪರವಾಗಿ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ. ಮಂಡ್ಯ ಅಭಿವೃದ್ಧಿಗೆ ಹಣ ತಂದಿದ್ದೇನೆ ಎಂದಿದ್ದಾರೆ. ಅವರು ಅನುದಾನ ತಂದಿದ್ದರೆ ಅದನ್ನು ಮಂಡ್ಯ ಜಿಲ್ಲೆಯ ಜನ ಹೇಳಬೇಕು. ಈ ಬಗ್ಗೆ ನಾನು ಏನನ್ನೂ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಸುಮಲತಾ ಬಿಜೆಪಿ ಸೇರ್ಪಡೆ ವಿಷಯ ಯಾರಿಗೂ ಅಚ್ಚರಿ ಮೂಡಿಸುವ ಸುದ್ದಿ ಅಲ್ಲ. ಇದಕ್ಕೆ ಪ್ರಾಮುಖ್ಯತೆ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದಾರೆ.

ಭದ್ರಕೋಟೆಗೆ ಏನು ಕೊಡುಗೆ ನೀಡಿದ್ದಾರೆ!

● ಕುಟುಂಬ ರಾಜಕಾರಣ ಪ್ರಸ್ತಾಪಿಸಿ 'ದಳಪತಿ'ಗಳ ವಿರುದ್ಧ ಸುಮಲತಾ ವಾಗ್ದಾಳಿ ● ಕೆ.ಆರ್.ನಗರ, ಪಾಂಡವಪುರ, ಶ್ರೀರಂಗಪಟ್ಟಣದಲ್ಲಿ ನನ್ನ ಮೇಲೆ ಹಲ್ಲೆ ಯತ್ನ ನಡೆಯಿತು ● ಆರು ಜನ ಶಾಸಕರಿದ್ದರೂ ಮಂಡ್ಯ ಏಕೆ ಅಭಿವೃದ್ಧಿ ಆಗಿಲ್ಲ?

ಮಂಡ್ಯ, ಮಾ.10–ಬಿಜೆಪಿಗೆ ಬೆಂಬಲ ಘೋಷಿಸಿದ ಸುದ್ದಿಗೋಷ್ಠಿಯಲ್ಲಿ ಸಂಸದೆ ಸುಮಲತಾ, ಜೆಡಿಎಸ್ ವಿರುದ್ಧ ಹರಿಹಾಯ್ದರು. ಕುಟುಂಬ ರಾಜಕಾರಣದ ಬಗ್ಗೆಯೂ ದಳಪತಿಗಳನ್ನು ಅವರು ಕುಟುಕಿದರು.

ಮಂಡ್ಯ ಜಿಲ್ಲೆ ಭದ್ರಕೋಟೆ... ಭದ್ರಕೋಟೆ ಎಂದು ಹೇಳುತ್ತಿರುವವರು, ತಮ್ಮ ಭದ್ರಕೋಟೆಗೆ ಏನು ಕೊಡುಗೆ ಕೊಟ್ಟಿದ್ದಾರೆ. ಜಿಲ್ಲೆಯ 6 ಕ್ಷೇತ್ರಗಳಲ್ಲಿ ಅವರದೇ ಶಾಸಕರಿದ್ದಾರೆ. ಬಹಳ ವರ್ಷಗಳಿಂದ ಜಿಲ್ಲೆಯನ್ನು ಅವರೇ ಆಳುತ್ತಿದ್ದಾರೆ. ಅಕ್ಕಪಕ್ಕದ ಜಿಲ್ಲೆಗಳು ಅಭಿವೃದ್ಧಿಯಾದಷ್ಟೂ ಇವರ ಭದ್ರಕೋಟೆ ಮಂಡ್ಯ ಜಿಲ್ಲೆ ಯಾಕೆ ಅಭಿವೃದ್ಧಿಯಾಗಿಲ್ಲ ಎಂದು ಪ್ರಶ್ನಿಸಿದರು. ನಿಮ್ಮ ಕುಟುಂಬಕ್ಕೆ ಮಾತ್ರ ಅಧಿಕಾರ ಸಿಕ್ಕಿದರೆ ಸಾಕೇ? ನಿಮ್ಮ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಅಧಿಕಾರ ಬೇಡವೇ? ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೆಸರು ಪ್ರಸ್ತಾಪಿಸದೇ ಪ್ರಶ್ನಿಸಿದ ಅವರು, ನಿರಂತರವಾಗಿ ಮಂಡ್ಯ ಜಿಲ್ಲೆಯಲ್ಲಿ ನಿಮ್ಮ ಪಕ್ಷದ ಶಾಸಕರೇ ಆಯ್ಕೆಯಾಗುತ್ತಿದ್ದಾರೆ. ಹೀಗಿರುವಾಗ ಈ ಜಿಲ್ಲೆಗೆ ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದರು. ▶ 7ನೇ ಪುಟಕ್ಕೆ

ಸುಮಲತಾ ಬೆಂಬಲದಿಂದ ಮಂಡ್ಯದಲ್ಲಿ ನಮಗೆ ದೊಡ್ಡ ಶಕ್ತಿ ಬಂದಿದೆ: ಬೊಮ್ಮಾಯಿ


ಹಾವೇರಿ: ಸಂಸದೆ ಸುಮಲತಾ ಅವರ ಬೆಂಬಲದಿಂದ ನಮಗೆ ಮಂಡ್ಯದಲ್ಲಿ ದೊಡ್ಡ ಶಕ್ತಿ ಬಂದಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹಾವೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಮಲತಾ ಬಿಜೆಪಿ ಸೇರ್ಪಡೆ ವಿಚಾರಕ್ಕೆ ಪ್ರತಿಕ್ರಿಯಿಸಿದ್ದು, ಸುಮಲತಾ ನಮ್ಮ ಪಕ್ಷಕ್ಕೆ ಬೆಂಬಲ ಘೋಷಣೆ ಮಾಡಿರುವುದು ಸಂತೋಷವಾಗಿದೆ. ಆರಂಭದಿಂದಲೂ ಮೋದಿ ಅವರ ಕಾರ್ಯಕ್ರಮಕ್ಕೆ ಬೆಂಬಲ ನೀಡುತ್ತಾ ಬಂದಿದ್ದರು. ಇದೀಗ ಅಧಿಕೃತ ಘೋಷಣೆಯಿಂದ ಮಂಡ್ಯದಲ್ಲಿ ನಮಗೆ ದೊಡ್ಡ ಶಕ್ತಿ ಬಂದಿದೆ ಎಂದು ಹೇಳಿದ್ದಾರೆ. ಇದಕ್ಕೂ ಮುನ್ನ ಹಾವೇರಿಯಲ್ಲಿ ಮಾತನಾಡಿದ ಅವರು, ಮೋದಿ ಪ್ರತಿ ಬಾರಿ ಬಂದಾಗಲೂ ರಾಜ್ಯದ ಮೂಲಸೌಕರ್ಯಗಳಿಗೆ ಹಣ ಕೊಟ್ಟಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳಿಗೂ ಅತೀ ಹೆಚ್ಚು ಹಣ ಕೊಟ್ಟಿದ್ದಾರೆ. ಕಳೆದ 5 ವರ್ಷಗಳಲ್ಲಿ ರಾಜ್ಯಕ್ಕೆ ಅತೀ ಹೆಚ್ಚು ಹಣ ಕೊಟ್ಟಿದ್ದು ಮೋದಿ. ರೈಲ್ವೆ, ಬಂದರು ಇತ್ಯಾದಿ ಕಾರ್ಯಕ್ರಮಗಳಿಗೂ ಹಣ ಕೊಟ್ಟಿದ್ದಾರೆ. ಆದ್ದರಿಂದ ಮೋದಿ ರಾಜ್ಯಕ್ಕೆ ಬಂದಾಗಲೆಲ್ಲಾ ಭೂಮಿಪೂಜೆ ಅಥವಾ ಲೋಕಾರ್ಪಣೆ ಕಾರ್ಯಕ್ರಮ ನಡೆಯುತ್ತಿದೆ ಎಂದು ಮೋದಿ ಅವರ ಗುಣಗಾನ ಮಾಡಿದ್ದಾರೆ. ಈ ಬಾರಿ ಮೋದಿ ಬಂದಾಗ ಐಐಟಿ ಹಾಗೂ ಜಯದೇವ ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸುತ್ತಾರೆ. ಐಐಟಿಗೆ ಹಂತ ಹಂತವಾಗಿ ಹಣ ಕೊಡುತ್ತೇವೆ. ದೇಶದಲ್ಲೇ ಐಐಟಿಯನ್ನು ನಂಬರ್ 1 ಸಂಸ್ಥೆ ಮಾಡಲು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಚುನಾವಣಾ ಪ್ರಚಾರ, ನಿರ್ವಹಣಾ ಸಮಿತಿ ರಚನೆಯಲ್ಲಿ ಬಿಎಸ್‌ವೈ ಮಾತಿಗೆ ವರಿಷ್ಠರ ಮಣೆ

ಪ್ರಚಾರ ಸಮಿತಿಗೆ ಸಿಎಂ ಬೊಮ್ಮಾಯಿ ಅಧ್ಯಕ್ಷರು; ನಿರ್ವಹಣಾ ಸಮಿತಿಗೆ ಶೋಭಾ ಕರಂದ್ಲಾಜೆ ನೇತೃತ್ವ

● ಬಿಎಸ್‌ವೈ ಓಲೈಸಿಕೊಳ್ಳಲು ವರಿಷ್ಠರ ರಾಜಕೀಯ ಚಾಣಾಕ್ಷತೆ
● ಇದೇ ವೇಳೆ ವಿರೋಧಿಗಳ ಸಮಿತಿಯಿಂದ ದೂರವಿಟ್ಟ ಬಿಎಸ್‌ವೈ
● ಪಕ್ಷ ತೊರೆಯಲು ಸಜ್ಜಾಗಿದ್ದವರಿಗೂ ಸಮಿತಿಯಲ್ಲಿ ಸ್ಥಾನ
● ಪ್ರಚಾರ ಸಮಿತಿಯಲ್ಲಿ ಸಂಸದ ಶ್ರೀನಿವಾಸ ಪ್ರಸಾದ್



ಬೆಂಗಳೂರು, ಮಾ.10–(ಕೆಎಂಶಿ) ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಓಲೈಸಿಕೊಳ್ಳಲು ಅವರ ಬೆಂಬಲಿಗರನ್ನೇ ಚುನಾವಣಾ ಪ್ರಚಾರ ಹಾಗೂ ನಿರ್ವಹಣಾ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ಬಿಜೆಪಿ ವರಿಷ್ಠರು ನೇಮಕ ಮಾಡಿದ್ದಾರೆ.

ಯಡಿಯೂರಪ್ಪ ಅವರ ಓಲೈಕೆ ಜತೆಗೆ ಅಸಮಾಧಾನಗೊಂಡು ಒಂದು ಹೆಜ್ಜೆ ಹೊರ ಹಾಕಿದ್ದವರನ್ನು ಪಕ್ಷದಲ್ಲೇ ಉಳಿಸಿಕೊಳ್ಳುವ ಉದ್ದೇಶದಿಂದ ಸಮಿತಿ ರಚನೆಯಲ್ಲಿ ರಾಜಕೀಯ ಚಾಣಾಕ್ಷತನ ಮೆರೆಯಲಾಗಿದೆ. ಇದೇ ಸಮಯದಲ್ಲಿ ತಮ್ಮ ವಿರೋಧಿಗಳನ್ನು ಎರಡೂ ಸಮಿತಿಗಳಿಂದ ದೂರ ಇಡಿಸುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದು, ವಸತಿ ಸಚಿವ ವಿ.ಸೋಮಣ್ಣ ಸೇರಿದಂತೆ ಕೆಲ ಪ್ರಮುಖ ನಾಯಕರನ್ನು ಈ ತಂಡಗಳಿಂದ ಹೊರಗಿಟ್ಟಿದ್ದು ಇದು ಕಮಲ ಪಾಳೆಯದಲ್ಲಿ ಮತ್ತಷ್ಟು ಅಂತಃಕಲಹವನ್ನು ಸೃಷ್ಟಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಪ್ರಚಾರ ಸಮಿತಿ ರಚಿಸಲಾಗಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯನ್ನು ರಚಿಸಿದ್ದಾರೆ. ಬೊಮ್ಮಾಯಿ ಅವರ ನೇತೃತ್ವದ ಸಮಿತಿಯಲ್ಲಿ ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ಸದಸ್ಯರಿದ್ದಾರೆ. ತಂದೆ, ಮಗನಿಗೆ ಮತ್ತೊಂದು ಅಧಿಕಾರ ನೀಡುವ ಮೂಲಕ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅವರನ್ನು ಸಕ್ರಿಯವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಚುನಾವಣಾ ತಂತ್ರ ರೂಪಿಸಿದ್ದಾರೆ. ಮೈತ್ರಿ ಸರ್ಕಾರ ಕೆಡವಿ ಬಿಜೆಪಿ ಸರ್ಕಾರ ಬರಲು ಕಾರಣಕರ್ತರಾದ ರಮೇಶ್ ಜಾರಕಿಹೊಳಿ, ಡಾ. ಕೆ.ಸುಧಾಕರ್, ಎಸ್.ಟಿ.ಸೋಮಶೇಖರ್ ಅವರಿಗೂ ಅವಕಾಶ ಮಾಡಿಕೊಡಲಾಗಿದೆ. ಇವರಷ್ಟೇ ಅಲ್ಲದೆ, ▶ 6ನೇ ಪುಟಕ್ಕೆ



ನಾನು ನಿಂತ ನೀರಲ್ಲ; ಹರಿಯುವ ನೀರು



ಬೆಂಗಳೂರು, ಮಾ.10(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆಗೆ ಬಿಜೆಪಿ ಪ್ರಚಾರ ಹಾಗೂ ನಿರ್ವಹಣಾ ಸಮಿತಿ ಪ್ರಕಟಗೊಳ್ಳುತ್ತಿದ್ದಂತೆ 'ನಾನು ನಿಂತ ನೀರಲ್ಲ, ಹರಿಯುವ ನೀರು' ಎಂದು ಹೇಳುವ ಮೂಲಕ ವಸತಿ ಸಚಿವ ವಿ.ಸೋಮಣ್ಣ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಎರಡು ಸಮಿತಿಗಳಲ್ಲೂ ಯಡಿಯೂರಪ್ಪ ಬೆಂಬಲಿಗರಿಗೆ ಮಣೆ ಹಾಕಿ, ಅವರ ವಿರೋಧಿಗಳನ್ನು ದೂರ ಇಟ್ಟಿರುವುದು, ಸೋಮಣ್ಣ ಸೇರಿದಂತೆ ಕೆಲವರ ಕೆಂಗಣ್ಣಿಗೆ ಕಾರಣವಾಗಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ಹೊಟ್ಟೆಪಾಡಿಗಾಗಿ ನಾನೇನೂ ಮಾಡಬೇಕಿಲ್ಲ. ವದಂತಿ ▶ 6ನೇ ಪುಟಕ್ಕೆ

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ನಾವೇ ಮಾಡಿದ್ದು... ಇದು ನಮ್ಮದು...!

ಪ್ರಧಾನಿ ಮೋದಿ, ಬಿಜೆಪಿಗೆ ಪೂರ್ಣ ಕ್ರೆಡಿಟ್

● ಸಂಸದ ಪ್ರತಾಪ್‌ಸಿಂಹ ಬಲವಾದ ಪ್ರತಿಪಾದನೆ
● ಕಚೇರಿಯಿಂದ ಕಚೇರಿಗೆ ಅಲೆದು ಹಣ ಮಂಜೂರು ಮಾಡಿಸಿದ್ದೇನೆ

ಮೈಸೂರು: ಮೈಸೂರು–ಬೆಂಗಳೂರು ಹೆದ್ದಾರಿಯ ಕ್ರೆಡಿಟ್ ಸಂಪೂರ್ಣವಾಗಿ ಪ್ರದಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಗೆ ಸಲ್ಲಬೇಕು ಎಂದು ಸಂಸದ ಪ್ರತಾಪ್‌ಸಿಂಹ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅದನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಲೋಕೋಪಯೋಗಿ ಹಾಗೂ ಹೆದ್ದಾರಿ ಪ್ರಾಧಿಕಾರ ಮಾಡುತ್ತಿತ್ತು. ಡಿಪಿಆರ್ ಅನ್ನೂ ಸಂಸ್ಥೆ ಅಥವಾ ಏಜೆನ್ಸಿ ಮಾಡುತ್ತದೆ. ಈ ಡಿಪಿಆರ್‌ಗೆ ಯಾವ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಹಾಗೂ ಸಂಸದರ ಅನುಮತಿ ಅಗತ್ಯವಿಲ್ಲ. ಸಲ್ಲಿಕೆಯಾದ ಡಿಪಿಆರ್ ಅನ್ನು ಜಾರಿಗೊಳಿಸುವ ಬದ್ಧತೆ ಹಾಗೂ ಜವಾಬ್ದಾರಿ ಜನ ಪ್ರತಿನಿಧಿಗಳಿಗೆ ಇರಬೇಕು. ಈ ಹೆದ್ದಾರಿಯ ಡಿಪಿಆರ್ ಅನ್ನು ಕಚೇರಿಯಿಂದ ಕಚೇರಿಗೆ ಅಲೆದು, ಹುಡುಕಿಸಿ, ಅದಕ್ಕೆ ಹಣ ಮಂಜೂರು ▶ 6ನೇ ಪುಟಕ್ಕೆ



ಸುಮಲತಾ ಬೆಂಬಲದಿಂದ ಮಂಡ್ಯದಲ್ಲಿ ಬಿಜೆಪಿಗೆ ಮತ್ತಷ್ಟು ಬಲ

ಮೈಸೂರು, ಮಾ.10(ಎಂಟಿವೈ)– ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಬಿಜೆಪಿ ಬೆಂಬಲಿಸಿರುವುದರಿಂದ ಮಂಡ್ಯದಲ್ಲಿ ಬಿಜೆಪಿ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಸಂಸದ ಪ್ರತಾಪ ಸಿಂಹ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬರೀಷ್ ಅವರು ಹಿರಿಯ ನಟ ಮಾತ್ರವಲ್ಲದೆ, ಪ್ರಭಾವಿ ರಾಜಕೀಯ ನಾಯಕರೂ ಆಗಿದ್ದರು. ಅವರು ತಾವಿದ್ದ ಪಕ್ಷ ಅವಮಾನ ಮಾಡಿತು ಎಂದು ಮತ್ತೊಂದು ಪಕ್ಷಕ್ಕೆ ಬೆಂಬಲ ನೀಡಿದ್ದರು. ಅಂಬರೀಷ್ ಅವರಂತೆ ಸುಮಲತಾ ಅಂಬರೀಷ್ ಅವರು ಮಂಡ್ಯದಲ್ಲಿ ಪ್ರಭಾವ ಹೊಂದಿದ್ದಾರೆ. ಅವರಿಗೆ ಅಪಾರ ಅಭಿಮಾನಿಗಳಿದ್ದಾರೆ. ಈಗ ಸುಮಲತಾ ಅವರು ಬಿಜೆಪಿ ▶ 6ನೇ ಪುಟಕ್ಕೆ

ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಕ್ಕೆ ಬ್ರೇಕ್ ಹಾಕಲು 'ಪಥ ಶಿಸ್ತು' ವ್ಯವಸ್ಥೆ

ನಾಳೆ ಹೆದ್ದಾರಿ ಲೋಕಾರ್ಪಣೆ: 50 ಮೀಟರ್ ವಾಕ್ ಮಾಡಲಿರುವ ಪ್ರಧಾನಿ

ಮೈಸೂರು, ಮಾ.10(ಎಂಟಿವೈ)– ಮೈಸೂರು–ಬೆಂಗಳೂರು ಹೆದ್ದಾರಿ ಲೋಕಾರ್ಪಣೆ ಬಳಿಕ ಅಪಘಾತಕ್ಕೆ ಕಡಿವಾಣ ಹಾಕಲು ಪಥ ಶಿಸ್ತು (ಲೇನ್ ಡಿಸಿಪ್ಲೀನ್) ವ್ಯವಸ್ಥೆ ಕಾರ್ಯಗತಗೊಳಿಸಲಾಗುವುದು ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುನಿರೀಕ್ಷಿತ ಯೋಜನೆಯಾಗಿರುವ ಈ ದಶಪಥ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಮಾ.12ರಂದು ಲೋಕಾರ್ಪಣೆ ಮಾಡಲಿದ್ದಾರೆ. 2018ರ ಫೆ.19ರಂದು ಮೈಸೂರಿಗೆ ಬಂದಿದ್ದಾಗ ಈ ಹೆದ್ದಾರಿ ಘೋಷಣೆ ಮಾಡಿದ್ದರು. ಇದೀಗ ಯೋಜನೆ ಪೂರ್ಣಗೊಂಡಿದ್ದು, ಸೇವೆಗೆ ಸಮರ್ಪಿಸುತ್ತಿದ್ದಾರೆ ಎಂದರು. ಮಾ.12ರಂದು ಬೆಳಗ್ಗೆ 11.10ಕ್ಕೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಪ್ರಧಾನಿ ಮೋದಿ, ಹೆಲಿಕಾಪ್ಟರ್ ಮೂಲಕ ಮಂಡ್ಯದ ಪಿಇಎಸ್ ಕಾಲೇಜು ಮೈದಾನದಲ್ಲಿ ನಿರ್ಮಿಸಲಾಗಿರುವ ಹೆಲಿಪ್ಯಾಡ್ ತಲುಪುವರು. ಅಲ್ಲಿಂದ ದಶಪಥ ಹೆದ್ದಾರಿ ತಲುಪಿ, ಎರಡು ಕಿಲೋಮೀಟರ್ ರೋಡ್ ಶೋ ನಡೆಸಲಿದ್ದಾರೆ. ಈ ವೇಳೆ ರಸ್ತೆಯ ಎರಡೂ ಬದಿಯಲ್ಲೂ 40 ಸಾವಿರ ಕಾರ್ಯಕರ್ತರು ಮೋದಿ ಅವರನ್ನು ಸ್ವಾಗತಿಸಲಿದ್ದಾರೆ ಎಂದರು. ಗೆಜ್ಜಲಗೆರೆಯಲ್ಲಿ ಆಯೋಜಿಸಿರುವ ಸಮಾವೇಶದಲ್ಲಿ ಪಾಲ್ಗೊಳ್ಳುವ ಮುನ್ನ ಹೆದ್ದಾರಿಯಲ್ಲಿ 50 ಮೀಟರ್ ▶ 7ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರದ ಕನಸಿನ ಯೋಜನೆ

● ಮೈಸೂರು ಬಳಿ ಕಾಂಗ್ರೆಸ್ ನಿಯೋಗದಿಂದ ಎಕ್ಸ್‌ಪ್ರೆಸ್ ವೇ ಪರಿಶೀಲನೆ
● 1882 ಕಿ.ಮೀ. ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ
● 2014ರಲ್ಲಿ ಕೇಂದ್ರ ಸರ್ಕಾರದಿಂದ ದಶಪಥ ರಸ್ತೆಗೆ ಅನುಮೋದನೆ
● ಡಿಪಿಆರ್ ಮಾಡಿ ಭೂಸ್ವಾಧೀನ ಮಾಡಿದ್ದೂ ಸಹ ಕಾಂಗ್ರೆಸ್ ಸರ್ಕಾರ
● ಯೋಜನೆ ನಿಗದಿತ ಸಮಯಕ್ಕೆ ಮುಗಿಯದ ಕಾರಣ ವೆಚ್ಚ ಹಲವು ಪಟ್ಟು ಹೆಚ್ಚಾಗಿದೆ ● ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ

ಮೈಸೂರು, ಮಾ. 10(ಆರ್‌ಕೆ)– ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯು ಕಾಂಗ್ರೆಸ್ ಸರ್ಕಾರ ನೀಡಿದ ಮಹತ್ವದ ಯೋಜನೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಕಾಂಗ್ರೆಸ್ ಮುಖಂಡರೊಂದಿಗೆ ಇಂದು ಮೈಸೂರು ಭಾಗದ ದಶಪಥ ಹೆದ್ದಾರಿ ಕಾಮಗಾರಿ ವೀಕ್ಷಿಸಿದ ಬಳಿಕ ಸಿದ್ದಲಿಂಗಪುರ ಬಳಿ ಹೋಟೆಲ್‌ವೊಂದರಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ 2014ರಲ್ಲಿ ರಾಜ್ಯದ ಒಟ್ಟು 1882 ಕಿ.ಮೀ. ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿ, ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿತ್ತು ಎಂದು ನುಡಿದರು.

ಡಾ.ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಭೂ ಸಾರಿಗೆ ಮತ್ತು ಹೆದ್ದಾರಿ ಮಂತ್ರಿಯಾಗಿದ್ದ ಆಸ್ಕರ್ ಫರ್ನಾಂಡಿಸ್ ಅವರು ಈ ಯೋಜನೆಗೆ ಅನುಮೋದನೆ ನೀಡಿದ್ದರು. ರಾಜ್ಯದಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ತಾವು ಲೋಕೋಪಯೋಗಿ ಸಚಿವರಾಗಿದ್ದಾಗ ಡಿಪಿಆರ್ ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸಿದ್ದರಿಂದ ಅಂದೇ ಕೇಂದ್ರ ಸರ್ಕಾರ ಅನುಮತಿ ನೀಡಿತ್ತು ಎಂದು ತಿಳಿಸಿದರು. ಅದೇ ವೇಳೆ ಯೋಜನೆಗೆ ಅಗತ್ಯವಿದ್ದ ಭೂಮಿ ಸರ್ವೇ ಮಾಡಿ 2016ರ ಅಕ್ಟೋಬರ್ 4ರಂದು ಅಧಿಸೂಚನೆ ಹೊರಡಿಸಿ, 4,400 ಕೋಟಿ ವೆಚ್ಚದಲ್ಲಿ 2,500 ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಯೋಜನೆಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿತ್ತು ಎಂದು ಡಾ. ಮಹದೇವಪ್ಪ ಮಾಹಿತಿ ನೀಡಿದರು.

ಅಂದಾಜು 3,000 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಿದ ಈ ಯೋಜನೆಯನ್ನು ತದನಂತರ ಬಂದ ಸರ್ಕಾರ ಮುಂದುವರೆಸಿ, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದ ಕಾರಣ ಅಂತಿಮವಾಗಿ ಈಗ ಯೋಜನೆಯ ವೆಚ್ಚ 12,000 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಈ ರಸ್ತೆ ನಿರ್ಮಾಣದ ರೂವಾರಿಗಳು ದಿವಂಗತ ಆಸ್ಕರ್ ಫರ್ನಾಂಡಿಸ್, ಸಿದ್ದರಾಮಯ್ಯ ಮತ್ತು ▶ 6ನೇ ಪುಟಕ್ಕೆ



ಕೈಲಾಗದವ ಮೈ ಪರಚಿಕೊಂಡಂತೆ

ಸಂಸದ ಪ್ರತಾಪ್‌ಸಿಂಹ ವಿರುದ್ಧ ಮಹದೇವಪ್ಪ ತಿರುಗೇಟು

ಮೈಸೂರು, ಮಾ.10(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಯೋಜನೆಯಲ್ಲಿ ಏನೂ ಮಾಡದ ಸಂಸದ ಪ್ರತಾಪ್ ಸಿಂಹ 'ಕೈಲಾಗದವ ಮೈ ಪರಚಿಕೊಂಡಂತೆ' ಆಡುತ್ತಿದ್ದಾರೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಾಗ್ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಸರ್ಕಾರವಿದ್ದಾಗ ಆರಂಭಿಸಿದ ಯೋಜನೆ ಮುಂದುವರಿಸಿದ್ದೇ ಸಾಧನೆ ಎಂಬಂತೆ ಬಿಂಬಿಸಿಕೊಂಡು ಇಡೀ ಹೆದ್ದಾರಿಯನ್ನು ತಾವೇ ನಿರ್ಮಿಸಿರುವಂತೆ ಹೇಳಿಕೊಳ್ಳುತ್ತಿರುವ ಸಂಸದರು, ತಮ್ಮ ಪಾತ್ರ ಏನೂ ಇರದಿದ್ದರೂ ಎಲ್ಲವೂ ನಾನೇ ಮಾಡಿದ್ದು ಎಂದು ಹೇಳುತ್ತಿದ್ದಾರೆ. ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : (ಒಂದು ವಾರ ಶಾಲೆಗೆ ಬರದಿದ್ದ ವಿದ್ಯಾರ್ಥಿಯೋರ್ವನಿಗೆ) ಹೀಗೆ ಶಾಲೆಗೆ ಆಬ್ಸೆಂಟ್ ಆಗ್ತಿದ್ರೆ ನಿನ್ನನ್ನು ಪರೀಕ್ಷೆಗೆ ಕೂರಿಸೊಲ್ಲ.

ವಿದ್ಯಾರ್ಥಿ : ಪರ್ವಾಗಿಲ್ಲ ಸಾರ್ ನಿಂತೇ ಬರೀತೀನಿ.

ಮೈಸೂರು ಮಿತ್ರ
ಶನಿವಾರ, 11 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬಹಿರಂಗ ಯಶಸ್ಸಿಗಿಂತ ಅಂತರಂಗ ಶುದ್ಧ ಜೀವನವೇ ಮುಖ್ಯ.

– ಬೆಸ್ಮರ್‌ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಜ ಆಡಿದರೆ ನಿಷ್ಠುರ / ಸುಳ್ಳಾಡಿದರೆ ಮತ್ಸರ

ನಿಮ್ಮ ಪತ್ರಗಳು

ಮಲೆಯೂರು ಗುರುಸ್ವಾಮಿ ಎಂಬ ಅಜಾತಶತ್ರು

ಮಾನ್ಯರೆ,



ನಾಡಿನ ಹಿರಿಯ ಸಾಂಸ್ಕೃತಿಕ ಚೇತನ, ಅದ್ಭುತ ವಾಗ್ಮಿ, ಕವಿ, ಲೇಖಕ, ವಿಮರ್ಶಕ ಪ್ರೊ. ಮಲೆಯೂರು ಗುರುಸ್ವಾಮಿ ಯವರ ನಿಧನ ಕನ್ನಡ ಸಾಂಸ್ಕೃತಿಕ ಹಾಗೂ ಸಾರಸ್ವತ ಲೋಕಕ್ಕೆ ಉಂಟಾದ ತೀವ್ರ ನಷ್ಟವಾಗಿದೆ. ಅವರ ಮಾತುಗಳಲ್ಲಿ ಒಂದು ಚುಂಬಕ ಶಕ್ತಿ ಹಾಗೂ ಸಂವೇದನಾ ಶೀಲತೆ ಇರುತ್ತಿತ್ತು. ಹೀಗಾಗಿ ಪ್ರೊ. ಗುರುಸ್ವಾಮಿಯವರು ಮಾತನಾಡಲು ಎದ್ದು ನಿಂತರೆ ಒಂದು ವಿಶ್ವವಿದ್ಯಾನಿಲಯವೇ ತೆರೆಯಿತೇನೋ ಎಂಬ ಭಾವನೆ ಮೂಡುತ್ತಿತ್ತು. ಅವರನ್ನು ನಡೆದಾಡುವ ವಿಶ್ವಕೋಶ ಎಂದು ಕೂಡ ಕರೆಯಲಾಗುತ್ತಿತ್ತು. ತಮ್ಮ ವಿದ್ವತ್ಪೂರ್ಣ ಮತ್ತು ಹಾಸ್ಯಭರಿತ ಮಾತುಗಳ ಮೂಲಕ ಗುರುಸ್ವಾಮಿಯವರು ಸಭಿಕರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ರೀತಿ ಅನನ್ಯವಾಗಿತ್ತು.

ಶಿವಣ್ಣ ಹಾಗೂ ಮರೆಮ್ಮ ದಂಪತಿಗಳ ಸುಪುತ್ರರಾಗಿ 1947ರ ಆಗಸ್ಟ್ ಒಂದ ರಂದು ಜನಿಸಿದ ಗುರುಸ್ವಾಮಿಯವರು, ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಚಾಮರಾಜನಗರದಲ್ಲಿ ಪಡೆದ ಬಳಿಕ ಮೈಸೂರು ವಿಶ್ವವಿದ್ಯಾಲಯ ದಿಂದ ಸ್ನಾತಕೋತ್ತರ ಪದವಿ ಪಡೆದರು. ನಂತರ ನಗರದ ಜೆಎಸ್‌ಎಸ್ ಕಾಲೇಜಿ ನಲ್ಲಿ ಅಧ್ಯಾಪಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಮೈಸೂರಿನ ಹಿನಕಲ್‌ನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ಗುಂಡ್ಲುಪೇಟೆಯಲ್ಲಿ ಹಿರಿಯ ಲೇಖಕಿ, ಮಾಜಿ ಪುರಸಭಾಧ್ಯಕ್ಷೆ ಶ್ರೀಮತಿ ಪುಟ್ಟತಾಯಮ್ಮ ಏರ್ಪಡಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ ಅವರನ್ನು ನಾನು ಕೆಲವು ಬಾರಿ ಮಾತನಾಡಿಸಿದಾಗ, ಅತ್ಯಂತ ಪ್ರೀತಿ ವಿಶ್ವಾಸದಿಂದ ಮಾತನಾಡಿ "ನೀವು ಹಾಡುಗಳನ್ನು ಚೆನ್ನಾಗಿ ಹಾಡುತ್ತೀರಿ" ಎಂಬ ಪ್ರೋತ್ಸಾಹದಾಯಕ ಮಾತುಗಳನ್ನು ಹೇಳಿದ್ದು ಇನ್ನೂ ನೆನಪಿದೆ.

ಗುರುಸ್ವಾಮಿಯವರು, ಯಾರನ್ನೂ ನೋಯಿಸದ ಮಾತೃ ಹೃದಯ ಹೊಂದಿದಂತಹ ಅಪರೂಪದ ವ್ಯಕ್ತಿ. ಹೀಗಾಗಿಯೇ ಅವರನ್ನು "ಅಜಾತ ಶತ್ರು" ಎಂದೇ ಕರೆಯಲಾಗುತ್ತಿತ್ತು. ಶ್ರೀಯುತರು, ಮಹಾಯಾತ್ರಿಕ, ಅಪ್ರತಿಮ ವೀರ ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ, ಸಂಸ ಸೇರಿದಂತೆ ಹಲವಾರು ಕಾದಂಬರಿಗಳನ್ನು ರಚಿಸಿದ್ದಾರೆ. ಅದೇ ರೀತಿ ಮೂಡಲ ಸೀಮೆಯ ಕಥೆಗಳು, ಕಾಡಂಚಿನ ಕೋಗಿಲೆಗಳ ಕಲರವ, ಶಿವ ಸಂಪದ, ಹೊನ್ನ ಹೊಳೆ ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ.

ಗುರುಸ್ವಾಮಿಯವರು ಮಾತನಾಡಲು ನಿಂತರೇ ಸಾಕು, ಅಲ್ಲಿ ಹಲವಾರು ವಿಚಾರಗಳು ಮಿಂಚಿನಂತೆ ಹೊಳೆದು ಸಭಿಕರನ್ನು ತನ್ಮಯಗೊಳಿಸುತ್ತಿತ್ತು. ಮಹಾ ಷಡಕ್ಷರದೇವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಗುರುಸ್ವಾಮಿಯವರು ಇಷ್ಟು ಬೇಗ ಅಗಲಬಾರದಿತ್ತು. ಅವರ ಜ್ಞಾನಜ್ಯೋತಿ ಮತ್ತಷ್ಟು ಕಾಲ ಉರಿದು ಸಮಾಜವನ್ನು ಬೆಳಗಬೇಕಾಗಿತ್ತು. ಅವರಿಗೆ ಭಕ್ತಿ ಪೂರ್ವಕ, ಗೌರವಪೂರ್ವಕ ನಮನಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹಳೇ ಸಾರಿಗೆ ಬಸ್‌ಗಳಿಗೆ ಮುಕ್ತಿ ಎಂದು

ಮಾನ್ಯರೆ,

ಮೈಸೂರು ನಗರ ಸಾರಿಗೆಯ ಶೇ. 99 ರಷ್ಟು ಬಸ್‌ಗಳು ಹಳೆಯದಾಗಿದ್ದು, ಅವುಗಳ ಆಯುಷ್ಯ ಮುಗಿದಿದೆ. ಅನೇಕ ಬಸ್‌ಗಳು ಸಂಚರಿಸುತ್ತಿದ್ದಾಗಲೇ ಕೆಟ್ಟು ನಿಂತು ಬಿಡುತ್ತವೆ. ಇಂತಹ ಬಸ್‌ಗಳನ್ನು ಚಾಲನೆ ಮಾಡುವ ಚಾಲಕರ ಸ್ಥಿತಿಯಂತೂ ಶೋಚನೀಯ. ಸಂಬಂಧಪಟ್ಟ ಸಾರಿಗೆ ಸಚಿವರು, ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಹೊಸ ಬಸ್‌ಗಳಿಗೆ ಚಾಲನೆ ನೀಡಬೇಕೆಂದು ಮನವಿ.

–ನೊಂದ ಪ್ರಯಾಣಿಕರು, ಮೈಸೂರು.

ಇಂತಹ ದಿಟ್ಟ ಮತದಾರನಿಗೆ ವಂದನೆಗಳು!


ಮಾನ್ಯರೆ,

ಚಿಕ್ಕಮಗಳೂರು ಜಿಲ್ಲೆಯ ವಿಧಾನಸಭಾ ಕ್ಷೇತ್ರವೊಂದರಲ್ಲಿ ರಾಜಕೀಯ ಪಕ್ಷವೊಂದು ಮತದಾರರಿಗೆ ತಮ್ಮ ಪಕ್ಷಕ್ಕೆ ಮತ ನೀಡಲು ಆಮಿಷ ತೋರಿಸಿ ಅಲ್ಲಿನ ಜನರಿಗೆ ಸೀರೆ ಹಂಚಿಕೆ ಮಾಡಿದ್ದಾರೆ. ಅದರಲ್ಲಿ ಮತದಾರರೊಬ್ಬರು ಸೀರೆಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿರುವುದು ಆ ಮತದಾರ ಮಹಾನೀಯನ ಧೈರ್ಯವನ್ನು ಮೆಚ್ಚಲೇಬೇಕು.

ಚುನಾವಣೆ ಹತ್ತಿರ ಬರುತಿದ್ದಂತೆ ಎಲ್ಲಾ ರಾಜಕೀಯ ಪಕ್ಷಗಳು, ಮತದಾರರಿಗೆ ಇಂತಹ ಆಮಿಷ ತೋರಿಸುವುದು ಸರ್ವೇ ಸಾಮಾನ್ಯ. ಮಾನ್ಯ ಮತದಾರರೇ, ಇವರು ಕೊಟ್ಟ ಸೀರೆ ಇನ್ನಿತರೆ ಪದಾರ್ಥಗಳನ್ನು ಅವರ ಎದುರಲ್ಲೇ ನಾಶಪಡಿಸಬೇಕು. ಕುಕ್ಕರ್ ಕೊಟ್ಟರೆ ಬೀದಿಗೆ ಬಿಸಾಡಬೇಕು, ದುಡ್ಡು ಕೊಟ್ಟರೆ ಮುಖಕ್ಕೆ ಎಸೆಯಬೇಕು, ಇಂತಹ ಧೈರ್ಯ ಮಾಡಿದಾಗ ಮಾತ್ರ ಪ್ರಜಾಪ್ರಭುತ್ವ ಗಟ್ಟಿಗೊಳ್ಳಲಿದೆ. ರಾಜಕಾರಣಿಗಳು ಸಹ ಇಂತಹ ಘಟನೆಗಳಿಂದ ಬುದ್ಧಿ ಕಲಿಯಬೇಕು. ಎಲ್ಲರಿಗಿಂತ ಹೆಚ್ಚಾಗಿ ಚುನಾವಣಾ ಆಯೋಗ ಕಟ್ಟು–ನಿಟ್ಟಿನ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಮೈಸೂರು

ಹದಗೆಟ್ಟಿರುವ ಜೆ.ಕೆ. ರೇಡಿಯಲ್ ಪ್ಲಾಂಟ್ ಮುಂಭಾಗದ ರಸ್ತೆ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ರಿಂಗ್ ರಸ್ತೆಯ ಜೆ.ಕೆ. ರೇಡಿಯಲ್ ಪ್ಲಾಂಟ್ ಮುಂಭಾಗದ ರಸ್ತೆಯು ಹೆಬ್ಬಾಳು ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದೆ. ಈ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ರಸ್ತೆ ತುಂಬಾ ಹದಗೆಟ್ಟಿದ್ದು, ವಾಹನಗಳು ಸಂಚರಿಸಲು ಸಾಧ್ಯವಾಗದ ಸ್ಥಿತಿಯಲ್ಲಿದೆ. ಹಾಗಾಗಿ ಕೆಲವೇ ತಿಂಗಳಲ್ಲಿ ಇಲ್ಲಿ ಹಲವಾರು ಅಪಘಾತಗಳು ಸಂಭವಿಸಿದ್ದು, ಸಾಕಷ್ಟು ಪ್ರಾಣ ಹಾಗೂ ಆರ್ಥಿಕ ಹಾನಿ ಉಂಟಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ಬಾರಿ ಮನವಿ ಮಾಡಿದ್ದು, ಇದುವರೆಗೂ ಯಾವುದೇ ದುರಸ್ತಿ ಕಾರ್ಯ ನಡೆದಿರುವುದಿಲ್ಲ. ಕೂಡಲೇ ಈ ರಸ್ತೆಗೆ ಹೊಸದಾಗಿ ಡಾಂಬರೀಕರಣ ಮಾಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.


–ರಾಮಕೃಷ್ಣ, ಮೈಸೂರು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಆಗಸದಲ್ಲಿ ಆತಂಕಕಾರಿ ಬಲೂನ್‌ಗಳು ಪ್ರತ್ಯಕ್ಷ!





ಇತ್ತೀಚೆಗೆ ಅಮೆರಿಕದ ರಕ್ಷಾ ಮಂತ್ರಾಲಯ ಪೆಂಟಗಾನ್, ದೇಶದ ಯು–2 ಬೇಹುಗಾರಿಕಾ ವಿಮಾನದ ಕಾಕ್‌ಪಿಟ್‌ನಿಂದ ತೆಗೆದ ಸೆಲ್ಫಿ ಚಿತ್ರವನ್ನು ಬಿಡುಗಡೆ ಮಾಡಿತು. ಈ ಚಿತ್ರದಲ್ಲಿ ಅಮೆರಿಕದ ಯುದ್ಧ ವಿಮಾನ ಎಫ್–22 ಚೀನಿ ಬೇಹುಗಾರಿಕಾ ಸಾಧನವೆಂದು ಶಂಕಿಸಲಾದ ಭೀಮ ಗಾತ್ರದ ಬಲೂನ್ ಅನ್ನು ಹೊಡೆದುರುಳಿಸಿದ ದೃಶ್ಯವಿತ್ತು. ಜನವರಿ 28 ರಂದು ಯಾವುದೋ ನಿಗೂಢ ಬಲೂನ್ ಅಮೆರಿಕದ ಅಲಾಸ್ಕಾ ವಿಮಾನ ನಿಲ್ದಾಣದ ಮೇಲೆ ಹಾರುತ್ತಿರುವುದನ್ನು ಅಮೇರಿಕದ ಸೇನಾ ಪಡೆ ಗಮನಿಸಿತು. ಆನಂತರ ಅಲ್ಲಿಂದ ಕೆನಡಾ ವಾಯು ಪ್ರದೇಶದತ್ತ ಸಾಗಿತು. ಜನವರಿ 31 ರಂದು ಮತ್ತೆ ಅಮೆರಿಕದ ವಾಯು ಪ್ರದೇಶದೊಳಗೆ ಪ್ರವೇಶಿಸಿದ ಈ ಬಲೂನ್ ಅಮೇರಿಕದ ಮಲ್ಮಸ್ಟ್ರಾರ್ಮ್ ವಾಯುನೆಲೆ, ಮೊಟನ್ನಾ ಪ್ರದೇಶದ ಪರಮಾಣು ಪರೀಕ್ಷಾ ವಲಯದ ಮೇಲೆ ಹಾರಾಟ ನಡೆಸುತ್ತಿದ್ದುದು ಖಚಿತವಾಗುತ್ತಿದ್ದಂತೆ ಅಧ್ಯಕ್ಷ ಜೋ ಬೈಡನ್ ಅದನ್ನು ಹೊಡೆದುರುಳಿಸಲು ಖಡಕ್ ಸೂಚನೆ ನೀಡಿದರು.

ಭಾರೀ ಗಾತ್ರದ ಬಲೂನ್‌ಗಳಲ್ಲಿ ಪರಮಾಣು ಅಸ್ತ್ರಗಳನ್ನು ಸುಲಭವಾಗಿ ಸಾಗಿಸಬಹುದೆಂದು ಅಮೇರಿಕದ ರಕ್ಷಾತಜ್ಞರು ಸೇನೆಗೆ ಮಾಹಿತಿ ನೀಡಿದ್ದರು. 2015 ರಲ್ಲಿ ಅಮೆರಿಕದ ನಾಯಕತ್ವ ಮತ್ತು ನೀತಿ ಫೌಂಡೇಷನ್ ನೀಡಿದ್ದ ವರದಿಯಂತೆ ಉತ್ತರ ಕೊರಿಯಾ ಅಥವಾ ಚೀನಾ ಬಲೂನ್ ಮೂಲಕ ಅಮೆರಿಕದ ಮೇಲೆ ಪರಮಾಣು ಶಸ್ತ್ರಗಳನ್ನು ಸ್ಫೋಟಿಸಬಹುದೆಂದು ಎಚ್ಚರಿಸಿತ್ತು.

ಈ ಕಾರಣಗಳಿಂದ ಅಮೆರಿಕದ ರಕ್ಷಣಾ ಪಡೆಯು ಬಲೂನ್ ಬಗ್ಗೆ ಆತುರದ ಕ್ರಮ ಕೈಗೊಳ್ಳಲಿಲ್ಲ. ಮೊದಲು ಅಮೆರಿಕದ ರಕ್ಷಾ ಮಂತ್ರಾಲಯ ಪೆಂಟಗಾನ್ ಇದು ಚೀನಾದ ಬೇಹುಗಾರಿಕಾ ಬಲೂನೆಂದು ಖಚಿತಪಡಿಸಿಕೊಂಡಿತು. ಈ ಬಲೂನ್ ಅನ್ನು ಟಾರ್ಗೆಟ್ ಮಾಡುವ ಮುನ್ನ ಕೆರೊಲಿನಾ ಕರಾವಳಿಯಿಂದ ಆರು ಮೈಲುಗಳಷ್ಟು ದೂರದವರೆಗೆ ಎಲ್ಲ ರೀತಿಯ ವಾಯು ಸಂಚಾರಗಳನ್ನು ಸ್ಥಗಿತಗೊಳಿಸಲಾಯಿತು. ಫೆಬ್ರವರಿ ನಾಲ್ಕರಂದು ಚೀನಿ ಬಲೂನ್ ನ್ಯೂಯಾರ್ಕ್‌ನಿಂದಾಚೆ ಅಟ್ಲಾಂಟಿಕ್ ಮಹಾಸಾಗರದ ಮೇಲೆ 60 ರಿಂದ 65 ಸಾವಿರ ಅಡಿ ಎತ್ತರದಲ್ಲಿ ಹಾರಾಡುತ್ತಿದ್ದಾಗ ಅಮೇರಿಕದ ವಾಯು ಪಡೆಯ ಎಫ್–22 ಯುದ್ಧ ವಿಮಾನ ಹಾರಿಸಿದ ಕ್ಷಿಪಣಿಗೆ ಈ ಚೀನಿ ಬಲೂನ್ ಸ್ಫೋಟಗೊಂಡು ನಾಶವಾಯಿತು. ಅಟ್ಲಾಂಟಿಕ್ ಸಾಗರದಲ್ಲಿ ಪತನಗೊಂಡ ಈ ಬಲೂನ್‌ನ ಅವಶೇಷಗಳನ್ನು ಅಮೆರಿಕದ ನೌಕಾಪಡೆ ಸಂಗ್ರಹಿಸಿ ತನಿಖೆ ಮುಂದುವರಿಸಿದೆ.

> “ ಅಮೆರಿಕವು ಅಂತಾರಾಷ್ಟ್ರೀಯ ಕಾನೂನು ಮತ್ತು ತನ್ನ ನಿಯಮಗಳ ಆಧಾರದಲ್ಲಿ ಚೀನಿ ಬಲೂನ್ ಅನ್ನು ಹೊಡೆದುರುಳಿಸಿದೆ. ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಈ ಕಾರ್ಯಾಚರಣೆಯನ್ನು ಉದ್ದೇಶಪೂರ್ವಕ ಹಾಗೂ ಕಾನೂನುಬದ್ಧ ಕ್ರಮವೆಂದು ಹೇಳಿದ್ದಾರೆ. ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್‌ರು ಗೂಢಚರ್ಯೆಗೆ ಬಳಸುವ ಸಾಧನ ಎಂದು ವ್ಯಾಖ್ಯಾನಿಸಿದ್ದಾರೆ. ಬಲೂನ್ ಪತನಗೊಳ್ಳುತ್ತಿದ್ದಂತೆ ಚೀನಾವು ಬಲೂನ್ ನಿಯಂತ್ರಣ ತಪ್ಪಿ, ಸಾಧನಗಳು ಕೆಟ್ಟು ಹೋದ ನಿಮಿತ್ತ ಗಾಳಿ ಬೀಸುವ ದಿಕ್ಕಿನಲ್ಲಿ ಅಮೆರಿಕದ ವಾಯುಪ್ರದೇಶ ಪ್ರವೇಶಿಸಿತು ಎಂದು ಸಮಜಾಯಿಸಿಕೆ ನೀಡಿತು. ಇನ್ನೊಂದು ಹೇಳಿಕೆಯಲ್ಲಿ ಹವಾಮಾನ ದತ್ತಾಂಶಗಳ ಸಂಗ್ರಹಕ್ಕೆ ಬಲೂನ್ ಕಳಿಸಿತ್ತು ಎಂದು ತಪ್ಪು ಮುಚ್ಚಲು ಯತ್ನಿಸಿತು. ಆದರೆ ಅಮೆರಿಕದ ಮೊಂಟಾನಾದಲ್ಲಿರುವ ಅತ್ಯಂತ ಸೂಕ್ಷ್ಮ ಮಿಲಿಟರಿ ನೆಲೆಗಳ ಮೇಲೆಯೇ ಈ ಬಲೂನ್ ಏಕೆ ಹಾರಾಡುತ್ತಿತ್ತು ಎಂಬ ಅಮೆರಿಕದ ವೈಜ್ಞಾನಿಕ ವಿಭಾಗದ ಪ್ರಶ್ನೆಗೆ ಚೀನಾ ನಿರುತ್ತರವಾಯಿತು. ಬಲೂನ್ ಪ್ರಕರಣ ಬಿಡೆನ್ ಸರಕಾರದ ಸಾಮರ್ಥ್ಯ ಪರೀಕ್ಷಿಸಿದ್ದು, ಚೀನಾದ ಹೆಚ್ಚುತ್ತಿರುವ ಆಕ್ರಮಣಕಾರಿ ಪ್ರವೃತ್ತಿಗೆ ಪ್ರತ್ಯುತ್ತರ ನೀಡಿದೆ.

ಸೇನಾ ಸಾಧನವಾದ ಬಲೂನ್

ಬಿಸಿ ಗಾಳಿ ತುಂಬಿದ ಬಲೂನ್ ಸಾಹಸ ಕ್ರೀಡೆ, ಸಾಹಸ ಪರ್ಯಟನೆ ಮೊದಲಾದ ವಾಯು ಮಾರ್ಗದಲ್ಲಿನ ಕ್ರೀಡೆಗಳಲ್ಲಿ ಬಳಕೆಯಲ್ಲಿದೆ. ಶತಮಾನಗಳಿಂದ ಮಿಲಿಟರಿ ಉದ್ದೇಶಕ್ಕೆ ಬಳಸುತ್ತಿರುವ ಇತಿಹಾಸವೂ ಇದೆ. ಯುರೋಪ್‌ನಲ್ಲಿ ನೆಪೋಲಿಯನ್ ಯುಗದ ಸಂದರ್ಭದಲ್ಲಿ 18ನೇ ಶತಮಾನದ ಕೊನೆ ಹಾಗೂ 19ನೇ ಶತಮಾನದ ಪೂರ್ವಾರ್ಧದಲ್ಲಿ ಬಿಸಿ ಗಾಳಿ ಬಲೂನ್‌ಗಳನ್ನು ಬೇಹುಗಾರಿಕೆ, ಬಾಂಬ್ ದಾಳಿಯಂತಹ ಮಿಲಿಟರಿ ಉದ್ದೇಶಕ್ಕೆ ಬಳಸಲು ಪ್ರಾರಂಭಿಸಲಾಯಿತು. ಮಿಲಿಟರಿ ಉಪಯೋಗಕ್ಕಾಗಿಯೇ ವಿಶೇಷ ವಿನ್ಯಾಸಗಳ ಬಲೂನ್‌ಗಳನ್ನು ತಯಾರಿಸಲಾಗುತ್ತಿತ್ತು. ಎರಡನೇ ಮಹಾಯುದ್ಧದಲ್ಲಿ ಜರ್ಮನಿ ಶರಣಾಗುವ ಮೂರು ದಿನ ಮೊದಲು ಅಮೆರಿಕದ ಒರೆಗಾನ್‌ನ ಬ್ಲೇ ನಗರದಲ್ಲಿ ಗನ್ ಪೌಡರ್ ತುಂಬಿದ ಬಲೂನ್‌ಗಳು ನಾಗರಿಕ ಪ್ರದೇಶದಲ್ಲಿ ಸ್ಫೋಟಗೊಂಡ ಪರಿಣಾಮ ಕೆಲವು ನಾಗರಿಕರು ಸಾವಿಗೀಡಾಗಿದ್ದರು. ಹತ್ತು ಮೀಟರ್ ಅಗಲ, 20 ಮೀ. ಎತ್ತರವಿದ್ದ ಜಲಜನಕ ತುಂಬಿದ ಬಲೂನ್ ಅನ್ನು ಜಪಾನಿ ಸೇನೆ ಫೆಸಿಫಿಕ್ ಸಾಗರದ ಗಾಳಿ ಬೀಸುವಿಕೆಯ ಲಾಭ ಪಡೆದು ಈ ಕೃತ್ಯ ಎಸಗಿತ್ತು. ಈ ಹಿನ್ನೆಲೆಯಲ್ಲಿ ಆಧುನಿಕ ಸಮರ ಸಾಧನಗಳಲ್ಲಿ ಬಲೂನ್ ಬಾರಿ ಮಹತ್ವ ಪಡೆಯುತ್ತಿದೆ. ಆಧುನಿಕ ಯುದ್ಧ ತಂತ್ರದಲ್ಲಿ ಮಾನವ ರಹಿತ ಶಸ್ತ್ರಾಸ್ತ್ರಗಳ ಮಹತ್ವ ಹೆಚ್ಚುತ್ತಿದೆ. ನಗೋರ್ನಾ–ಕಾರಾಬ್ಲಾಕ್ ಪ್ರದೇಶದ ಮೇಲಿನ ಸಾರ್ವಭೌಮತ್ವಕ್ಕಾಗಿ ಅರ್ಮೇನಿಯಾ–ಅಜರ್ ಬೈಜಾನ್ ಮಧ್ಯೆ ನಡೆದ ಯುದ್ಧದಲ್ಲಿ ಅತ್ಯಾಧುನಿಕ ದ್ರೋಣಗಳಿದ್ದ ಅಜರ್‌ಬೈಜಾನ್ ಗೆಲುವು ಸಾಧಿಸಿತು. ಪುಟ್ಟ ರಾಷ್ಟ್ರ ಉಕ್ರೇನ್ ಕಳೆದ ಒಂದು ವರ್ಷದಿಂದ ರಷ್ಯಾಕ್ಕೆ ಪ್ರಬಲ ಪ್ರತಿರೋಧ ಒಡ್ಡಲು ದ್ರೋಣಗಳೇ ಕಾರಣವಾಗಿದೆ.

ಬಲೂನ್‌ಗಳು ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವಲ್ಲಿ ಇನ್ನೂ ಪರಿಣಾಮಕಾರಿಯಾಗಿಲ್ಲ. ಆದರೆ ಅತ್ಯಂತ ಎತ್ತರದಲ್ಲಿ ಹಾರುವುದರಿಂದ ಬೇಹುಗಾರಿಕೆಗೆ ಅತ್ಯಂತ ಪರಿಣಾಮಕಾರಿಯಾಗಿವೆ. ಕೃತಕ ಉಪಗ್ರಹಗಳು ಕೆಲವೊಮ್ಮೆ ಕಳಿಸುವ ಚಿತ್ರಗಳಲ್ಲಿ ಭೂ ಮೇಲ್ಮೈ ಚಿತ್ರಗಳು ಸ್ಪಷ್ಟವಾಗಿ ಕಾಣದಿರುವುದರಿಂದ ಮುಂದುವರಿದ ರಾಷ್ಟ್ರಗಳು ಬೇಹುಗಾರಿಕೆಗೆ ಬಲೂನ್ ಬಳಸುತ್ತಿದ್ದಾರೆ. ಹೀಲಿಯಂ ಅನಿಲದಿಂದ ಹಾರುವ ಈ ಬಲೂನ್‌ಗಳು ನೆಲದಿಂದ 37 ಕಿಮೀ ಎತ್ತರದವರೆಗೂ ಹಾರುವ ಸಾಮರ್ಥ್ಯ ಹೊಂದಿದೆ. ಅತ್ಯಂತ ಎತ್ತರದಲ್ಲಿ ಇವು ಹಾರುವುದರಿಂದ ರಾಡಾರ್‌ಗಳಿಗೂ ಪತ್ತೆ ಹಚ್ಚಲಾಗುವುದಿಲ್ಲ. ಇವುಗಳಲ್ಲಿ ಅಳವಡಿಸುವ ಬ್ಯಾಟರಿಗಳು ಸೋಲಾರ್ ಫಲಕಗಳಿಂದ ರಿಚಾರ್ಜ್ ಆಗುತ್ತವೆ. ಬಲೂನ್‌ಗಳಲ್ಲಿ ಉತ್ಕೃಷ್ಟ ಕ್ಯಾಮರಾಗಳಿದ್ದು ಹತ್ತಾರು ಕಿಮೀ ಎತ್ತರದಲ್ಲಿ ಸ್ಥಿರ ಕಕ್ಷೆಯಲ್ಲಿ ನಿಂತು ಅತ್ಯಂತ ಸೂಕ್ಷ್ಮ ಮಿಲಿಟರಿ ನೆಲೆಗಳ ಮಾಹಿತಿಗಳನ್ನು ಚಿತ್ರಗಳನ್ನು ಅತ್ಯಂತ ಚುರುಕಾಗಿ, ಸ್ಪಷ್ಟವಾಗಿ, ಕರಾರುವಕ್ಕಾಗಿ ಉಪಗ್ರಹಗಳಿಗಿಂತ ಪರಿಣಾಮಕಾರಿಯಾಗಿ ತಮ್ಮ ನಿಯಂತ್ರಣ ಸ್ಥಾನಕ್ಕೆ ರವಾನಿಸುತ್ತವೆ. ಚೀನಾ ಹಾರಿಸಿದ ಬಲೂನ್ 120 ಅಡಿ ಅಗಲ, 130 ಅಡಿ ಉದ್ದವಿದ್ದು, ಇದರ ಒಳ ಆವರಣದಲ್ಲಿ ಮೂರು ಭಾರೀ ವಾಹನಗಳನ್ನು ನಿಲ್ಲಿಸುವಷ್ಟು ರಕ್ಕಸ ಗಾತ್ರ ಹೊಂದಿತ್ತು. ಆದರೆ ಇದು ಅಮೆರಿಕದ ರಾಡಾರ್ ಕಣ್ಣುಗಳ ವ್ಯಾಪ್ತಿಯೊಳಗೆ ಬರದಷ್ಟು ಎತ್ತರ ಅಂದರೆ 60 ರಿಂದ 1.20 ಲಕ್ಷ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿತ್ತು. ಅಂತಿಮವಾಗಿ ಅಮೇರಿಕದ ಅತ್ಯಾಧುನಿಕ ಏವಾಕ್ಸ್ (AEW&C) ಗಳು ಪತ್ತೆ ಹೆಚ್ಚುವಲ್ಲಿ ಸಫಲವಾದವು.

ಆಗಸದ ಮೇಲಿನ ಸಾರ್ವಭೌಮತ್ವ

ಬಿಸಿ ಗಾಳಿ ಬಲೂನ್‌ಗಳು ಅನ್ಯ ದೇಶಗಳ ವಾಯು ಪ್ರದೇಶದ ಮೇಲೆ ಹಾರಿಸುವ ವಿಷಯದಲ್ಲಿ ಸ್ಪಷ್ಟವಾದ ಅಂತಾರಾಷ್ಟ್ರೀಯ ಕಾನೂನು ನಿಯಮಗಳಿವೆ. ಪ್ರತಿಯೊಂದು ದೇಶಕ್ಕೆ ತನ್ನ ಕರಾವಳಿಯ ದಡದಿಂದ 12 ನಾಟಿಕಲ್ ಮೈಲಿವರೆಗೆ ನಿಯಂತ್ರಣ ಮತ್ತು ಸಾರ್ವಭೌಮತ್ವವಿದೆ. ಇದೇ ರೀತಿ ವಾಯು ಪ್ರದೇಶದ ಮೇಲೂ ಸಂಪೂರ್ಣ ಹಾಗೂ ಸಮಗ್ರ ಸಾರ್ವಭೌಮತ್ವ ಇದೆ. ಆದರೆ ಗರಿಷ್ಟ ಎತ್ತರದ ಮಿತಿ ಕುರಿತು ಇನ್ನೂ ಅಂತಾರಾಷ್ಟ್ರೀಯ ಕಾನೂನು ಇನ್ನೂ ರಚಿಸಿಲ್ಲ. ಸಾಮಾನ್ಯ ವಾಣಿಜ್ಯ ಮತ್ತು ಮಿಲಿಟರಿ ವಿಮಾನಗಳು ಹಾರುವ ಎತ್ತರವಾದ 13.7 ಕಿಮೀ (45 ಸಾವಿರ ಅಡಿ) ಚಾಲ್ತಿಯಲ್ಲಿದೆ. ಆದರೆ ಸೂಪರ್‌ಸಾನಿಕ್ ಕೊಂಕಾರ್ಡ್ ವಿಮಾನಗಳು 60 ಸಾವಿರ ಅಡಿ ಎತ್ತರದಲ್ಲಿ ಹಾರಾಡುತ್ತವೆ.

1944ರಲ್ಲಿ ಚಿಕಾಗೋದಲ್ಲಿ ನಡೆದ ನಾಗರಿಕ ವಾಯುಯಾನ ಸಮಾವೇಶದಲ್ಲಿ ರಚಿಸಿದ ಕಾನೂನುಗಳು, ನಿಯಮಾನುಸಾರ ಇತರ ದೇಶಗಳ ಮೇಲೆ ವೈಮಾನಿಕ ಹಾರಾಟ ನಡೆಸಬಹುದು. ಇದಾದ ನಂತರ ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯು ಹೆಚ್ಚುವರಿ ನಿಯಮಗಳನ್ನು ರೂಪಿಸಿತು. ಇದರಲ್ಲಿ ಬಿಸಿ ಗಾಳಿ ಬಲೂನ್‌ಗಳು ಸೇರಿದ್ದವು. ಆದರೆ ಮಿಲಿಟರಿ ಉದ್ದೇಶಗಳಿಗೆ ಅನ್ವಯಿಸಲಿಲ್ಲ.

ಅಮೇರಿಕದ ಕಾನೂನು ನಿಯಮಗಳು

ಶೀತಲ ಸಮರದ ಸಂದರ್ಭದಲ್ಲಿ ಅಮೇರಿಕದ ತನ್ನದೇ ಆದ ವಾಯು ಪ್ರದೇಶ ರಕ್ಷಣಾ ಗುರುತು ವಲಯ ರಚಿಸಿತು. ಈ ಪ್ರಕಾರ ಅಮೆರಿಕದ ವಾಯು ಪ್ರದೇಶ ಪ್ರವೇಶಿಸುತ್ತಿದ್ದಂತೆ ತಮ್ಮ ಪರಿಚಯ ತಿಳಿಸಬೇಕು. ಶೀತಲ ಸಮರ ಕಾಲದಲ್ಲಿ ಸೋವಿಯತ್ ರಷ್ಯಾದ ಯುದ್ಧ ವಿಮಾನಗಳು ಅಮೆರಿಕದ ವಾಯು ಪ್ರದೇಶದ ಮೇಲೆ ವಿಶೇಷವಾಗಿ ಆರ್ಕಾಟಿಕ್ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸುತ್ತಿದ್ದಾಗಲೆಲ್ಲಾ ಅಮೆರಿಕದ ಫೈಟರ್ ಜೆಟ್‌ಗಳು ಘರ್ಜಿಸುತ್ತಿದ್ದವು. ಚೀನಾ, ಜಪಾನ್, ತೈವಾನ್ ಮೊದಲಾದ ದೇಶಗಳು ಇದೇ ರೀತಿಯ ವಾಯು ವಲಯ ಹೊಂದಿವೆ. ಚೀನಾ ವಿಮಾನಗಳು ಅತಿಕ್ರಮಿಸಿದಾಗಲೆಲ್ಲಾ ತೈವಾನ್ ಯುದ್ಧ ವಿಮಾನಗಳು ಉತ್ತರ ನೀಡುತ್ತಿವೆ.

2022, ಜನವರಿಯಲ್ಲಿ ಭಾರತೀಯ ಸೇನಾ ನೆಲೆಗಳ ಮೇಲೂ ಚೀನಿ ಬೇಹುಗಾರಿಕಾ ಬಲೂನ್ ಹಾರಾಟ ನಡೆಸಿದೆ ಎಂದು ಅಮೆರಿಕಾ ರಕ್ಷಣಾ ತಜ್ಞರು ಹೇಳಿದ್ದಾರೆ. ಚೀನಾದ ಈ ಬಲೂನ್ ಅಂಡಮಾನ್ (ಸ್ವರಾಜ್ ದ್ವೀಪ) ಮತ್ತು ನಿಕೋಬಾರ್ (ಶಹೀದ್ ದ್ವೀಪ) ದ್ವೀಪಗಳ ರಾಜಧಾನಿ ಪೋರ್ಟ್‌ಬ್ಲೇರ್ ಮೇಲೆ ಹಾರಾಟ ನಡೆಸಿತ್ತು ಎಂದಿದ್ದಾರೆ. ಜಪಾನ್ ಮೇಲೂ ಚೀನಾ ಈ ರೀತಿಯ ಸ್ಪೈ ಬಲೂನ್ ಹಾರಿಸಿದೆ.

ಅಮೆರಿಕವು ಅಂತಾರಾಷ್ಟ್ರೀಯ ಕಾನೂನು ಮತ್ತು ತನ್ನ ನಿಯಮಗಳ ಆಧಾರದಲ್ಲಿ ಚೀನಿ ಬಲೂನ್ ಅನ್ನು ಹೊಡೆದುರುಳಿಸಿದೆ. ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಈ ಕಾರ್ಯಾಚರಣೆಯನ್ನು ಉದ್ದೇಶ ಪೂರ್ವಕ ಹಾಗೂ ಕಾನೂನುಬದ್ಧ ಕ್ರಮವೆಂದು ಹೇಳಿದ್ದಾರೆ. ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್‌ರು ಗೂಢಚರ್ಯೆಗೆ ಬಳಸುವ ಸಾಧನ ಎಂದು ವ್ಯಾಖ್ಯಾನಿಸಿದ್ದಾರೆ. ಬಲೂನ್ ಪತನಗೊಳ್ಳುತ್ತಿದ್ದಂತೆ ಚೀನಾವು ಬಲೂನ್ ನಿಯಂತ್ರಣ ತಪ್ಪಿ, ಸಾಧನಗಳು ಕೆಟ್ಟು ಹೋದ ನಿಮಿತ್ತ ಗಾಳಿ ಬೀಸುವ ದಿಕ್ಕಿನಲ್ಲಿ ಅಮೇರಿಕದ ವಾಯು ಪ್ರದೇಶ ಪ್ರವೇಶಿಸಿತು ಎಂದು ಸಮಜಾಯಿಸಿಕೆ ನೀಡಿತು. ಇನ್ನೊಂದು ಹೇಳಿಕೆಯಲ್ಲಿ ಹವಾಮಾನ ದತ್ತಾಂಶಗಳ ಸಂಗ್ರಹಕ್ಕೆ ಬಲೂನ್ ಕಳಿಸಿತ್ತು ಎಂದು ತಪ್ಪು ಮುಚ್ಚಲು ಯತ್ನಿಸಿತು. ಆದರೆ ಅಮೇರಿಕದ ಮೊಂಟಾನಾದಲ್ಲಿರುವ ಅತ್ಯಂತ ಸೂಕ್ಷ್ಮ ಮಿಲಿಟರಿ ನೆಲೆಗಳ ಮೇಲೆಯೇ ಈ ಬಲೂನ್ ಏಕೆ ಹಾರಾಡುತ್ತಿತ್ತು ಎಂಬ ಅಮೇರಿಕದ ವೈಜ್ಞಾನಿಕ ವಿಭಾಗದ ಪ್ರಶ್ನೆಗೆ ಚೀನಾ ನಿರುತ್ತರವಾಯಿತು. ಬಲೂನ್ ಪ್ರಕರಣ ಬಿಡೆನ್ ಸರಕಾರದ ಸಾಮಥ ಪರೀಕ್ಷಿಸಿದ್ದು, ಚೀನಾದ ಹೆಚ್ಚುತ್ತಿರುವ ಆಕ್ರಮಣಕಾರಿ ಪ್ರವೃತ್ತಿಗೆ ಪ್ರತ್ಯುತ್ತರ ನೀಡಿದೆ. ಈ ಘಟನೆ ಈಗಾಗಲೇ ಹದಗೆಟ್ಟ ಅಮೆರಿಕ, ಚೀನಾ ಸಂಬಂಧವನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಸ್ಟೇಟ್ ಸೆಕ್ರೆಟರಿ ಬ್ಲಿಂಕೆನ್‌ರ ಬೀಜಿಂಗ್ ಪ್ರವಾಸ ಮುಂದೂಡಲಾಗಿದೆ. ಈ ಘಟನೆಯನ್ನು ಚೀನಾ ಕಟುವಾದ ರಾಜತಾಂತ್ರಿಕ ಭಾಷೆಯಲ್ಲಿ ಟೀಕಿಸಿದೆ. ಈಗಾಗಲೇ ದಕ್ಷಿಣ ಚೀನಾ ಮತ್ತು ತೈವಾನ್ ಜಲಸಂಧಿ ಅಂತಾರಾಷ್ಟ್ರೀಯ ಜಲಸಾರಿಗೆ ಮಾರ್ಗ ಎಂದು ಅಮೇರಿಕ ತನ್ನ ಯುದ್ಧ ನೌಕೆಗಳನ್ನು ಈ ಪ್ರದೇಶಕ್ಕೆ ಕಳುಹಿಸಿದ್ದು, ಚೀನಾ ಈ ಸಾಗರ ಪ್ರದೇಶ ತನ್ನ ಸಾರ್ವಭೌಮತ್ವಕ್ಕೆ ಸೇರಿದೆ ಎಂದು ಪ್ರತಿಪಾದಿಸುತ್ತಿದೆ. ಪ್ರಸ್ತುತ ಇರುವ ಸಾಗರ ಸಂಬಂಧಿ ಸಮಸ್ಯೆಯ ನಂತರ ವಾಯುಪ್ರದೇಶವು ಎರಡೂ ದೇಶಗಳ ಮಧ್ಯೆ ಇನ್ನಷ್ಟು ಉದ್ವಿಗ್ನ ಪರಿಸ್ಥಿತಿಯನ್ನು ಸೃಷ್ಟಿಸಿದೆ. ವಿನೋದದ ಉಲ್ಲಾಸದ ಆಟಿಕೆಯಾಗಿರುವ ಬಲೂನ್ ವಿನಾಶದ ಅಸ್ತ್ರವಾಗಿ ಬದಲಾಗುತ್ತಿರುವುದು ಜಗತ್ತಿನಲ್ಲಿ ಇನ್ನಷ್ಟು ಉದ್ವಿಗ್ನತೆ ಉಂಟು ಮಾಡುವ ಸಾಧ್ಯತೆಗಳಿವೆ.

‘ಅರಿದಡೆ ಆರದು ಮರೆದೊಡೆ ಮೂರದು’ ಕೃತಿ ಬಿಡುಗಡೆ

ನಮ್ಮ ಅರಿವನ್ನೇ ಗುರುವಾಗಿಸಿಕೊಳ್ಳಬೇಕು: ಡಾ.ವಸಂತಕುಮಾರ್

ಮೈಸೂರು, ಮಾ.10(ಎಸ್‌ಬಿಡಿ)– ‘ನಮ್ಮ ಅರಿವನ್ನೇ ನಮ್ಮ ಗುರುವಾಗಿ ಸ್ವೀಕರಿಸಬೇಕು’ ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜು ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್ ಹೇಳಿದರು.



ಮೈಸೂರಿನ ಸಂವಹನ ಪ್ರಕಾಶನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಯುಎಸ್‌ಎ ಶಿಕಾಗೋದಲ್ಲಿ ನೆಲೆಸಿರುವ ದಾವಣಗೆರೆ ಮೂಲದ ರವಿ ಹಂಜ್ ರಚನೆಯ ‘ಅರಿದಡೆ ಆರದು ಮರೆದೊಡೆ ಮೂರದು’ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

‘ಅರಿತರೆ ಆರು ದಿನ, ಮರೆತರೆ ಮೂರು ದಿನ’ ಗಾದೆ ಮಾತಿನಂತಿರುವ ‘ಅರಿದಡೆ ಆರದು ಮರೆದೊಡೆ ಮೂರದು’ ಶೀರ್ಷಿಕೆಯ ಈ ಕೃತಿ, ನಮ್ಮ ಅರಿವೇ ನಮ್ಮ ಗುರು’ ಎಂಬುದನ್ನು ಅರಿಕೆ ಮಾಡುತ್ತದೆ. ನಮ್ಮ ಅರಿವನ್ನೇ ಗುರುವಾಗಿ ಸ್ವೀಕರಿಸಬೇಕು. ಇಲ್ಲವೇ ಯಾವುದೇ ವ್ಯಕ್ತಿ, ಲಾಂಛನವನ್ನು ಗುರುವಾಗಿ ಸ್ವೀಕರಿಸಿದರೆ ಅವರು ಬೀಳುವ ಕೂಪಕ್ಕೆ ನಾವೂ ಬೀಳಬೇಕಾಗುತ್ತದೆ. ಇಲ್ಲವೇ ಯಾವ ಸನ್ನಿವೇಶವಾದರೂ ಅವರಿಗೆ ಜೈಕಾರ ಹಾಕಿಕೊಂಡು ಇರಬೇಕಾಗುತ್ತದೆ ಎಂದರು.

ವರ್ತಮಾನ ಸಮಾಜದ ಮತೀಯ ವ್ಯವಸ್ಥೆಯ ಬಗ್ಗೆ ವಿಡಂಬನಾತ್ಮಕವಾಗಿ ಬರೆಯಲು ಹಾಗೂ ಅದನ್ನು ಪ್ರಕಟಿಸಲು ಎಂಟೆದೆ ಇರಬೇಕು. ಹಾಗಾಗಿ ಲೇಖಕ ರವಿ ಹಂಜ್ ಹಾಗೂ ಪ್ರಕಾಶಕ ಡಿ.ಎನ್. ಲೋಕಪ್ಪನವರ ಧೈರ್ಯವನ್ನು ಮೆಚ್ಚಲೇಬೇಕು. ಹಾಗಂತ ವಿಡಂಬನೆ, ಟೀಕೆ, ವಿಮರ್ಶೆ ಹೊಸದೇನಲ್ಲ. ಪ್ರಗತಿಶೀಲ ಬಂಡಾಯ ಸಾಹಿತ್ಯ ಕಾಲಘಟ್ಟದಲ್ಲಿ ಇದೆಲ್ಲವೂ ಇತ್ತು. ಆದರೆ ರವಿ ಹಂಜ್ ಅವರು, ಮೂಲ ಧರ್ಮತತ್ವವನ್ನು ವಿಡಂಬನೆ ಮಾಡದೆ ವಸ್ತುನಿಷ್ಠವಾಗಿ ತಿಳಿಸಿದ್ದಾರೆ. ಈ ಮೂಲಕ ಕೆಟ್ಟದ್ದನ್ನು ವಿರೋಧಿಸುವುದರ ಜೊತೆಗೆ ಒಳ್ಳೆಯದನ್ನು ಉಳಿಸಿಕೊಳ್ಳಬೇಕು ಎಂಬ ಸಂದೇಶ ಸಾರಿದ್ದಾರೆ. ಬದಲಾವಣೆ ತುಡಿತದೊಂದಿಗೆ ಒಂದು ರಚನಾತ್ಮಕ ಬಂಡಾಯ ಕೃತಿಯನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ ಎಂದು ಪ್ರಶಂಸಿಸಿದರು.

ವರ್ತಮಾನದಲ್ಲಿ ವಿಚಲಿತನಾದ ವ್ಯಕ್ತಿ, ತಾನು ನೋಡಿದ್ದು ಹಾಗೂ ಅನುಭವಿಸಿದ್ದನ್ನು ಪರಾಮರ್ಶೆಯ ಜರಡಿಯಲ್ಲಿ ಹಾಕಿ ಭವಿಷ್ಯದ ಕಲ್ಪನೆಯನ್ನು ಈ ಕೃತಿಯಲ್ಲಿ ಕಟ್ಟಿದ್ದಾರೆ. ಮನುಷ್ಯನ ನಡೆ–ನುಡಿ ನಡುವಿನ ಅಂತರ ಈ ಕೃತಿಯಿಂದ ತಿಳಿಯುತ್ತದೆ. ಲೇಖಕರು, ಈ ಕೃತಿಯಲ್ಲಿನ ಪಾತ್ರ, ಸನ್ನಿವೇಶಗಳು ಕಾಲ್ಪನಿಕ ಯಾರಿಗಾದರೂ ಸಾಮಿಪ್ಯವೆನಿಸಿದರೆ ಅದು ಕಾಕತಾಳೀಯ ಮಾತ್ರ ಎಂದಿದ್ದಾರೆ. ಆದರೆ ಈ ಕೃತಿ ವಿಡಂಬನೆ ಮೂಲಕವೇ ಓದುಗರನ್ನು ಎಚ್ಚರಿಸಿ, ಆತ್ಮಾವಲೋಕನಕ್ಕೆ ಹಚ್ಚುತ್ತದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕೃತಿ ಕುರಿತು ಮಾತನಾಡಿದರು. ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲೇಖಕ ರವಿ ಹಂಜ್, ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ಅವಧಿಗೆ ಚೀನಾ ಅಧ್ಯಕ್ಷರಾಗಿ ಕ್ಸಿ–ಜಿನ್ ಪಿಂಗ್ ಆಯ್ಕೆ

ಬೀಜಿಂಗ್, ಮಾ.10– ಮೂರನೇ ಅವಧಿಗೆ ಚೀನಾ ಅಧ್ಯಕ್ಷರಾಗಿ ಕ್ಸಿ–ಜಿನ್ ಪಿಂಗ್ ಆಯ್ಕೆಯಾಗಿದ್ದಾರೆ. ಈ ಮೂಲಕ ದೇಶದ ಅತ್ಯಂತ ಶಕ್ತಿಶಾಲಿ ನಾಯಕರಾಗಿ ಹೊರಹೊಮ್ಮಿದ್ದಾರೆ.



ಅಕ್ಟೋಬರ್‌ನಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷದ ಮುಖ್ಯಸ್ಥರಾಗಿ ಕ್ಸಿ ಇನ್ನೂ ಐದು ವರ್ಷಗಳ ಅಧಿಕಾರ ಪಡೆದ ನಂತರ ಚೀನಾದ ರಬ್ಬರ್–ಸ್ಟ್ಯಾಂಪ್ ಸಂಸತ್ತು ಇದೀಗ ಅವರನ್ನು ಮೂರನೇ ಅವಧಿಗೆ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದೆ.

ಚೀನಾದ ಶಾಸಕಾಂಗ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್, ಕ್ಸಿ ಮುಂದಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಅನುಮೋದಿಸಿದೆ. ಶುಕ್ರವಾರ ಎನ್‌ಪಿಸಿ ಪ್ರತಿನಿಧಿಗಳು ಕ್ಸಿ ಅವರನ್ನು ಮೂರನೇ ಅವಧಿಗೆ ಚೀನಾ ಅಧ್ಯಕ್ಷರಾಗಿ ಮತ್ತು ದೇಶದ ಕೇಂದ್ರ ಮಿಲಿಟರಿ ಆಯೋಗದ ಮುಖ್ಯಸ್ಥರನ್ನಾಗಿ ಸರ್ವಾನುಮತದಿಂದ ಪುನರ್ ಆಯ್ಕೆ ಮಾಡಿತು. ಕ್ಸಿ ಪರ 2,952 ಮತಗಳು ಬಂದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED A COOK
(Female) for a Vegetarian's Family at Ramakrishna Nagar, Mysuru. Interested Persons may please contact between 5.30pm to 8.00pm
70197 95649

ಸೈಟು ಮಾರಾಟಕ್ಕಿದೆ
'ಬಿ' ಖಾತಾ ಸೈಟು 30x40 ಔಟ್‌ಹೌಸ್ ಮತ್ತು ಕಾಂಪೌಂಡ್ ಹೊಂದಿದೆ. ಕೆನರಾ ಬ್ಯಾಂಕ್ ಮುಂಭಾಗದ ರಸ್ತೆ, ಬೆಳವಾಡಿ.
ಸಂಪರ್ಕಿಸಿ : 98454 30098

ಉಚಿತ ತರಬೇತಿ
ಮನೆಯಿಂದಲೇ ಬತ್ತಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

SHOP FOR RENT
Size 12x23 Beside Kantharaj Urs Road, Near Annapurana Eye Hospital, Mysore.
9845322723
9741880668

ಸೈಟುಗಳು ಮಾರಾಟಕ್ಕಿವೆ
40x60 ಕಾರ್ಲೆ ಯೂಬಿಟ್ಯಾಟ್ ದಟ್ಟಗಳ್ಳಿ
30x40 ಹೊಸ ಆರ್.ಟಿ. ನಗರ ಹತ್ತಿರ
20x30 BEML ಲೇಔಟ್ ಹತ್ತಿರ.
Mob: 9740088990

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ ಮತ್ತು ಹಂಪಾಪುರ ಹೋಬಳಿಯಲ್ಲಿ ತೆಂಗಿನ ತೋಟ, ಮಾವಿನ ತೋಟ ಜಮೀನುಗಳು ಅಭಿವೃದ್ಧಿಪಡಿಸಲಾಗಿದೆ. ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ:
9945661696
9663793666

ಟೆಲಿಕಾಮ್ ಲೇಔಟ್
30x40 N/F ಸೈಟು @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

ಸೈಟು ಬೇಕಾಗಿದೆ
50x80 ಅಥವಾ 40x60 ಪೂರ್ವ ಅಥವಾ ಉತ್ತರ ದಿಕ್ಕು ಮಾತ್ರ ವಿಜಯನಗರ 1ನೇ ಹಂತ, 3ನೇ ಹಂತ, 4ನೇ ಹಂತ ಹಾಗೂ ಆನಂದ ಸಾಗರ ಬಡಾವಣೆ (ಸೇಂಟ್ ಜೋಸೆಫ್ ಶಾಲೆ ಎದುರು) ಸೈಟಿನ ಮಾಲೀಕರು ಸಂಪರ್ಕಿಸಿ. ಬ್ರೋಕರ್ ಬೇಡ
9986993988

FOR RENT
2 BHK House on 1st Floor with Car Parking area and open space available for house / office Hinkal (Vijayanagar 3rd Stage) Contact:
9481426957

RAJENDRA PLYWOOD AND HARDWARE
Wholesale Distributor for WPVC Door and Frames Off. Ashoka Road, (Near Clock Tower), Mysore.
9986360999
9916218232

ರೂಂ + 3BHK ಮನೆ ಬಾಡಿಗೆಗಿದೆ
1) ರೂಂ #18/ಬಿ, 6ನೇ ಮೈನ್, 8ನೇ ಕ್ರಾಸ್, ಸರಸ್ವತಿಪುರಂ, ಮೈಸೂರು –09.
2) 3 BHK ಮನೆ (ಹೊಸದು) ಭೋಗಾದಿ ಪಕ್ಕ ಎಸ್.ಬಿ.ಎಂ ಲೇಔಟ್‌ನಲ್ಲಿ ಇದೆ.
ಸಂಪರ್ಕಿಸಿ: 9483051207

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
27/3:–ಕಾಶಿ , ಗಯಾ, ಬುದ್ಧಗಯಾ, ಅಯೋಧ್ಯಾ
17/4:– ಜಾರ್ಖಂಡ್, ಕೋಲ್ಕತ್ತಾ, ಭುವನೇಶ್ವರ, ಪುರಿ ಜಗನ್ನಾಥ್, ಕೊನಾರ್ಕ್.
26/4:–ಜಮ್ಮು, ಕಾಶ್ಮೀರ, ವೈಷ್ಣೋದೇವಿ, ಪಂಜಾಬ್
8/5:– ಗುಜರಾತ್, ನಾಗನಾಥ, ಸೋಮನಾಥ, ದ್ವಾರಕಾ.
8/6:–ಚಾರ್ಧಾಮ ಯಾತ್ರೆ ಕೇದಾರನಾಥ, ಬದರಿನಾಥ್, ಗಂಗೋತ್ರಿ, ಯಮುನೋತ್ರಿ
9591017782 / 9964527782

ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ ಮೂರನೇ ಹಂತ, ಮುಡಾ ಸೈಟು 30x40 ಪಶ್ಚಿಮ ದಿಕ್ಕು ಮಾರಾಟಕ್ಕಿದೆ.
9663793666

ದಿನಸಿ ಅಂಗಡಿ ಮಾರಾಟಕ್ಕಿದೆ
ಚೆನ್ನಾಗಿ ನಡೆಯುತ್ತಿರುವ ದಿನಸಿ ಅಂಗಡಿ ಜೈ ಮಾರುತಿ ಭಂಡಾರ್ ಪ್ರಾವಿಷನ್ ಸ್ಟೋರ್ 100/1, ಕೆ.ಆರ್.ಮೊಹಲ್ಲಾ, ತ್ಯಾಗರಾಜ ರಸ್ತೆ, ಚಿಕ್ಕಾಂಜನೆಯ ದೇವಸ್ಥಾನ ಮುಂಭಾಗ, ಮೈಸೂರು – 570004 (ಬೆಲೆ ಮರದ ರ್‍ಯಾಕ್ ಮತ್ತು ಸಾಮಾನು 2 ಲಕ್ಷ, ಅಂಗಡಿ ಅಡ್ವಾನ್ಸ್ 2 ಲಕ್ಷ ಒಟ್ಟು 4 ಲಕ್ಷ)
7022135656 / 9538338623

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕು. ಆಕರ್ಷಕ ಸಂಬಳ ಅನುಭವವುಳ್ಳವರಿಗೆ ಆದ್ಯತೆ. ಪುರುಷರು ಮಾತ್ರ. ಕುವೆಂಪುನಗರ ಸುತ್ತಮುತ್ತ.
9535370330

ದರ್ಶನ್ ಮ್ಯಾಟ್ರಿಮೋನಿಯಲ್
ಒಕ್ಕಲಿಗ, ಬ್ರಾಹ್ಮಣ, ವಿಶ್ವಕರ್ಮ ಆಚಾರಿ, ಮೊದಲಿಯರ, ಲಿಂಗಾಯತ ಹಾಗೂ 2ನೇ ಮದುವೆಗೆ ಸಂಪರ್ಕಿಸಿ:
9972355161
9740797851
ವಿನಾಯಕನಗರ, ಮೈಸೂರು

ಸೈಟುಗಳು ಮಾರಾಟಕ್ಕಿವೆ
DTCP APPROVED
ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ. 80% ಬ್ಯಾಂಕ್ ಲೋನ್ ದೊರೆಯುತ್ತದೆ.
Rs. 18 Lakh Onwards
Contact: 9945111044

CHANGE OF NAME
I, T.G. Pushpa Kumar, residing at # G04, Olive Block, Sankalp Central Park, JAVA Factory Road, Yadavagiri, Vivekananda Road, Industrial Estate, Yadavagiri, Mysore-570020, Kamataka State, India have changed my name from Pushpa Kumar to T.G. Pushpa Kumar on my own free will sworn in before Notary Geetha R, Mysuru, vide affidavit dated 09.03.2023. Sd/- T.G. Pushpa Kumar

HOME LOANS
CORPORATION, MUDA, KHB GRAMATHANA PROPERTY (9 & 11A, 11B Khata)
Site Purchase, Site Construction
House Purchase
Site Mortgage, house Mortgage
Contact: 9108416410

SITE FOR SALE
MUDA APPROVED
GATEWAY MYSORE 30 X 40 WEST FACE
80% BANK LOAN AVAILABLE (BROKER EXCUSE)
Opp. Manipal Hospital, Mys - Bang Ring Road Junction
Contact: 9945111044

SITE FOR SALE
40x60 North Facing MUDA Approved Attached to Vijayanagara 4th Stage, Near Rastrothana & SVEI School. Brokers Excuse
7892261935

CHANGE OF NAME
I, Anusha M.C. W/o Pramod D., Army No. 2619559W, Rank L/NK, aged about 32 years, residing at Kittur Kalyanigowdana Koppalu Village, Bettadapura Hobli, Periyapatna Taluk, Mysuru District, Karnataka State, India, have changed my Daughter's name from Danvitha Gowda K.P to Duti Gowda K.P. before the Notary Public, P.Geetha, Mysuru, vide Affidavit Doc. No.93/2023 dated 16-02-2023. Now onwards she will be known and called as Duti Gowda K.P. Sd/- Anusha M.C

HOUSE PLANNING & DESIGN
Service Provided
* 2D Plan
* Structural Detailing
* 3D Elevation & Walk Through
Starting @ Just Rs.3999/-
Er. Pavan Thambanda
9535305686

ಮಾರಾಟಕ್ಕಿದೆ
ಹೂಟಗಳ್ಳಿ, ಕೆ.ಎಚ್.ಬಿ 40x60 ಸೈಟ್, ಸಿಗ್ನಲ್ ಹತ್ತಿರ, ಪಶ್ಚಿಮ ದಿಕ್ಕು ಮಾರಾಟಕ್ಕಿದೆ.
9448054390

ಸಾಲ / LOANS
* House Purchase Loan
* Site Purchase Loan
* Construction Loan
* Mortgage Loan
MUDA, Corporation & Revenue Property
7760598705

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಮನೆ ಬಾಡಿಗೆಗೆ ಇದೆ
ವಾಸು ಲೇಔಟ್, ರಾಮಕೃಷ್ಣನಗರ, ಮೈಸೂರು 30x40 ಅಳತೆಯ 2 ಬೆಡ್ ರೂಂ ಉಳ್ಳ ಮನೆಯು ಬಾಡಿಗೆಗೆ ಇದೆ. ಮೊದಲನೇ ಮಹಡಿ. ಸಂಪರ್ಕಿಸಿ:
7676736673 / 9481211961

ಹೋಂನರ್ಸಿಂಗ್ ಕೆಲಸ & ಸೇವ
ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳುವವರು ತಕ್ಷಣ ಸಂಪರ್ಕಿಸಿ ಹಾಗೂ ಹೋಂನರ್ಸಿಂಗ್ ಸೇವೆ ಬೇಕಾದಲ್ಲಿ ಸಂಪರ್ಕಿಸಿ:
7483960098
9739292222

ಸೈಟ್ ಮಾರಾಟಕ್ಕಿದೆ
ಬೋಗಾದಿ, ರೂಪಾನಗರ, 40x60 ಕಾಲೇಜ್ ರಸ್ತೆ, 15ನೇ ಕ್ರಾಸ್, ಖರೀದಿದಾರರು ಸಂಪರ್ಕಿಸಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. MUDA ಖಾತೆ
9342119411

ಬೇಕಾಗಿದ್ದಾರೆ
ಟೆಲಿಕಾಲರ್ಸ್ – 10
ಟೀಮ್ ಲೀಡರ್ಸ್ – 05
ಫೀಲ್ಡ್ ಎಕ್ಸಿಕ್ಯೂಟಿವ್ಸ್ – 10
ಮೈಸೂರಿನ ಕಲೆಕ್ಷನ್ ಕಚೇರಿಯಲ್ಲಿ ಕೆಲಸ ಮಾಡಲು ಈ ಮೇಲ್ಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8867574400 / 8861993337

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಮನೆಯಿಂದಲೇ ಕೆಲಸ
ಪುಸ್ತಕ–ಬರೆಯುವುದು, ಡಾಟಾ ಎಂಟ್ರಿ, ಟೆಲಿಕಾಲಿಂಗ್ ಕೆಲಸ : ವಿದ್ಯಾರ್ಥಿಗಳು, ಗೃಹಿಣಿಯರು, ನಿರುದ್ಯೋಗಿಗಳು, ನಿವೃತ್ತ ನೌಕರರು ಮನೆಯಿಂದಲೇ ಕೆಲಸ ಮಾಡಿ ಉತ್ತಮ ಹಣವನ್ನು ಗಳಿಸಿ. ವಿದ್ಯಾರ್ಹತೆ ಅನುಭವ ಹಾಗೂ ಭಾಷೆಯ ಸಮಸ್ಯೆ ಇಲ್ಲ. ತಿಂಗಳಿಗೆ 15000 ರಿಂದ 30000 ಸಂಪಾದಿಸಿ.
7204299422 | 9980299833

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

MUDA APPROVED SITES FOR SALE
1.5 kms from Shree Nagar
20x30 - 15 lakhs
24x30 - 18 lakhs
Booking Amount 2 lakhs only
98800 65122 / 77956 09173

WANTED
Teaching staff for reputed institution (Experience Preferred) for all Subjects. Transport facilities available. Drop Your resume through WhatsApp. Contact No.
8971577685
9980631121

MUDA APPROVED SITES AVAILABLE
1) ಹುಣಸೂರು ರೋಡ್
2) ಕೆ.ಆರ್.ಎಸ್ ರೋಡ್ (ಕೆ.ಆರ್.ಎಸ್)
3) ಮಹದೇವಪುರ ರೋಡ್
30x40, 30x50, 40x60
9880547085

(30X40) SALE
@ "OLIVE ENCLAVE" Mys - B'Lore High Way 3km from Columbia Hospital. 28 Lakhs
9538839926

Change of Name
I, Alkadevi Anilkumar Kothari, residing at No. 333, Ananda Marga, Siddartha Nagara, Mysuru-570 011, have changed my name as Alka Anilkumar Kothari, on my own free will, in front of Notary C.R. Seetharam on 7-3-2023. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of Alka Anilkumar Kothari.
Sd/- Alka Anilkumar Kothari

AMAZE

SUNZONE SOLAR SYSTEM
VM Double Road, Kuvempunagar, Mysuru
9845175443

ನಾಟಿ ಔಷಧ
ಮಂಡಿನೋವು ಎಷ್ಟು ಹಳೆಯದಾದರು ನಾವು ಕೊಡುವ ನಾಟಿ ಔಷಧಿಯಿಂದ ಕೇವಲ 15 ದಿನಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ. # 2129, ಶ್ರೀ ರಾಮಮಂದಿರ, ದೇವರಾಜ ಮಾರ್ಕೆಟ್ ಹಿಂಭಾಗ, ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570001
8884766288
7829087682

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ: 8861612486

SHOP FOR RENT
1) ಸಂತೇಪೇಟೆ 1st Floor, Mysore
2) ಬನುಮಯ್ಯ ಸರ್ಕಲ್ ಹತ್ತಿರ ಕೆಂಪನಂಜಾಂಬ ಅಗ್ರಹಾರ Ground Floor, Main Road, Mysore. Contact:
9448150597

SITE FOR SALE
Anuradha Avenue 30x40, 30x50, 40x60 MUDA Approved Ready to Register. OFF to KRS Road, Near J.K Tyres. Contact:
8660352905

ಮೈಸೂರು ಮ್ಯಾರೇಜ್ ಬ್ಯೂರೋ
ವಧು ವರರನ್ನು ಹುಡುಕಲು ಸಹಾಯಬೇಕೆ ? ನಮಗೆ ಕರೆ ಮಾಡಿ. ಡಾ. ಗುರೂಜಿ, ಮೈಸೂರು
9448229184, 7899625268

ಕಳೆದಿದೆ
ತಡಪಲ್ಲಿ ರಮೇಶ್ ಕುಮಾರ, ನಂ. 427, ಊಟಿ–ನಂಜನಗೂಡು ರಸ್ತೆ, ಎಸ್‌ಜಿಎಸ್ ಆಶ್ರಮ, ಬಂಡಿಪಾಳ್ಯ, ಮೈಸೂರು, ಆದ ನಾನು ಮೈಸೂರು ತಾಲ್ಲೂಕು, ವರುಣ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೆ ನಂ. 198/1 ರಲ್ಲಿ 1 ಎಕರೆ ಜಮೀನನ್ನು ಖರೀದಿಸಲು ಶ್ರೀ ಮೆಕಟ ಶ್ರೀನಿವಾಸಲು ಬಿನ್ ಶ್ರೀ ನಂಜಯ್ಯರವರು ದಿನಾಂಕ 6–09–2013 ರಂದು ಜಿಪಿಎ (ಸಾಮಾನ್ಯ ಅಧಿಕಾರ ಪತ್ರ) ಪತ್ರವನ್ನು ಮಾಡಿಕೊಟ್ಟಿದ್ದು, ಸದರಿ ಮೂಲ ಜಿಪಿಎ ಪತ್ರ ಹಾಗೂ ಅದರೊಂದಿಗೆ ಇತರೆ ದಾಖಲಾತಿಗಳು ಎಸ್‌ಜಿಎಸ್ ಆಶ್ರಮದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9243580116

SITES FOR SALE
Approved by MUDA
Bank loan available
20x30, 20x40, 30x60, 30x40
Bogadi Road, Vijayanagar 4th Stage backside.
9945489666, 9632454592

FOR SALE
* 30x40 House for sale in JP Nagar, Near Police booth.
* 20x40 site for sale near JP Nagar Ring Road.
* 45x60 Old house for sale in Vidyaranyapuram.
* 28x41 Site for sale near Dattagalli.
Mob: 9880344263

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000/–
*ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361, 9380885787

ಹೊಸ ಮನೆ ಭೋಗ್ಯಕ್ಕೆ ಇದೆ
1 BHK ಒಂದು ಮನೆ ಭೋಗ್ಯಕ್ಕೆ ಇದೆ. ಸೋಲರ್ & ಗೀಜರ್ ವ್ಯವಸ್ಥೆ. 19ನೇ ಕ್ರಾಸ್, ಬಿಎಂಸಿ ನಗರ, ಮೈಸೂರು.
8368448384 / 9743198130

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,500/–, ESI ಮತ್ತು PF ಊಟ, ತಿಂಡಿ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:–
9620777819
9538567819

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಹಾಗೂ ಪರ್ಸನಲ್ ಲೋನ್ ಮಾಡಿಕೊಡುತ್ತೇವೆ. 12,000 ಮೇಲೆ 50,000 ಸಂಬಳ, ಪಿಎಫ್ ಡಿಡಕ್ಷನ್ ಆಗಿ ಅಕೌಂಟ್‌ಗೆ ಬರುವವರಿಗೆ 30,000 ರಿಂದ 50,000ದ ವರೆಗೂ ಲೋನ್ ಮಾಡುತ್ತೇವೆ ಹಾಗೂ ಈ ಕೆಳಗಿನ ರೆವಿನ್ಯೂ ಸ್ಥಳಗಳಿಗೆ ರಾಘವೇಂದ್ರ ನಗರ, ಕನಕಗಿರಿ, ಜನತಾ ನಗರ, ಲೋಕನಾಯಕ ನಗರ, ಗಣೇಶ್ ನಗರ, ಮಹದೇವಪುರ ಲೋನ್ ಮಾಡುತ್ತೇವೆ.
8088647887

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ತಾಂಡ್ಯ, ಹಿಮ್ಮಾವು, ಬೇಗೂರು ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 17,000/–, ESI, PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:–
9620667819
9538567819

MUDA SITE FOR SALE
Dattagalli, Near Ring Road, 40x40
9986592352

S.K. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸಮನೆ ಮತ್ತು Altration work, Plan, 3D Elevation ಸಹಿತ ಕಟ್ಟಿಕೊಡುತ್ತೇವೆ.
ಮೊ: 9620528490

ಮದುವೆ, ಶುಭ ಸಮಾರಂಭಗಳಿಗೆ
ಕಾಂಚೀಪುರಂ ರೇಷ್ಮೆಸೀರೆಗಳು 50% ರಿಯಾಯಿತಿ ಮತ್ತು ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಹೋಟೆಲ್ ಮಯೂರ ಯಾತ್ರಿನಿವಾಸ್
ಜೆ.ಎಲ್.ಬಿ. ರಸ್ತೆ, ಮೈಸೂರು - 5
ಮೊ. : 9481820079

WANTED 30 LAKHS LOAN
@ 1.5% per month rate of interest against security of Regd. Mortgage Deed of a MUDA Site worth more than 90 Lakhs.
Call: 6360231221

ವಧು–ವರರ ಮಾಹಿತಿ ಕೇಂದ್ರ
ಒಕ್ಕಲಿಗ/ ಲಿಂಗಾಯತ/ ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE/B.Tech/MBA/MS/MBBS/MD ಹಾಗೂ ಎಲ್ಲಾ ಡಿಗ್ರಿ/ ಮಾಸ್ಟರ್ಸ್ ಡಿಗ್ರಿ ದೇಶಿಯ/ ವಿದೇಶಿಯ ವಧು–ವರರ ಮಾಹಿತಿಗೆ ಸಂಪರ್ಕಿಸಿ.
ಅಂಚೆ ಪೇದೆ ಮ್ಯಾಟ್ರಿಮೋನಿ
ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು
7259395800 / 7349224222

S.K. CONSTRUCTION
BEML II Stage, Rajarajeshwari Nagar 20x30 ಸೈಟಿನಲ್ಲಿ 2 BHK / Duplex ಮನೆ 80% Loan ಮಾಡಿಸಿ 3D Elevation ಸಹಿತ ಉತ್ತಮ ಗುಣಮಟ್ಟದಲ್ಲಿ ಕಟ್ಟಿಕೊಡುತ್ತೇವೆ.
ಮೊ: 9620528490

ಮಾಂಗಲ್ಯಂ ವಧು ವರರ ಸಂಗಮ
ಈಡಿಗ, ಒಕ್ಕಲಿಗ, ಕುರುಬ, ಕುಂಬಾರ, ನಾಯಕ, ತೆಲುಗು, ಬಣಜಿಗ, ನಾಯ್ಡು, ತಮಿಳು ಗೌಂಡರ್, ಪಿಳ್ಳೈ, ಮೊದಲಿಯಾರ್, ಬೋಯಸ್, ಲಿಂಗಾಯತ, ವಧುವರರ ಮಾಹಿತಿಗಾಗಿ ಸಂಪರ್ಕಿಸಿ. ವಿಧುರ, ವಿಧವೆಯರು, ಎರಡನೇ ವಿವಾಹ ಬಯಸುವವರೂ ಸಂಪರ್ಕಿಸಬಹುದು.
Vijay Hangal
8296514367

ಮನೆ ಭೋಗ್ಯಕ್ಕೆ ಇದೆ
2 BHK, ಸೋಲಾರ್ ಸೌಲಭ್ಯ, 24 ಗಂಟೆ ನೀರಿನ ಸೌಲಭ್ಯ ದೊರೆಯುತ್ತದೆ. ಮೊದಲನೇ ಮಹಡಿ, ಉತ್ತರ ಮತ್ತು ಪಶ್ಚಿಮ ದಿಕ್ಕಿನ ಮನೆಗಳು ಇರುತ್ತದೆ. ಮನೆ ನಂ. 2458/ಕೆ8, 12ನೇ ಕ್ರಾಸ್, ಬಸವೇಶ್ವರ ರಸ್ತೆ, (ಅಗ್ರಹಾರ) ಮೈಸೂರು–4
9945615679
9916019102

WANTED
* Teacher * Principal
* Marketing Executive
* Telecaller * Sales Executive
* Office work * Field Executive
Contact
9743283001

FOR SALE
1) 30x40 13 lakhs sites in Defence Apartment Near Kote Road. (2) 30x40 12 lakhs Yelwala. (3) 40x60 site in before Brahmins layout Near Ring Road. (4) 17x60, 3 BHK Kamakshi Hospital Near Saraswathipuram. (4) 30x40 duplex House Srirampura. (5) 40x60 N/E Corner Aravind Nagar. (6) 12x36 House G+2 Kuvempunagar
90359 90359, 95386 90359

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ಕ್ಯಾಪ್ಟನ್ –2, ಸಪ್ಲೆಯರ್ಸ್–3, ವಾಶಿಂಗ್–3, ಕ್ಲೀನರ್ ಹೌಸ್‌ಕೀಪರ್–3. ಕೂಡಲೇ ಸಂಪರ್ಕಿಸಿ:
7899929233

SITE FOR SALE
KRS Nisarga Badavane - Yelwala-Mysore, East Face, Dimension 30x50 Rate: 1600/ Sq.ft. Negotiable. Owner:
9449019958

WANTED
Candidate with BE / B.Sc/M.Sc/ PUC Science / B.Com / BBA/ MSW / Qfn. (Veg food + Stay + Sal. from 12k to 25k) Divya Deepa Charitable Trust, Mysuru. Contact:
9341369901 / 9538499901
8088586087
www.divyadeepatrust.org

HOUSE FOR SALE
(Newly Built) 20x30 #4083, North Face, (Ground & First Floor) 7th Cross, Vijayanagar 2nd Stage, Near K D Circle / Mysore. 78 Lakhs & Negotiable
9019873824 / 8310063311

ಬೇಕಾಗಿದ್ದಾರೆ
ಉಚಿತ ನರ್ಸಿಂಗ್ ತರಬೇತಿ, 15 ವರ್ಷದಿಂದ ಸರ್ಕಾರದಿಂದ ಅನುಮತಿ ಪಡೆದಿರುವ ವರಧಾನಿ ನರ್ಸಿಂಗ್ ಕಂಪನಿಗೆ ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು 8th, 9th, 10th, PUC ಪಾಸ್ ಫೇಲಾದ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ಉಳಿದು ಕೊಳ್ಳಲು ಊಟ, ತಿಂಡಿ ESI, PF ನರ್ಸಿಂಗ್ ಯುನಿಫಾರ್ಮ್ ಇರುತ್ತದೆ.
8951717170

ಮನೆ ಮಾರಾಟಕ್ಕಿದೆ
* 20x30 3BHK Duplex
* Pillar Construction
* Granite Flooring
* Attached Bathroom
* Rs.77 Lakhs Negotiable
* University Layout, Mysore
7022759977
9448425692

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು – ವರರಿಗಾಗಿ ಕೂಡಲೇ ಸಂಪರ್ಕಿಸಿ
(2nd Marriages Also)
9343175000

ಕಮರ್ಷಿಯಲ್ ಸೈಟ್ ಮಾರಾಟಕ್ಕೆ
50x80
8217786985

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ ಶನಿವಾರ 11 ಮಾರ್ಚ್ 2023



ಚಿಕ್ಕಬ್ಯಾಡರಹಳ್ಳಿ ಸರ್ಕಲ್‌ನಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ

ಶಾಸಕ, ಸಂಸದನಾಗಿ ಜನರ ಕಷ್ಟ-ಸುಖಕ್ಕೆ ಸ್ಪಂದಿಸಿದ್ದೇನೆ

ಶಾಸಕ ಸಿ.ಎಸ್.ಪುಟ್ಟರಾಜು



ಪಾಂಡವಪುರ, ಮಾ.10– ಶಾಸಕ, ಸಂಸದನಾಗಿ ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದ್ದೇನೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಚಿಕ್ಕಬ್ಯಾಡರಹಳ್ಳಿ ಸರ್ಕಲ್ ನಲ್ಲಿ ನಡೆದ ಚಿಕ್ಕಾಡೆ ಜಿಪಂ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 3 ಬಾರಿ ಶಾಸಕನಾಗಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದ್ದೇನೆ. ಕ್ಷೇತ್ರದ ಜನ ಸೇವೆಗಾಗಿ ನನ್ನ ಇಡೀ ಕುಟುಂಬವನ್ನೇ ಮುಡುಪಾಗಿ ಟ್ಟಿದ್ದು, ನಾವು ದುಡಿದ ಹಣದಲ್ಲಿ ಕ್ಷೇತ್ರದ ಜನರ ಸೇವೆ ಮಾಡುತ್ತಿದ್ದೇನೆ ಎಂದರು.

> **ಅಮೆರಿಕಾದಲ್ಲಿ ಉನ್ನತ ವಿದ್ಯಾಭ್ಯಾಸ ಮುಗಿಸಿದ ನನ್ನ ಮಗ ಸಿ.ಪಿ.ಶಿವರಾಜು ಅಲ್ಲೇ ಸ್ವಂತ ಕಂಪನಿ ಸ್ಥಾಪಿಸುವ ಎಲ್ಲಾ ಅವಕಾಶಗಳಿತ್ತು. ಆದರೆ ನಾನು ನಮಗೆ ಎಲ್ಲವನ್ನು ಕೊಟ್ಟ ಕ್ಷೇತ್ರದ ಜನರಿಗಾಗಿ ನಾವು ಬದುಕಬೇಕು. ನೀನು ಎಷ್ಟೇ ಓದಿದರೂ ನಿನ್ನ ಸೇವೆ ನನ್ನ ಜನರಿಗೆ ಮೀಸಲಿಡಬೇಕು ಎಂದು ಸೂಚಿಸಿದ ಮೇರೆಗೆ ನನ್ನ ಮಗ ನಮ್ಮ ದೇಶಕ್ಕೆ ವಾಪಸ್ಸಾಗಿ ಕ್ಷೇತ್ರದ ಜನರ ಸೇವೆ ಮಾಡುತ್ತಿದ್ದಾನೆ. ನನ್ನ ಅಣ್ಣನ ಮಕ್ಕಳು ಸೇರಿದಂತೆ ಎಲ್ಲರನ್ನು ನನ್ನ ಜನರ ಸಮಸ್ಯೆ ಆಲಿಸಲು ಒಂದೊಂದು ಹೋಬಳಿಗೆ ಒಬ್ಬರನ್ನು ನೇಮಿಸಿ ನಾವು ದುಡಿದ ಒಂದಿಷ್ಟು ಹಣದಲ್ಲಿ ಜನಸೇವೆ ಮಾಡುವಂತೆ ಸೂಚಿಸಿದ್ದೇನೆ.**
>
> – **ಸಿ.ಎಸ್.ಪುಟ್ಟರಾಜು,** ಶಾಸಕ.

ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿದ ಕೋವಿಡ್ –19 ಸಂದರ್ಭ ಕ್ಷೇತ್ರದ ಜನರಿಗಾಗಿ ನನ್ನ ಪ್ರಾಣ ಲೆಕ್ಕಿಸದೇ ಕೆಲಸ ಮಾಡಿ ಜನತೆಗೆ ಚಿಕಿತ್ಸೆ, ಔಷಧ ಸೌಲಭ್ಯಗಳನ್ನು ಒದಗಿಸಿದ್ದೇನೆ ಎಂದರು. ಸಣ್ಣ ನೀರಾವರಿ ಸಚಿವನಾಗಿ ಕ್ಷೇತ್ರದ ಎಲ್ಲಾ ಭಾಗಕ್ಕೂ ನೀರಾವರಿ ಸೌಲಭ್ಯ ಕಲ್ಪಿಸಿದ್ದೇನೆ. ದುದ್ದ ಹೋಬಳಿಗೆ 188 ಕೋಟಿ ವೆಚ್ಚದಲ್ಲಿ ಕೆರೆ ತುಂಬಿಸುವ ಯೋಜನೆ, ಮೇಲುಕೋಟೆ, ಚಿನಕುರಳಿ ಭಾಗಕ್ಕೂ ಹಲವು ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಅನುಕೂಲ ಮಾಡಿಕೊಟ್ಟಿದ್ದೇನೆ ಎಂದರು.

2004ರಲ್ಲಿ ನಾನು ಮೊದಲ ಬಾರಿಗೆ ಶಾಸಕನಾದಾಗ ಕ್ಷೇತ್ರದಲ್ಲಿ ಒಂದೇ ಒಂದು ವಿದ್ಯುತ್ ಉಪಕೇಂದ್ರವಿತ್ತು. ಅದರಿಂದಲೇ ಇಡೀ ತಾಲೂಕಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು. ಎಲ್ಲಾದರೂ ಒಂದು ಕಡೆ ವಿದ್ಯುತ್ ಸಮಸ್ಯೆಯಾದರೆ ಇಡೀ ಕ್ಷೇತ್ರವೇ ಕತ್ತಲಲ್ಲಿ ಕಳೆಯುವ ಪರಿಸ್ಥಿತಿ ಇತ್ತು. ನಾನು ಶಾಸಕನಾದ ಬಳಿಕ ಹೋಬಳಿಗೆ 2 ವಿದ್ಯುತ್ ಸಬ್‌ಸ್ಟೇಷನ್ ನಿರ್ಮಿಸಿದ್ದೇನೆ ಎಂದರು. ಮುಂಬರುವ ದಿನಗಳಲ್ಲಿ ಕ್ಷೇತ್ರದಲ್ಲಿ ಮತ್ತಷ್ಟು ಜನಸೇವೆ ಮಾಡಲು ಮತ್ತೊಮ್ಮೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ. ಯಶ್ವಂತ್ ಕುಮಾರ್ ಮಾತನಾಡಿ, ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರದ ಶಾಸಕರಾಗಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕಾವೇರಿ ನದಿಯಿಂದ ನೀರು ತಂದು ಕೊಡುವ ವಿಷಯ ಅಷ್ಟು ಸುಲಭವಲ್ಲ. ಜನರ ಕಷ್ಟ ಕಾರ್ಪಣ್ಯಗಳಿಗೆ ತಕ್ಷಣ ಸ್ಪಂದಿಸುತ್ತಿದ್ದಾರೆ. ಅದರಲ್ಲೂ ಕೋವಿಡ್ ಸಂದರ್ಭ ಇವರ ಸೇವಾ ಕಾರ್ಯ ಜನಮೆಚ್ಚುವಂತಹದ್ದು ಎಂದರು

ಇದೇ ವೇಳೆ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಕಾರ್ಯಕರ್ತರು ಬೆಳ್ಳಿ ಗದೆ ನೀಡಿ ಅಭಿನಂದಿಸಿದರು. ಕಳೆದ ಗ್ರಾಪಂ, ಡೇರಿ, ವಿಎಸ್‌ಎಸ್‌ಎನ್‌ವಿ ಚುನಾವಣೆಯಲ್ಲಿ ಆಯ್ಕೆಯಾದ, ಸೋತ ಎಲ್ಲಾ ಅಭ್ಯರ್ಥಿಗಳನ್ನೂ ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಜೆಡಿಎಸ್ ತಾಲೂಕು ಅಧ್ಯಕ್ಷ ಮಲ್ಲೇಶ್, ಸಿ.ಪಿ.ಶಿವರಾಜು, ಚೇತನ್, ಟಿಎಪಿಸಿಎಂಎಸ್ ನಿರ್ದೇಶಕ ಡಿ.ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು, ಉಪಾಧ್ಯಕ್ಷೆ ಶ್ವೇತ, ಪುರಸಭ ಮಾಜಿ ಅಧ್ಯಕ್ಷ ಪಿ.ಎಸ್.ಲಿಂಗರಾಜು, ಉದ್ಯಮಿ ಮಧುಸೂದನ್, ವಿ.ಎಸ್.ನಿಂಗೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಎಚ್.ಎಸ್.ವಿ. ಸ್ವಾಮೀಗೌಡ, ಮುಖಂಡರಾದ ಬೊಮ್ಮರಾಜು, ಆನಂದ್, ಚನ್ನೇಗೌಡ, ಸಿ.ಎನ್. ಚೇತನ್, ಪಾಂಡು, ಡೇರಿ ಮಾಜಿ ಅಧ್ಯಕ್ಷ ಸಿ.ಎನ್.ಚಂದನ್ ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಸುಮಲತಾ ಬೆಂಬಲ: ಮಂಡ್ಯದಲ್ಲಿ ಬಿಜೆಪಿ ಕಮಾಲ್?

ಮಂಡ್ಯ, ಮಾ.10– ಸಂಸದೆ ಸುಮಲತಾ ಅಂಬರೀಶ್ ಬಿಜೆಪಿಗೆ ಬೆಂಬಲ ಘೋಷಿಸಿರುವುದು ಪಕ್ಷಕ್ಕೆ ದೊಡ್ಡ ಶಕ್ತಿ ಬಂದಂತಾಗಿದೆ. ಆದರೆ ಇದು ಚುನಾವಣೆ ವೇಳೆ ಪಕ್ಷಕ್ಕೆ ಎಷ್ಟರ ಮಟ್ಟಕ್ಕೆ ಲಾಭ ತಂದುಕೊಡಲಿದೆ ಎಂಬ ವಿಶ್ಲೇಷಣೆ ಆರಂಭವಾಗಿದೆ.



ಪಕ್ಷೇತರರಾಗಿ ಗೆದ್ದವರು ಗೆದ್ದ 6 ತಿಂಗಳಲ್ಲಿ ಪಕ್ಷವೊಂದಕ್ಕೆ ಸೇರ್ಪಡೆಯಾಗಲು ಅವಕಾಶವಿದ್ದು, ಸದ್ಯ ಸುಮಲತಾ ಗೆದ್ದು 4 ವರ್ಷಗಳಾಗಿರುವುದರಿಂದ ಇದೀಗ ಅವರಿಗೆ ಪಕ್ಷ ಸೇರ್ಪಡೆಗೆ ಅವಕಾಶವಿಲ್ಲದ ಕಾರಣ ಕೇವಲ ಬೆಂಬಲ ಘೋಷಿಸಿದ್ದಾರೆ. ಒಂದು ವೇಳೆ ಅವರು ಪಕ್ಷಕ್ಕೆ ಸೇರಬೇಕೆಂದರೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಬಹುದಾಗಿದೆ.

ಮಂಡ್ಯ ಕ್ಷೇತ್ರದ ಮೇಲೆ ಸುಮಲತಾ ಕಣ್ಣು: ಸುಮಲತಾ ಅಂಬರೀಶ್‌ಗೆ ರಾಜ್ಯ ರಾಜಕಾರಣಕ್ಕೆ ಬರಲು ಆಸಕ್ತಿ ಇದ್ದು, ಅದರಲ್ಲೂ ತಮ್ಮ ಪತಿ ಅಂಬರೀಶ್ ಪ್ರತಿನಿಧಿಸುತ್ತಿದ್ದ ಮಂಡ್ಯ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ಸದ್ಯ ಸುಮಲತಾ ಮಂಡ್ಯದಿಂದ ಬಿಜೆಪಿ ಅಭ್ಯರ್ಥಿಯಾಗಬೇಕೆಂದರೆ, ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ಸ್ಪರ್ಧಿಸಬೇಕು. ಇಲ್ಲದಿದ್ದರೆ ಕಳೆದ ಬಾರಿಯಂತೆ ಪಕ್ಷೇತರವಾಗಿ ಸ್ಪರ್ಧಿಸಿ, ಬಿಜೆಪಿ ಬೆಂಬಲ ಪಡೆಯಬೇಕು. ಒಂದು ವೇಳೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ವಿಧಾನ ಸಭೆಗೆ ಸ್ಪರ್ಧಿಸಿದರೆ ಗೆಲ್ಲಲೇಬೇಕಾದ ಒತ್ತಡವಿದೆ. ಒಂದು ವೇಳೆ ಸೋತರೆ, ಎರಡೂ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ.

ಸುಮಲತಾ ಸ್ಪರ್ಧಿಸಿದರೆ ಹೆಚ್ಚಿಕೆ ಬರುವ ಸಾಧ್ಯತೆ: ಸುಮಲತಾ ಒಂದು ವೇಳೆ ಮಂಡ್ಯದಿಂದ ಸ್ಪರ್ಧಿಸಿದರೆ ಎದುರಾಳಿಯಾಗಿ ಜೆಡಿಎಸ್‌ನಿಂದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಣಕ್ಕಿಳಿಯಬಹುದೆಂಬ ಗುಸು ಗುಸು ಚರ್ಚೆ ಜೆಡಿಎಸ್ ವಲಯದಲ್ಲೇ ಇದೆ. ಹಾಗೊಂದು ವೇಳೆ ಸುಮಲತಾ ವಿರುದ್ಧ ಹೆಚ್ಡಿಕೆ ಸ್ಪರ್ಧಿಸಿದರೆ 2019ರ ಚುನಾವಣೆಯಂತೆ ಮಂಡ್ಯ ಚುನಾವಣೆ ರಂಗು ಪಡೆಯಲಿದೆ.

ಬಿಜೆಪಿಗೆ ದೊಡ್ಡ ಶಕ್ತಿ: ಕಳೆದ 2 ದಶಕಗಳಿಂದ ಮಂಡ್ಯದಲ್ಲಿ ಬಿಜೆಪಿ ಕಟ್ಟಬೇಕು ಎಂಬ ಬಿಜೆಪಿ ಕನಸು ನನಸಾಗಿಲ್ಲ. 2019ರಲ್ಲಿ ಕೆ.ಆರ್.ಪೇಟೆಯಲ್ಲಿ ಕಮಲ ಅರಳಿ, ಮಂಡ್ಯ ಜಿಲ್ಲೆಯಲ್ಲಿ ಮೊದಲ ಬಾರಿಗೆ ಬಿಜೆಪಿ ಗೆದ್ದಿತು ಎಂಬ ಉತ್ಸಾಹ ಜಿಲ್ಲಾ ಬಿಜೆಪಿ ಮುಖಂಡರಿಗೆ ಬಂತಾದರೂ ಕೆ.ಆರ್.ಪೇಟೆಯಿಂದ ಗೆದ್ದ ಕೆ.ಸಿ.ನಾರಾಯಣಗೌಡ ಮಂತ್ರಿಯಾಗಿ ಕೇವಲ ಕ್ಷೇತ್ರಕ್ಕೆ ಸೀಮಿತವಾದರೇ ಹೊರತು ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡಲಿಲ್ಲ. ಈಗ ಕಾಂಗ್ರೆಸ್ ಸೇರುವ ಉತ್ಸಾಹದಲ್ಲಿದ್ದಾರೆ. ಆರ್.ಅಶೋಕ್, ಗೋಪಾಲಯ್ಯ, ಅಶ್ವತ್ಥ್ ನಾರಾಯಣ್ ಸಂಘಟನೆಗೆ ಮುಂದಾದರೂ ಜಿಲ್ಲೆಯವರಲ್ಲದ ಕಾರಣ ಜನಕ್ಕೆ ಅಷ್ಟು ಕನೆಕ್ಟ್ ಆಗಲಿಲ್ಲ. ಈ ನಿಟ್ಟಿನಲ್ಲಿ ಅಂಬರೀಶ್ ಪತ್ನಿ ಎಂಬ ಹೆಗ್ಗಳಿಕೆ, ತಾರಾ ವರ್ಚಸ್ಸು, ಸ್ವಾಭಿಮಾನದ ಹೆಸರಲ್ಲಿ ಚುನಾವಣೆ ಗೆದ್ದ ಸುಮಲತಾ ಆಗಮನದಿಂದ ಮಂಡ್ಯದಲ್ಲಿ ಬಿಜೆಪಿ ಪಕ್ಷ ಕಮಾಲ್ ಮಾಡಲಿದೆಯಾ ಎಂಬುದನ್ನು ಕಾದು ನೋಡಬೇಕಿದೆ.


ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ

ಮಂಡ್ಯ, ಮಾ.10– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ಮಾ.13 ರಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ ಹಾಗೂ ಮಾಪ್-ಅಪ್ ದಿನ ವನ್ನು ಮಾ.14 ರಿಂದ 25ರವರೆಗೆ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದೆ.

1 ರಿಂದ 19 ವಯಸ್ಸಿನ ಎಲ್ಲಾ ಅಂಗನವಾಡಿ ಕೇಂದ್ರ, ಸರ್ಕಾರಿ, ಸರ್ಕಾರಿ ಅನುದಾನಿತ, ಖಾಸಗಿ ಶಾಲಾ ಕಾಲೇಜು ಹಾಗೂ ಪದವಿ/ತಾಂತ್ರಿಕ ಕಾಲೇಜಿನ ಮಕ್ಕಳಿಗೆ ಜಂತುಹುಳು ನಿವಾರಣೆ ಮಾಡುವ ಆಲ್‌ಬೆಂಡಾಜೋಲ್ ಮಾತ್ರೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನೀಡಲಾಗುತ್ತಿದೆ. ಮಾ.13ರಂದು ಗೈರಾದ ಮಕ್ಕಳಿಗೆ ಮಾ.14 ರಿಂದ 25ರವರೆಗೆ ಮಾತ್ರೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಯುವ ಕಾಂಗ್ರೆಸ್‌ನಿಂದ ಮೋದಿ ಗೋ ಬ್ಯಾಕ್ ಚಳವಳಿ

ಜಿಲ್ಲಾ ಕಾಂಗ್ರೆಸ್ ವಕ್ತಾರ ಸಿ.ಎಂ. ದ್ಯಾವಪ್ಪ



ಮಂಡ್ಯ, ಮಾ.10– ಕೇಂದ್ರ ಸರ್ಕಾರ ರೈತರಿಗೆ, ಯುವಕರಿಗೆ, ಮಹಿಳೆಯರಿಗೆ ಯಾವುದೇ ಅನುಕೂಲ ಕಲ್ಪಿಸಿಲ್ಲ. ಯಾವ ಪುರುಷಾರ್ಥಕ್ಕೆ ಮೋದಿ ಬರುತ್ತಿದ್ದಾರೆ. ಇದನ್ನು ವಿರೋಧಿಸಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಮೋದಿ ಗೋ ಬ್ಯಾಕ್ ಚಳವಳಿ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಸಿ.ಎಂ.ದ್ಯಾವಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.11ರಂದು ಬೆಳಗ್ಗೆ 10.30ಕ್ಕೆ ನಗರದ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿರುವ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಸಮಾವೇಶಗೊಂಡು ನಂತರ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಲಾಗುವುದು ಎಂದರು. ಕೇಂದ್ರ ಸರ್ಕಾರದ ಆಡಳಿತದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಅಪಾಯದಲ್ಲಿದೆ. ಬೆಂಗಳೂರು– ಮೈಸೂರು ದಶಪಥ ಹೆದ್ದಾರಿ ಇನ್ನೂ ಪೂರ್ಣಗೊಂಡಿಲ್ಲ. ಆದರೂ ಉದ್ಘಾಟನೆ ಮಾಡುತ್ತಿರುವುದು ಎಷ್ಟು ಸರಿ. ರಾಜ್ಯ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡದೆ ಚುನಾವಣೆ ಸಂದರ್ಭ ಎನ್ನುವ ಕಾರಣಕ್ಕೆ ಜಿಲ್ಲೆಗೆ ಬರುತ್ತಿರುವುದನ್ನು ಖಂಡಿಸುತ್ತೇವೆ ಎಂದರು.

ಕಾಂಗ್ರೆಸ್ ಮುಖಂಡ ಶೆಟ್ಟಹಳ್ಳಿ ಮಂಜುನಾಥ್ ಮಾತನಾಡಿ, ದಶಪಥ ರಸ್ತೆ ಇನ್ನೂ ಪೂರ್ಣಗೊಂಡಿಲ್ಲ. ಆದರೂ ರಸ್ತೆ ಉದ್ಘಾಟಿಸಲು ಬರುತ್ತಿದ್ದಾರೆ. ಚುನಾವಣಾ ಸಮಯವಾಗಿರುವುದರಿಂದ ಸರ್ಕಾರಿ ಆಡಳಿತ ಯಂತ್ರ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಖಂಡನೀಯ ಎಂದರು.

ಮೋದಿ ಅವರು ಕಾರ್ಯಕ್ರಮದಲ್ಲಿ ಕರ್ನಾಟಕದ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಾರಾ? ಎಂದು ಪ್ರಶ್ನಿಸಿದ ಅವರು ಸಾಮರಸ್ಯಕ್ಕೆ ಹೆಸರಾದ ಜಿಲ್ಲೆಯಲ್ಲಿ ಸಾಮರಸ್ಯ ಕೆಡಿಸಲು ಬರುತ್ತಿದ್ದಾರೆ. ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಏನು ಮಾತನಾಡಲಿಲ್ಲ. ಶೇ.40 ಕಮಿಷನ್ ಬಗ್ಗೆ, ಪ್ರವಾಹದ ಸಂದರ್ಭ ಭೇಟಿ ಕೊಡಲಿಲ್ಲ. ಆದರೆ ಈಗ ರಸ್ತೆ ಉದ್ಘಾಟನೆ ನೆಪದಲ್ಲಿ ಬರುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಅನಿಲ್ ಕುಮಾರ್, ಶರ್ಮಿತ, ಸೋನಿಯಾ ಬ್ರಿಗೇಡ್ ಅಧ್ಯಕ್ಷೆ ವೀಣಾ ಶಂಕರ್, ನಾಗಮಣಿ, ಕೊತ್ತತ್ತಿ ರಾಜು ಉಪಸ್ಥಿತರಿದ್ದರು.

ಕೊಕ್ಕರೆ ಬೆಳ್ಳೂರಲ್ಲಿ ಮಹಿಳಾ ದಿನಾಚರಣೆ



ಭಾರತೀನಗರ, ಮಾ.10– ಇಲ್ಲಿಗೆ ಸಮೀಪದ ಕೊಕ್ಕರೆ ಬೆಳ್ಳೂರಿನ ಪ್ರವಾಸಿ ಮಂದಿರದಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು.

ತಾಲೂಕು ಜೆಡಿಎಸ್ ಘಟಕದ ಕಾರ್ಯಾಧ್ಯಕ್ಷೆ ದಿವ್ಯಾ ಮಾತನಾಡಿ, ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿರುವುದು ಶ್ಲಾಘನೀಯ ಎಂದರು.

ಈ ವೇಳೆ 40ರ ನಂತರ ಮಹಿಳೆಯರ ಆರೋಗ್ಯದ ಬಗ್ಗೆ ಉಪನ್ಯಾಸ ನಡೆಯಿತು. ಬನ್ನಹಳ್ಳಿ ಗ್ರಾಪಂ ಸದಸ್ಯೆ ಹಾಗೂ ತಾಲೂಕು ಜೆಡಿಎಸ್ ಘಟಕದ ಕಾರ್ಯಾಧ್ಯಕ್ಷೆ ದಿವ್ಯಾ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ನೆನಪಿನ ಕಾಣಿಕೆ ವಿತರಿಸಲಾಯಿತು. ಅಲ್ಲದೇ ಮನರಂಜನಾ ಕಾರ್ಯಕ್ರಮ ನಡೆಯಿತು. ಪಿಡಿಓ ರಂಜಿತ, ಸದಸ್ಯೆರಾದ ಜಯಲಕ್ಷ್ಮಮ್ಮ, ಜ್ಯೋತಿ, ಗೀತಾ ಸೇರಿದಂತೆ ಇತರರಿದ್ದರು.

ಮಾ.14ಕ್ಕೆ, ಕೆ.ಆರ್.ಪೇಟೆ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷರಾಗಿ ಸಾಹಿತಿ ಶಿ.ಕುಮಾರಸ್ವಾಮಿ ಆಯ್ಕೆ



ಕೆ.ಆರ್.ಪೇಟೆ, ಮಾ.10– ಪಟ್ಟಣದ ಹೊರವಲಯದ ಅಗ್ರಹಾರಬಾಚಹಳ್ಳಿ ಗೇಟ್ ಸಮೀಪದ ಜಯಮ್ಮ ರಾಮಸ್ವಾಮಿ ಸಮುದಾಯ ಭವನದಲ್ಲಿ ಮಾ.14ರಂದು ನಡೆಯುವ ಕೆ.ಆರ್.ಪೇಟೆ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ನಿವೃತ್ತ ಪಾಂಶುಪಾಲರು ಹಾಗೂ ಸಾಹಿತಿ ಶಿ. ಕುಮಾರಸ್ವಾಮಿ ಅವರನ್ನು ಸರ್ವಾನು ಮತದಿಂದ ಆಯ್ಕೆ ಮಾಡಲಾಗಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಪೂರ್ಣ ಚಂದ್ರ ತೇಜಸ್ವಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ಕಸಾಪ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಕೃಷ್ಣರಾಜಪೇಟೆ ತಾಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಾದಸ್ಪರ್ಶದಿಂದ ಅತ್ತಿಗುಪ್ಪೆ ಬದಲಾಗಿ ಕೃಷ್ಣರಾಜಪೇಟೆ ಎಂದು ಮರುನಾಮಕರಣಗೊಂಡಿತು. ತಾಲೂಕು ಭೌಗೋಳಿಕ ಇತಿಹಾಸವುಳ್ಳ, ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದೆ. ಹಲವು ಅಪರೂಪದ ರಾಜಕಾರಣಿ, ಕವಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಹೊಂದಿರುವ ತಾಲೂಕು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು ಎಂದರು.

ಸಚಿವ ಕೆ.ಸಿ.ನಾರಾಯಣಗೌಡರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಆಚರಿಸಲಾಗುವುದು. ತಾಲೂಕಿನ ಕನ್ನಡ ಪ್ರೇಮಿಗಳು, ಕನ್ನಡದ ಮನಸ್ಸುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ಕಸಾಪ ಅಜೀವ ಸದಸ್ಯತ್ವ ಹೊಂದಿರುವ ಸದಸ್ಯರಿಗೆ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮೂಲಕ ತಲುಪಿಸಲಾಗುವುದು ಎಂದು ಕಸಾಪ ಗೌರವ ಕಾರ್ಯದರ್ಶಿ ಕಟ್ಟೆ ಮಹೇಶ್ ತಿಳಿಸಿದರು. ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಕೆ.ಆರ್.ನೀಲಕಂಠ, ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ್, ಕೋಶಾಧ್ಯಕ್ಷ ಮಂಜೇಗೌಡ, ಧರ್ಮರಾಜ್, ಶಿವನಂಜಯ್ಯ, ಬೂಕನಕೆರೆ ಹೋಬಳಿ ಅಧ್ಯಕ್ಷ ಪಾಪಣ್ಣ, ಅಕ್ಕಿಹೆಬ್ಬಾಳು ವಾಸು, ರವಿ ಶಿವಕುಮಾರ್, ಕಿಕ್ಕೇರಿ ವಾಸು ಇತರರಿದ್ದರು.

H3N2 ವೈರಸ್: ಹಾಸನ ಮೂಲದ 82 ವರ್ಷದ ವೃದ್ಧ ಸಾವು

ರಾಜ್ಯದಲ್ಲಿ ಮೊದಲ ಪ್ರಕರಣ; ಹರ್ಯಾಣದಲ್ಲಿ ಮತ್ತೊರ್ವ ವ್ಯಕ್ತಿ ಬಲಿ

ಬೆಂಗಳೂರು, ಮಾ.10– ಹಾಸನ ಜಿಲ್ಲೆಯ ಈರೇಗೌಡ ಎಂಬ 82 ವರ್ಷದ ವಯೋವೃದ್ಧ ಹೆಚ್3ಎನ್2 ವೈರಸ್‌ಗೆ ಬಲಿಯಾಗಿದ್ದಾರೆ. ಇವರು ಮೊನ್ನೆ ಮಾರ್ಚ್ 6ರಂದು ಮೃತಪಟ್ಟಿದ್ದು, ಅದು ಹೆಚ್3ಎನ್2 ಇನ್‌ಫ್ಲೂಯೆಂಜಾ ವೈರಸ್‌ಗೆ ಎಂದು ದೃಢಪಟ್ಟಿದ್ದು, ಈ ಮೂಲಕ ಕರ್ನಾಟಕದಲ್ಲಿ ಮೊದಲ ಪ್ರಕರಣವಾಗಿದೆ.

ಒಬ್ಬರು ಕರ್ನಾಟಕದವರು ಮತ್ತು ಇನ್ನೊಂದು ಹರಿಯಾಣದ ವ್ಯಕ್ತಿ H3N2 ವೈರಸ್‌ನಿಂದ ಮೃತಪಟ್ಟ ಮೊದಲ ಎರಡು ಸಾವು ಪ್ರಕರಣಗಳು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಇಂದು ಶುಕ್ರವಾರ ದೃಢಪಡಿಸಿದೆ.

ಕರ್ನಾಟಕ ಆರೋಗ್ಯ ಆಯುಕ್ತ ಡಿ. ರಂದೀಪ್ ಕೂಡ ಈರೇಗೌಡ ಅವರ ಸಾವನ್ನು ಖಚಿತಪಡಿಸಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿ (ಹಾಸನ), ಈರೇಗೌಡ ಅವರು ಫೆಬ್ರವರಿ 24ರಂದು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಆರು ದಿನಗಳ ನಂತರ ನಿಧನರಾದರು. ಅವರನ್ನು ಇನ್ಫ್ಲುಯೆಂಜಾ ತರಹದ ರೋಗಲಕ್ಷಣಗಳೊಂದಿಗೆ ಆಸ್ಪತ್ರೆಗೆ ಕರೆತರಲಾಯಿತು. ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಂತಹ ಸಮಸ್ಯೆಗಳನ್ನು ಹೊಂದಿದ್ದರು.

ಈರೇಗೌಡರ ಆರೋಗ್ಯದ ಬಗ್ಗೆ ಅಧಿಕಾರಿಗಳು ಎಲ್ಲಾ ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಪರ್ಕದ ವ್ಯಕ್ತಿಗಳನ್ನು ಸಮೀಕ್ಷೆ ಮಾಡಿದ್ದಾರೆ. ಆದಾಗ್ಯೂ, ಇದುವರೆಗೆ ಅವರ ಪತ್ನಿ ಸೇರಿದಂತೆ ಎಲ್ಲರಿಗೂ ವೈರಸ್ ನೆಗೆಟಿವ್ ಬಂದಿದೆ. ಯಾವುದೇ ಸಕಾರಾತ್ಮಕ ಪ್ರಕರಣಗಳನ್ನು ಸಕಾಲಿಕವಾಗಿ ಗುರುತಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಅವರು ಮುಂದಿನ 14 ದಿನಗಳವರೆಗೆ ಪ್ರದೇಶದಲ್ಲಿ ಕಣ್ಗಾವಲು ಮುಂದುವರಿಸಲು ಯೋಜಿಸಿದ್ದಾರೆ. ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರು ಈ ವಾರದ ಆರಂಭದಲ್ಲಿ ರಾಜ್ಯ ತಾಂತ್ರಿಕ ಸಲಹಾ ಸಮಿತಿ (TAC) ಯೊಂದಿಗೆ ಸಭೆ ನಡೆಸಿ ಸೋಂಕನ್ನು ತಪ್ಪಿಸಲು ಅನುಸರಿಸಬೇಕಾದ ಅಗತ್ಯ ಮುನ್ನೆಚ್ಚರಿಕೆಗಳನ್ನು ತಿಳಿಸುವ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದರು. 2–5 ದಿನಗಳಲ್ಲಿ ಸೋಂಕು ನಿವಾರಣೆ ಯಾಗುತ್ತದೆ ಎಂದು ಹೇಳಿದರು.

5, 8ನೇ ತರಗತಿ ಬೋರ್ಡ್ ಪರೀಕ್ಷೆ ರದ್ದು

ಬೆಂಗಳೂರು, ಮಾ.10– ಪ್ರಮುಖ ಬೆಳವಣಿಗೆಯಲ್ಲಿ 5 ಮತ್ತು 8ನೇ ತರಗತಿ ಬೋರ್ಡ್ ಪರೀಕ್ಷೆಗಳನ್ನು ರದ್ದು ಮಾಡಿ ಕರ್ನಾಟಕ ಹೈಕೋರ್ಟ್ ಶುಕ್ರವಾರ ಮಹತ್ವದ ತೀರ್ಪು ನೀಡಿದೆ. ರಾಜ್ಯ ಪಠ್ಯಕ್ರಮದ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆ ನಡೆಸುವ ನಿರ್ಧಾರ ಪ್ರಶ್ನಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ಮಹತ್ವದ ನಿರ್ಧಾರ ಪ್ರಕಟಿಸಿದೆ. ರಾಜ್ಯ ಸರ್ಕಾರದ 5 ಮತ್ತು 8ನೇ ತರಗತಿ ಬೋರ್ಡ್ ಎಕ್ಸಾಂ ಆದೇಶ ರದ್ದುಪಡಿಸಿ ಕೋರ್ಟ್ ತೀರ್ಪು ಪ್ರಕಟಿಸಿದೆ. ಅನುದಾನರಹಿತ ಶಾಲೆಗಳ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕ ಸದಸ್ಯ ಪೀಠ ಈ ತೀರ್ಮಾನ ಪ್ರಕಟಿಸಿದೆ.

ನ್ಯಾಪ್ರದೀಪ್ ಸಿಂಗ್ ಯೆರೂರ್ ಅವರಿದ್ದ ಪೀಠದಿಂದ ಈ ಮಹತ್ವದ ಆದೇಶ ಹೊರ ಬಿದ್ದಿದೆ. ಈ ಮೂಲಕ ಸದ್ಯ 5 ಮತ್ತು 8ನೇ ತರಗತಿ ಮಕ್ಕಳಿಗೆ ಇದ್ದ ಪಬ್ಲಿಕ್ ಎಕ್ಸಾಂ ಆತಂಕ ದೂರವಾಗಿದೆ. ಅರ್ಜಿದಾರರ ಪರವಾಗಿ ವಕೀಲ ಕೆ.ವಿ.ಧನಂಜಯ್ ಶಾಸಕಾಂಗದಲ್ಲಿ ಚರ್ಚೆ ಆಗದೇ ಅಧಿಕಾರಿಗಳೇ ನಿರ್ಧಾರ ಮಾಡಿದ್ದರು ಎಂದು ವಾದಿಸಿದರು. ಈ ಆದೇಶದ ಬಳಿಕ ಆಯಾಯ ಶಾಲೆಗಳು ಹೊಸದಾಗಿ ಪರೀಕ್ಷೆ ದಿನಾಂಕ ನಿಗದಿಗೆ ಅವಕಾಶ ಮಾಡಿ ಕೊಡಲಾಗಿದೆ. ಜೊತೆಗೆ ನಿಯಮಗಳಿಗನುಸಾರ ಮುಂದಿನ ಶೈಕ್ಷಣಿಕ ವರ್ಷದಿಂದ ಬೋರ್ಡ್ ಪರೀಕ್ಷೆ ನಡೆಸಬಹುದು ಎಂದು ಶಿಕ್ಷಣ ಇಲಾಖೆಗೆ ನ್ಯಾಪ್ರದೀಪ್ ಸಿಂಗ್ ಯೆರೂರ್ ಸೂಚನೆ ನೀಡಿದ್ದಾರೆ.

ಮನೀಷ್ ಸಿಸೋಡಿಯಾ 7 ದಿನ ಇಡಿ ಕಸ್ಟಡಿಗೆ

ನವದೆಹಲಿ, ಮಾ.10– ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿರುವ ದೆಹಲಿ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ದೆಹಲಿ ನ್ಯಾಯಾಲಯ, 7 ದಿನಗಳ ಕಾಲ ಜಾರಿ ನಿರ್ದೇಶನಾಲಯದ ವಶಕ್ಕೆ ನೀಡಿದೆ.

ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ದೆಹಲಿಯ ರೂಸ್ ಅವೆನ್ಯೂ ಕೋರ್ಟ್ ಎಎಪಿ ನಾಯಕ ಮಾಜಿ ಉಪಮುಖ್ಯಮಂತ್ರಿ ಸಿಸೋಡಿಯಾ ಅವರನ್ನು ಮಾರ್ಚ್ 17 ರವರೆಗೆ ಇಡಿ ವಶಕ್ಕೆ ನೀಡಿದೆ. ನ್ಯಾಯಾಂಗ ವಶದ ಅವಧಿ ಪೂರ್ಣಗೊಂಡ ಹಿನ್ನಲೆಯಲ್ಲಿ ಸಿಸೋಡಿಯಾ ಅವರನ್ನು ತಿಹಾರ್ ಜೈಲಿನಲ್ಲಿ ರೂಸ್ ಅವೆನ್ಯೂ ಕೋರ್ಟ್‌ಗೆ ಇಂದು ಮಧ್ಯಾಹ್ನ 2 ಗಂಟೆಗೆ ಹಾಜರುಪಡಿಸಲಾಯಿತು.

ವಿಚಾರಣೆಯ ವೇಳೆ, ಮನೀಶ್ ಸಿಸೋಡಿಯಾ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು 10 ದಿನಗಳ ವಶಕ್ಕೆ ಮನವಿ ಮಾಡಿದ್ದರು. ಕಾರ್ಯಾಚರಣೆಯ ವಿಧಾನಗಳನ್ನು ಗುರುತಿಸಲು ಮತ್ತು ಸಮನ್ಸ್ ಪಡೆದ ಇತರ ವ್ಯಕ್ತಿಗಳನ್ನು ಎದುರಿಸಲು ಮನೀಶ್ ಸಿಸೋಡಿಯಾ ಅವರನ್ನು ವಿಚಾರಣೆಗೆ ಒಳಪಡಿಸಲು 10 ದಿನಗಳ ಕಸ್ಟಡಿಗೆ ನೀಡುವಂತೆ ಅಧಿಕಾರಿಗಳು ಕೇಳಿದ್ದರು. ಅಂತೆಯೇ ಮನೀಶ್ ಸಿಸೋಡಿಯಾ ಇತರರ ಹೆಸರಿನಲ್ಲಿ ಸಿಮ್ ಕಾರ್ಡ್ ಮತ್ತು ಮೊಬೈಲ್ ಫೋನ್‌ಗಳನ್ನು ಖರೀದಿಸಿದ್ದಾರೆ ಎಂದು ಇಡಿ ನ್ಯಾಯಾಲಯಕ್ಕೆ ತಿಳಿಸಿತ್ತು

ಮೂರನೇ ಪುಟದಿಂದ

ಮೋದಿ, ಬಿಜೆಪಿಗೆ ಪೂರ್ಣ ಕ್ರೆಡಿಟ್

ಮಾಡಿಸಿದ್ದು ನಾನು. ಇತಿಹಾಸದಲ್ಲಿ ಯಾವೊಬ್ಬ ಪ್ರಧಾನಿ ಯಾವುದೇ ಹೆದ್ದಾರಿ ಯೋಜನೆಯನ್ನು ಘೋಷಿಸಿ, ಅವರೇ ಉದ್ಘಾಟಿಸಿದ ಉದಾಹರಣೆ ಇಲ್ಲ. ಆದರೆ, ಮೋದಿ ಅವರು ಈ ಕೆಲಸ ಮಾಡಿದ್ದಾರೆ. ಹಾಗಾಗಿ ಈ ಯೋಜನೆ ಕ್ರೆಡಿಟ್ ನಮಗೆ ಸೇರುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಕೆಲಸ ಆರಂಭಿಸಬೇಕಾಗಿತ್ತು: ಹೆದ್ದಾರಿ ಕ್ರೆಡಿಟ್ ಬಗ್ಗೆ ಕಾಂಗ್ರೆಸ್ ನಾಯಕರು ಮಾತನಾಡು ತ್ತಿದ್ದಾರೆ. 2004ರಿಂದ 2014ರವರೆಗೆ ಸೋನಿಯಾ ಗಾಂಧಿಯವರ ಲಂಗು ಲಗಾಮು ಹಿಡಿದು ಕೊಂಡಿದ್ದ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರದಲ್ಲಿ ಯಾಕೆ ಕೆಲಸ ಆರಂಭಿಸಲಿಲ್ಲ. ಈ ಯೋಜನೆಗೆ ವಿನಿಯೋಗಿಸಿದ 9500 ಕೋಟಿ ರೂ.ನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ. ಮಹಾದೇವಪ್ಪ 9 ಪೈಸೆ ಕೊಟ್ಟಿಲ್ಲ. ಹೆದ್ದಾರಿ ಮೇಲ್ದರ್ಜೆಗೆ ಅನುಮತಿ ನೀಡಿದಾಗ ಕೇಂದ್ರದ ಹೆದ್ದಾರಿ ಸಚಿವರಾಗಿ ಆಸ್ಕರ್ ಫರ್ನಾಂಡಿಸ್ ಇದ್ದರು. ಆದರೆ, ಅದು ಸಾಮಾನ್ಯ ಪ್ರಕ್ರಿಯೆಯಾಗಿದ್ದು, ಅವರೇ ಅನುಮತಿ ನೀಡಿದ್ದಾರೆ ಎನ್ನುವುದು ಸರಿಯಲ್ಲ ಎಂದು ಕಿಡಿಕಾರಿದರು. ಪ್ರಧಾನಿ ಮೋದಿ ಭಾರತ್ ಮಾಲಾ ಪರಿಯೋಜನೆಯಲ್ಲಿ ದೇಶದಲ್ಲಿ 6 ಸಾವಿರ ಕಿ.ಮಿ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಘೋಷಣೆ ಮಾಡಿದ್ದರು. ಅದರಲ್ಲಿ 800 ಕಿಮಿ ಎಕ್ಸ್‌ಪ್ರೆಸ್ ಮಾಡಲು ಅವಕಾಶವಿತ್ತು. ಅದರಲ್ಲಿ ಮೈಸೂರು– ಬೆಂಗಳೂರು ಹೆದ್ದಾರಿ ಸೇರಿಸಲಾಗಿದೆ. ಇಂದು ಕ್ರೆಡಿಟ್ ಬಗ್ಗೆ ಮಾತನಾಡುತ್ತಿರುವವರು ಕಾಮಗಾರಿಗೆ ಅಡ್ಡಿಯಾದಾಗ ಯಾಕೆ ಯಾರೂ ಬರಲಿಲ್ಲ. ಈ ರಸ್ತೆ ನಿರ್ಮಾಣಕ್ಕೆ 49 ಲಕ್ಷ ಟನ್ ಕಲ್ಲು ಬೇಕಾಗಿತ್ತು. ಅದಕ್ಕಾಗಿ ಕ್ವಾರಿ ಆರಂಭಿಸಲು ಅಡಚಣೆ ಉಂಟಾಗಿತ್ತು. ಆಗಲೂ ಯಾರೂ ಬರಲಿಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಮಧ್ಯ ಬರುವ ನಗರಗಳು ಮುಖ್ಯವಲ್ಲ: ಮೈಸೂರು–ಬೆಂಗಳೂರು ನಡುವಿನ ರಸ್ತೆ ಎಂದರೆ ಅದರ ನಡುವೆ ಬರುವ ನಗರಗಳು ಮುಖ್ಯ ಪಾತ್ರ ವಹಿಸುವುದಿಲ್ಲ. ಡೆಸ್ಟಿನೇಷನ್ ಮುಖ್ಯ. ಹಾಗಾಗಿ ನಾನು ಈ ರಸ್ತೆಯ ಕಾಮಗಾರಿಗೆ ಮೂರು ಜಿಲ್ಲೆಗಳಲ್ಲಿ ಎದುರಾದ ಸಮಸ್ಯೆಗಳ ನಿವಾರಣೆಗೆ ಮುಂದಾಗಿದ್ದೆ. ವಂದೇ ಭಾರತ್ ಎಕ್ಸ್‌ಪ್ರೆಸ್ ಸೇರಿದಂತೆ ಬೆಂಗಳೂರಿಂದ ಮೈಸೂರಿಗೆ 7 ರೈಲನ್ನು ತಂದಿದ್ದೇನೆ. ನಮ್ಮೂರಿನ ಮೇಲೆ ಸಂಚರಿಸುತ್ತದೆ ಎಂದು ರಾಮನಗರ ಹಾಗೂ ಮಂಡ್ಯ ಸಂಸದರು ಅದನ್ನು ತಡೆದು ನನ್ನ ಯೋಜನೆ ಎಂದು ಹೇಳಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಹೆಚ್ಚುವರಿ ಕಾಮಗಾರಿ: ಕೆಲವು ಕಡೆ ಅಂಡರ್ ಪಾಸ್ ಬೇಕು ಎಂದು ಪಕ್ಷಾತೀತವಾಗಿ ಮುಖಂಡರು ನನ್ನ ಬಳಿ ಬಂದು ಮನವಿ ಸಲ್ಲಿಸಿದ್ದಾರೆ. ಹಾಗಾಗಿ ಬೂದನೂರು 3 ಅಂಡರ್ ಪಾಸ್, ಪಾಂಡವಪುರ, ಮತ್ತಿಕೆರೆ, ಶೆಟ್ಟಳ್ಳಿ, ಎಲಿಯೂರು ಆರ್ಚ್ ಬಳಿ ಅಂಡರ್ ಪಾಸ್ ನಿರ್ಮಾಣ ಕಾಮಗಾರಿಯನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿದೆ. ಈ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ಕೇಬಲ್ ಮಹೇಶ್, ಪ್ರದೀಪ್ ಇದ್ದರು.

ಮಂಡ್ಯದಲ್ಲಿ ಬಿಜೆಪಿಗೆ ಮತ್ತಷ್ಟು ಬಲ

ಬೆಂಬಲಿಸಿರುವುದ ರಿಂದ ಅಂಬರೀಷ್ ಅಭಿಮಾನಿಗಳು ನಮ್ಮ ಪಕ್ಷಕ್ಕೆ ಬೆಂಬಲ ನೀಡುತ್ತಾರೆ. ಇದರಿಂದ ಮಂಡ್ಯದಲ್ಲಿ ಇನ್ನಷ್ಟು ಪ್ರಬಲವಾಗಿ ಪಕ್ಷ ಬೆಳೆಯಲು ಸಾಧ್ಯವಾಗಲಿದೆ ಎಂದು ತಿಳಿಸಿದರು. ಮಂಡ್ಯದಲ್ಲಿ ಬಿಜೆಪಿ ಶಾಸಕರು ಇಲ್ಲದಿದ್ದರೂ, ಪ್ರಧಾನಿ ಮೋದಿ ಯಾವುದೇ ತಾರತಮ್ಯ ನೀತಿ ಅನುಸರಿಸದೆ 1500 ಕೋಟಿ ರೂ.ಗಳ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ರಾಜ್ಯದಾದ್ಯಂತ ನಡೆಯುತ್ತಿರುವ ವಿಜಯ ಸಂಕಲ್ಪ ಯಾತ್ರೆಗೆ ನಿರೀಕ್ಷೆಗೂ ಮೀರಿದ ಬೆಂಬಲ ದೊರೆಯುತ್ತಿದೆ. ಇದರಿಂದ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಳೆ ಮೈಸೂರು ಪ್ರಾಂತ್ಯದಲ್ಲಿ ಸಾಕಷ್ಟು ಸ್ಥಾನ ದೊರೆಯುವುದು ಖಚಿತ ಎಂದರು.

ನೇತೃತ್ವ

ಆರ್.ಅಶೋಕ್, ಬಿ.ಶ್ರೀರಾಮುಲು, ಶೋಭಕರಂದ್ಲಾಜೆ. ಡಾ.ಸಿ.ಎನ್. ಅಶ್ವತ್ಥನಾರಾಯಣ, ಅರವಿಂದ ಲಿಂಬಾವಳಿ, ಸಿ.ಸಿ.ಪಾಟೀಲ್, ಶಶಿಕಲಾ ಜೊಲ್ಲೆ ಅವರು ಯಡಿಯೂರಪ್ಪ ಅವರ ಒಡನಾಟದಲ್ಲಿ ಇರುವವರು. ಜತೆಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಎ.ನಾರಾಯಣಸ್ವಾಮಿ, ಹಿರಿಯರಾದ ಕೆ.ಎಸ್.ಈಶ್ವರಪ್ಪ, ಗೋವಿಂದ ಕಾರಜೋಳ, ಪ್ರಭು ಚವ್ಹಾಣ್, ಸಿ.ಟಿ.ರವಿ, ವಿ.ಶ್ರೀನಿವಾಸ ಪ್ರಸಾದ್, ಪಿ.ಸಿ.ಮೋಹನ್, ಲಕ್ಷ್ಮಣ ಸವದಿ, ಛಲವಾದಿ ನಾರಾಯಣಸ್ವಾಮಿ ಅವರು ಸಮಿತಿ ಸದಸ್ಯರಾಗಿದ್ದಾರೆ.

ಈ ಮಧ್ಯೆ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಗೆ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಸಂಚಾಲಕರಾದರೆ, ಕೇಂದ್ರ ಸಚಿವರಾದ ಭಗವಂತ ಖೂಬಾ ಸದಸ್ಯರಾಗಿರುವರು. ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ವಿಧಾನಪರಿಷತ್ತಿನ ಮಾಜಿ ಸಭಾಪತಿಗಳಾದ ರಘುನಾಥರಾವ್ ಮಲ್ಕಾಪುರೆ, ಪಕ್ಷದ ಉಪಾಧ್ಯಕ್ಷರಾದ ನಿರ್ಮಲ ಕುಮಾರ್ ಸುರಾನಾ, ತೇಜಸ್ವಿನಿ ಅನಂತಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಎನ್.ರವಿಕುಮಾರ್, ಸಿದ್ಧರಾಜು, ಅಶ್ವತ್ಥನಾರಾಯಣ, ಮಹೇಶ್ ಟೆಂಗಿನಕಾಯಿ, ಪಕ್ಷದ ಕಾರ್ಯದರ್ಶಿ ಎಸ್.ಕೇಶವ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ ಮತ್ತು ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಗೀತಾ ವಿವೇಕಾನಂದ ಅವರುಗಳು ನಿರ್ವಹಣಾ ಸಮಿತಿಯ ಸದಸ್ಯರಾಗಿರುವರು.

ಸರ್ಕಾರದ ಕನಸಿನ ಯೋಜನೆ

ಡಾ. ಹೆಚ್.ಸಿ. ಮಹದೇವಪ್ಪ ಅವರೇ ಹೊರತು, ಈಗ ಬೊಗಳೆ ಬಿಡುತ್ತಿರುವ ಬಿಜೆಪಿಗರಲ್ಲ ಎಂದು ಸಂಸದ ಪ್ರತಾಪ್ ಸಿಂಹ ವಿರುದ್ಧ ಅವರು ವಾಗ್ದಾಳಿ ನಡೆಸಿದರು.

118 ಕಿ.ಮೀ. ಉದ್ದದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಾಷ್ಟ್ರೀಯ ಹೆದ್ದಾರಿಯಲ್ಲಿ 34 ಅಂಡರ್ ಪಾಸ್, 12 ಓವರ್ ಪಾಸ್, ಎಂಟ್ರಿ–ಎಕ್ಸಿಟ್ ಹೊಂದಿರುವ ಕಾಮಗಾರಿಗೆ 2018ರಲ್ಲಿ 6420 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಲಾಗಿತ್ತು. ನಂತರ 7 ಬಾರಿ ವೆಚ್ಚ ಏರಿಕೆಯಾಗಿ ಅಂತಿಮವಾಗಿ ಯೋಜನೆ ಪೂರ್ಣಗೊಳ್ಳುವುದರೊಳಗೆ ಇದು 12,000 ಕೋಟಿ ತಲುಪಲಿದೆ ಎಂದರು. ಮೈಸೂರು–ಬೆಂಗಳೂರು ನಗರಗಳ ನಡುವೆ ವಾಹನ ದಟ್ಟಣೆ ಮನವರಿಕೆ ಮಾಡಿಕೊಂಡು ಅಂದಿನ ಕಾಂಗ್ರೆಸ್ ಸರ್ಕಾರವು ಈ ಯೋಜನೆಯನ್ನು ಪ್ರಾರಂಭಿಸಿತ್ತು. ಅದನ್ನು ನಂತರ ಬಂದ ಬಿಜೆಪಿ ಸರ್ಕಾರ ಮುಂದುವರೆಸಿ ಇದೀಗ ಪ್ರಧಾನಮಂತ್ರಿಗಳು ಯೋಜನೆಯನ್ನು ಉದ್ಘಾಟಿಸುತ್ತಿದ್ದಾರೆ. ವೆಚ್ಚ ಜಾಸ್ತಿಯಾದ ಹೆಚ್ಚುವರಿ ಹಣ ನೀಡಿದ್ದನ್ನೇ ಮುಂದಿಟ್ಟುಕೊಂಡು ಬಿಜೆಪಿ ಅದರ ರಾಜಕೀಯ ಲಾಭ ಪಡೆಯಲೆತ್ನಿಸುತ್ತಿದೆ. ಈ ಯೋಜನೆಯ ಕೀರ್ತಿ ಕಾಂಗ್ರೆಸ್‌ಗೆ ಸಲ್ಲಬೇಕು ಎಂದು ಡಾ. ಮಹದೇವಪ್ಪ ತಿಳಿಸಿದರು.

ಇದು ಯಾವುದೇ ವ್ಯಕ್ತಿಯ ಅಥವಾ ಸರ್ಕಾರದ ಸ್ವತ್ತಲ್ಲ. ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿರುವ ಜನರ ಆಸ್ತಿ. ಕೋಳಿ ತನ್ನಿಂದಲೇ ಬೆಳಗಾಯಿತು ಎನ್ನುವ ನಾಣ್ನುಡಿಯಂತೆ ಪ್ರತಾಪ್ ಸಿಂಹ ನನ್ನಿಂದಲೇ ದಶಪಥ ರಸೆ ನಿರ್ಮಾಣವಾಯಿತು ಎಂದು ಹೇಳುತ್ತಿರುವುದು ಹಾಸ್ಯಾಸ್ಪದ. ಯೋಜನೆ ಆರಂಭಿಸುವಾಗ ಇವರೆಲ್ಲಾ ಬಿಜೆಪಿಯವರು ಎಲ್ಲಿದ್ದರು ಎಂದು ಅವರು ಪ್ರಶ್ನಿಸಿದರು. ಈ ಯೋಜನೆಯಲ್ಲಿ ಬಿಜೆಪಿಯವರ ಪಾತ್ರ ಏನೂ ಇಲ್ಲ. ಎಕ್ಸ್‌ಪ್ರೆಸ್ ವೇ ಬಗ್ಗೆ ಮಾತನಾಡಲು ಸಂಸದ ಪ್ರತಾಪ್ ಸಿಂಹ ಯಾರು. ರಾಜಕೀಯವಾಗಿ ಮಾತನಾಡುವಾಗ ಭಾಷೆ ಮೇಲೆ ಹಿಡಿತವಿರಲಿ. ಸಿ.ಟಿ. ರವಿ, ಪ್ರಹ್ಲಾದ್ ಜೋಷಿ ಅವರಿಗೆ ಸಿದ್ದರಾಮಯ್ಯರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಡಾ. ಮಹದೇವಪ್ಪ ಇದೇ ಸಂದರ್ಭ ಆಕ್ರೋಶ ವ್ಯಕ್ತಪಡಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾನು ನಿಂತ ನೀರಲ್ಲ; ಹರಿಯುವ ನೀರು

ಗಳನ್ನು ಯಾರು ಹಬ್ಬಿಸಿ ಅದಕ್ಕೆ ಉಪ್ಪು–ಖಾರ ಹಾಕುತ್ತಿದ್ದಾರೋ ಅವರನ್ನೇ ಈ ಸಂಬಂಧ ಪ್ರಶ್ನಿಸಬೇಕು. ನನ್ನ ವಿಚಾರಗಳನ್ನು ನಾನು ರಾಜ್ಯ ನಾಯಕ ರಿಗೆ ಮತ್ತು ಹೈಕಮಾಂಡ್‌ಗೆ ತಿಳಿಸಿ ದ್ದೇನೆ ಎಂದರು. ಬಿಜೆಪಿ ತೊರೆಯುವ ವಿಚಾರ ಕುರಿತು ಸ್ಪಷ್ಟವಾದ ನಿಲುವು ವ್ಯಕ್ತಪಡಿ ಸದೇ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದರು.

ಸಾಮಾನ್ಯರಿಗೆ ನಾವು ಮಾಡುವ ಕೆಲಸ ತಲುಪಬೇಕು. ಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸಬೇಕೆಂಬುದು ನನ್ನ ಆದ್ಯತೆ. ಇದನ್ನು ಬಿಟ್ಟು ನಾನು ಎಲ್ಲಿಯೂ ಪಕ್ಷ ತೊರೆಯುವ ಕುರಿತು ಸಣ್ಣ ವಿಚಾರವನ್ನೂ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಕೈಲಾಗದವ ಮೈ ಪರಚಿಕೊಂಡಂತೆ

ಇನ್ನೂ 22 ಕಿಮೀ ಉದ್ದದ ರಸ್ತೆ ಕಾಮಗಾರಿ ಬಾಕಿ ಇದೆ. ಅಲ್ಲಲ್ಲಿ ಅಂಡರ್ ಪಾಸ್ ಮಾಡಿ ಕೆಲ ಉದ್ಯಮಿಗಳಿಗೆ ಅನುಕೂಲ ಕಲ್ಪಿಸಿದ್ದಾರೆ. ಗ್ರಾಮಸ್ಥರು, ಸಾರ್ವಜನಿಕರಿಗೆ ಅಗತ್ಯವಿರುವೆಡೆ ತೊಂದರೆ ಉಂಟು ಮಾಡಿರುವುದೇ ಅವರ ಸಾಧನೆಯಾಗಿದೆ ಎಂದು ದೂರಿದರು. ಬೇರೆಯವರ ಬಗ್ಗೆ ಮಾತನಾಡುವಾಗ ಎಚ್ಚರವಿರಲಿ. ದಶಪಥ ಹೆದ್ದಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೇ ವೆಚ್ಚ ನಾಲ್ಕು ಪಟ್ಟು ಹೆಚ್ಚಾಗಿದೆ. ಬೆಲೆ ಏರಿಕೆಯಿಂದ ಬಳಲುತ್ತಿರುವ ಜನರಿಂದ ದುಬಾರಿ ಟೋಲ್ ಸಂಗ್ರಹ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ಬಿಜೆಪಿ ಸರ್ಕಾರದ ವಿರುದ್ಧ ತಿರುಗಿ ಬಿದ್ದಿರುವುದೇ ನಿಮ್ಮ ಕಾರ್ಯವೈಖರಿಗೆ ಸಾಕ್ಷಿ ಎಂದು ನುಡಿದರು.

ಮೂರನೇ ಪುಟದಿಂದ

ಪ್ರಧಾನಿ ಮೋದಿ, ಬಿಜೆಪಿಗೆ

ರಾಜಕಾರಣದ ಸ್ವಚ್ಛತಾ ಅಭಿಯಾನ ಅಗತ್ಯವಾಗಿದ್ದು, ಅದಕ್ಕೆ ಬಿಜೆಪಿ ಬೆಂಬಲಿಸಲೇಬೇಕು ಎಂದು ಹೇಳಿದರು. ಕಳೆದ ನಾಲ್ಕು ವರ್ಷಗಳಿಂದ ಸಂಸದೆಯಾಗಿ ಮಂಡ್ಯ ಕ್ಷೇತ್ರಕ್ಕೆ ಹಲವಾರು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನನ್ನ ಅಭಿವೃದ್ಧಿ ಕಾರ್ಯಗಳ ಹಿಂದೆ ಬೆನ್ನೆಲುಬಾಗಿ ನಿಂತಿರುವುದು ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರಗಳು. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಯನ್ನು ಬೆಂಬಲಿಸುತ್ತಿದ್ದೇನೆ. ನಾನು ಕೇಳಿದ ಎಲ್ಲಾ ಅಭಿವೃದ್ಧಿ ಕೆಲಸಗಳನ್ನೂ ಬಿಜೆಪಿ ಸರ್ಕಾರಗಳು ಕೊಟ್ಟಿವೆ. ಮುಂದೆಯೂ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸುವ ಭರವಸೆಯನ್ನೂ ನೀಡಿವೆ. ಹೀಗಾಗಿ ಜಿಲ್ಲೆಯ ಅಭಿವೃದ್ಧಿಯ ಮುಂದಾಲೋಚನೆಯಿಂದ ಬಿಜೆಪಿ ಬೆಂಬಲಿಸಿದ್ದೇನೆ ಎಂದರು.

ತಮ್ಮ ಪತಿ ಅಂಬರೀಷ್ ಎರಡೂವರೆ ದಶಕದ ಕಾಲ ರಾಜಕೀಯದಲ್ಲಿದ್ದರೂ ಕಾಂಗ್ರೆಸ್ ಹಾಗೂ ಜೆಡಿಎಸ್‌ನಲ್ಲೇ ಇದ್ದರು. ಬಿಜೆಪಿ ಕಡೆ ಮುಖ ಮಾಡಿರಲಿಲ್ಲ ಎಂಬುದು ನಿಜ. ಅವರು ಕಾಂಗ್ರೆಸ್ ಹಾಗೂ ಜೆಡಿಎಸ್‌ನಲ್ಲಿದ್ದರೂ ಪಕ್ಷಾತೀತರಾಗಿ ರಾಜಕಾರಣ ಮಾಡಿಕೊಂಡು ಬಂದವರು. ಅವರಿದ್ದಾಗ ನಮ್ಮ ಮನೆಗೆ 13 ಮಂದಿ ವಿವಿಧ ಪಕ್ಷಗಳ ಮುಖ್ಯಮಂತ್ರಿಗಳು ಬಂದಿದ್ದಾರೆ. ಪ್ರಧಾನಮಂತ್ರಿಗಳೂ ಬಂದು-ಹೋಗಿದ್ದಾರೆ. ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅಂಬರೀಷ್ ಅವರ ನೆಚ್ಚಿನ ರಾಜಕಾರಣಿಯಾಗಿದ್ದರು. ಹೀಗಾಗಿ ತಾನು ಬಿಜೆಪಿಗೆ ಬೆಂಬಲ ಘೋಷಿಸಿರುವುದು ಅಂಬರೀಷ್ ಅವರಿಗೆ ಮಾಡಿರುವ ಅವಮಾನವಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನನ್ನನ್ನು ಬೆಂಬಲಿಸಿದ್ದು ಕಾಂಗ್ರೆಸ್ ಅಲ್ಲ, ಕಾರ್ಯಕರ್ತರು: ತಾವು ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದಾಗ ಕಾಂಗ್ರೆಸ್ ಪಕ್ಷ ನನ್ನನ್ನು ಬೆಂಬಲಿಸಿಲ್ಲ. ಆದರೆ ಕಾಂಗ್ರೆಸ್ ಕಾರ್ಯಕರ್ತರು ನನ್ನ ಬೆನ್ನಿಗೆ ನಿಂತಿದ್ದರು. ಜೊತೆಗೆ ಬಿಜೆಪಿ ಪಕ್ಷ ಬೆಂಬಲಿಸಿತ್ತು. ಅದು ಮಾತ್ರವಲ್ಲದೆ, ರೈತ ಸಂಘದ ಕಾರ್ಯಕರ್ತರು ಹಾಗೂ ಕೆಲವು ಸಂಘಟನೆಗಳು ಬೆಂಬಲಿಸಿದವು. ಕಾಂಗ್ರೆಸ್ ನಾಯಕರು ನನಗೆ ಬೆಂಬಲ ಸೂಚಿಸದೇ ಇದ್ದರೂ, ಮಂಡ್ಯ ಜಿಲ್ಲೆಯ ಆ ಪಕ್ಷದ ಕಾರ್ಯಕರ್ತರು ಹಾಗೂ ಅಂಬರೀಷ್ ಬೆಂಬಲಿಗರು ನನ್ನ ಗೆಲುವಿಗಾಗಿ ಶ್ರಮಿಸಿದರು. ನನ್ನ ಗೆಲುವಿನಲ್ಲಿ ಕಾಂಗ್ರೆಸ್ ನಾಯಕರ ಕೊಡುಗೆ ಶೂನ್ಯ ಎಂದರು. ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಆಗ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ, ಇಂಧನ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಟೊಂಕ ಕಟ್ಟಿ ನಿಂತಿದ್ದರು. ಕೆ.ಆರ್.ನಗರಕ್ಕೆ ರಾಹುಲ್ ಗಾಂಧಿಯವರನ್ನು, ಪಾಂಡವಪುರಕ್ಕೆ ಅಂದಿನ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಕರೆಸಿ ನನ್ನ ವಿರುದ್ಧ ಪ್ರಚಾರ ಮಾಡಿಸಿದ್ದರು. ಹೀಗಿರುವಾಗ ಕಾಂಗ್ರೆಸ್ ನಾಯಕರು ನನ್ನ ಬೆಂಬಲಿಸಿದರು ಎಂಬ ಮಾತಿನಲ್ಲಿ ಅರ್ಥವಿಲ್ಲ ಎಂದು ಸುಮಲತಾ ಹೇಳಿದರು.

ಪ್ರಾಣ ಬಿಡುತ್ತೇನೆಯೇ ಹೊರತು ಮಂಡ್ಯ ಬಿಡಲ್ಲ: ಮುಂದಿನ ಚುನಾವಣೆಯಲ್ಲಿ ಬೆಂಗಳೂರಿನ ಕ್ಷೇತ್ರವೊಂದರಲ್ಲಿ ಸುಮಲತಾ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹಕ್ಕೆ ಉತ್ತರಿಸಿದ ಅವರು, ನಾನು ಪ್ರಾಣ ಬಿಡುತ್ತೇನೆಯೇ ಹೊರತು ಮಂಡ್ಯ ಬಿಡುವುದಿಲ್ಲ. ರಾಜಕಾರಣ ಬಿಡುತ್ತೇನೆಯೇ ಹೊರತು ಸ್ವಾಭಿಮಾನ ಬಿಡಲ್ಲ. ಯಾವುದೇ ಕಾರಣಕ್ಕೂ ಮಂಡ್ಯ ಬಿಟ್ಟು ಬೆಂಗಳೂರಿನಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷ ಒಪ್ಪಿದರೆ ರಾಜ್ಯ ರಾಜಕಾರಣ: ನಾನು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕೇ ಬೇಡವೇ ಎಂಬುದರ ಬಗ್ಗೆ ಬಿಜೆಪಿ ವರಿಷ್ಠರು ತೀರ್ಮಾನಿಸುತ್ತಾರೆ ಎಂದ ಸುಮಲತಾ, ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಅನಿವಾರ್ಯತೆ ಸದ್ಯಕ್ಕೆ ನನಗೂ ಇಲ್ಲ, ಪಕ್ಷಕ್ಕೂ ಇಲ್ಲ. ಹಾಗೊಂದು ವೇಳೆ ಬಿಜೆಪಿಗೆ ನಾನು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದು ಅನಿವಾರ್ಯವಾದರೆ, ಸ್ಪರ್ಧೆಗೆ ಸಿದ್ಧವಿದ್ದೇನೆ. ಆ ಸಂಬಂಧ ಬಿಜೆಪಿ ಮುಖಂಡರು ಹಾಗೂ ನನ್ನ ಬೆಂಬಲಿಗರೊಂದಿಗೆ ಚರ್ಚಿಸಿ ಅನಿವಾರ್ಯವಾದಲ್ಲಿ ರಾಜ್ಯ ರಾಜಕಾರಣಕ್ಕೆ ಬರಲಿದ್ದೇನೆ ಎಂದು ಹೇಳಿದರು.

ನಾನಿರುವವರೆಗೂ ಅಭಿಷೇಕ್ ರಾಜಕೀಯಕ್ಕೆ ಬರಲ್ಲ: ತಮ್ಮ ಪತಿ ಅಂಬರೀಷ್ ಅವರಿಗೆ ಕುಟುಂಬದವರು ರಾಜಕಾರಣ ಮಾಡಬಾರದು ಎಂಬ ಬಯಕೆ ಇತ್ತು. ಆದ್ದರಿಂದ ಅವರಿರುವವರೆಗೂ ನಾನು ರಾಜಕಾರಣಕ್ಕೆ ಬಂದಿಲ್ಲ. ಅವರ ಕಾಲಾನಂತರ ರಾಜಕೀಯಕ್ಕೆ ಬಂದಿದ್ದೇನೆ. ಪತಿ ಬದುಕಿದ್ದಾಗ ರಾಜಕೀಯ ಪ್ರವೇಶ ನನಗೆ ಕಷ್ಟವೇನಿರಲಿಲ್ಲ. ಆದರೆ ಅವರ ಆಶಯಕ್ಕೆ ಬದ್ಧಳಾಗಿದ್ದೆ. ಈಗಲೂ ಅಷ್ಟೇ. ನಾನು ರಾಜಕೀಯದಲ್ಲಿ ಇರುವವರೆಗೂ ನನ್ನ ಮಗ ಅಭಿಷೇಕ್ ರಾಜಕಾರಣಕ್ಕೆ ಬರುವುದಿಲ್ಲ ಎಂಬುದನ್ನು ತಾಯಿ ಚಾಮುಂಡೇಶ್ವರಿ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ. ಅವನ ಮುಂದಿನ ಭವಿಷ್ಯವನ್ನು ಚಾಮುಂಡೇಶ್ವರಿ ನೋಡಿಕೊಳ್ಳುತ್ತಾಳೆ. ಮಂಡ್ಯ ಅಥವಾ ಮದ್ದೂರಿನಲ್ಲಿ ಸ್ಪರ್ಧಿಸುವಂತೆ ಅಭಿಷೇಕ್‌ಗೆ ಎರಡು ಪಕ್ಷಗಳಿಂದ ಒತ್ತಡ ಬಂದಿತ್ತು. ಆದರೆ ಅವನು ಈಗ ಮದುವೆ ಮಾಡಿಕೊಳ್ಳುತ್ತಿದ್ದಾನೆ. ಸಿನಿಮಾ ಮಾಡುತ್ತಿದ್ದಾನೆ. ಅವನನ್ನು ಸಿನಿಮಾಗೆ ಪರಿಚಯಿಸಿದ್ದೂ ಕೂಡ ನಾನಲ್ಲ. ಬೇರೆ ನಿರ್ಮಾಪಕರು ಅಭಿಷೇಕ್‌ನನ್ನು ಇಟ್ಟುಕೊಂಡು ಸಿನಿಮಾ ಮಾಡಿದರು ಎಂದು ಸುಮಲತಾ ಹೇಳಿದರು.

ಭದ್ರಕೋಟೆಗೆ ಏನು ಕೊಡುಗೆ ನೀಡಿದ್ದಾರೆ!

ಮಂಡ್ಯ ಜಿಲ್ಲೆಯಲ್ಲಿ ಸಂಸದರಿದ್ದಾರೆ ಎಂದು ಮೊದಲು ಅಂಬರೀಷ್, ಆನಂತರ ನಾನು ತೋರಿಸಿದ್ದೇನೆ. ಉಳಿದ ಸಂಸದರು ಏನು ಮಾಡಿದರು ಎಂದು ಪ್ರಶ್ನಿಸಿದ ಸುಮಲತಾ, ಮೂರು ಬಾರಿ ಸಂಸದರಾಗಿದ್ದ ಅಂಬರೀಷ್, ಜಿಲ್ಲೆಗೆ ನೂರಾರು ಸಮುದಾಯ ಭವನಗಳು ಹಾಗೂ ರಸ್ತೆ ಸೇರಿದಂತೆ ಮೂಲ ಸೌಕರ್ಯ ಒದಗಿಸಿದ್ದರು. ಲೋಕಸಭಾ ಕ್ಷೇತ್ರದ ಪ್ರತೀ ಹಳ್ಳಿಗೂ ಪ್ರವಾಸ ಮಾಡುತ್ತಿದ್ದರು. ಅವರ ಬಳಿಕ 10 ವರ್ಷ ಸಂಸದರಾಗಿದ್ದವರ್ಯಾರೂ ಒಮ್ಮೆಯೂ ಜಿಲ್ಲೆಯ ಪ್ರವಾಸ ಮಾಡಿಲ್ಲ. ಸಂಸದೆಯಾದ ಬಳಿಕ ನಾನು ಗ್ರಾಮಗಳಿಗೆ ಹೋದಾಗ ಅಂಬರೀಷ್ ಬಿಟ್ಟರೆ ನೀವೇ ನಮ್ಮ ಸಮಸ್ಯೆ ಕೇಳಲು ಬಂದಿದ್ದೀರಿ ಎಂದು ಜನರು ನನಗೆ ಹೇಳಿದ್ದಾರೆ ಎಂದರು.

ನನ್ನ ಮೇಲೆ ಹಲ್ಲೆಗೆ ಯತ್ನಿಸಿದರು: ಕಳೆದ ನಾಲ್ಕು ವರ್ಷದಲ್ಲಿ ಕೆಆರ್‌ಎಸ್ ಉಳಿಸಲು, ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಮತ್ತು ಜಿಲ್ಲೆಯಲ್ಲಿ ಗೂಂಡಾ ರಾಜಕಾರಣ ಹಿಮ್ಮೆಟ್ಟಿಸಲು ಪ್ರಯತ್ನಿಸಿದ ನನ್ನ ಮೇಲೆ ಎರಡು ಬಾರಿ ಹಲ್ಲೆ ಪ್ರಯತ್ನ ನಡೆದಿದೆ. ಒಂದೇ ಒಂದು ಸರ್ಕಾರಿ ಸಭೆಯನ್ನು ಸಮರ್ಪಕವಾಗಿ ನಡೆಸಲು ಬಿಡದೇ ಜೆಡಿಎಸ್ ಶಾಸಕರು ನನಗೆ ಹಿಂಸೆ ನೀಡಿದ್ದಾರೆ. ಕೆ.ಆರ್.ನಗರಕ್ಕೆ ಕಾರ್ಯಕ್ರಮಕ್ಕಾಗಿ ಹೋದಾಗ ಅಲ್ಲಿನ ಶಾಸಕರ ಬೆಂಬಲಿಗರು ನನ್ನ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಶ್ರೀರಂಗಪಟ್ಟಣ ಮತ್ತು ಪಾಂಡವಪುರದಲ್ಲಿ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಹಾಗೂ ಕೆಆರ್‌ಎಸ್ ಉಳಿಸಲು ತೆರಳಿದಾಗ ಅಲ್ಲೂ ಕೂಡ ನನ್ನ ಮೇಲೆ ಹಲ್ಲೆಗೆ ಯತ್ನಿಸಿದ್ದರು ಎಂದು ಅವರು ಹೇಳಿದರು.

ಕೆಆರ್‌ಎಸ್ ಉಳಿವಿಗಾಗಿ ನಾನು ಹೋರಾಟ ಮಾಡುತ್ತಿದ್ದರೆ, ಒಬ್ಬ ಹೆಣ್ಣು ಎನ್ನುವುದನ್ನೂ ಕೂಡ ನೋಡದೇ ಮಾಜಿ ಮುಖ್ಯಮಂತ್ರಿಯೊಬ್ಬರು ನನ್ನನ್ನು ಕೀಳು ಮಟ್ಟದ ಪದಗಳಿಂದ ಟೀಕಿಸಿದ್ದರು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಾತ್ರವಲ್ಲದೇ ನಾನು ಗೆದ್ದ ಮೇಲೂ ಇವರ ಕೀಳು ಮಟ್ಟದ ಟೀಕೆಗಳನ್ನು ಕೇಳುತ್ತಾ ಬಂದಿದ್ದೇನೆ. ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ಶಾಸಕರೂ ಕೂಡ ನನ್ನ ವಿರುದ್ಧ ಅಸಂಬದ್ಧವಾದ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ ಎಂದರು.

ರಾಜ್ಯದಲ್ಲೇ ಅತೀ ಹೆಚ್ಚು ದಿಶಾ ಸಭೆಗಳನ್ನು ನಡೆಸಿರುವ ಸಂಸದೆ ನಾನು. ಆದರೆ ಜಿಲ್ಲೆಯ ಅಭಿವೃದ್ಧಿಗಾಗಿ ದಿಶಾ ಸಭೆಗಳನ್ನು ಕರೆದಾಗ ಜೆಡಿಎಸ್‌ನ 6 ಶಾಸಕರೂ ಸಭೆಯಲ್ಲಿ ಗಲಾಟೆ ಮಾಡಿ ಸರಿಯಾಗಿ ಸಭೆ ನಡೆಸಲು ಬಿಡುತ್ತಿರಲಿಲ್ಲ. ಅವರಿಗೆ ಜಿಲ್ಲೆಯ ಅಭಿವೃದ್ಧಿಯೇ ಬೇಕಾಗಿಲ್ಲ. ಕೇವಲ ರಾಜಕೀಯ ಮಾತ್ರ ಬೇಕಾಗಿತ್ತು ಎಂದು ಹೇಳಿದರು. ಚುನಾವಣೆ ಬಂದಾಗ ಜನರಿಗೆ 500 ರೂ. ಕೊಟ್ಟು, ಗೆದ್ದ ನಂತರ 5 ಕೋಟಿ ಹಣ ಮಾಡುತ್ತಾರೆ. ಶಾಸಕ ಸ್ಥಾನವನ್ನು ಬಂಡವಾಳ ಹೂಡಿ ಲಾಭ ಪಡೆಯುವ ಹುದ್ದೆ ಎಂದುಕೊಂಡಿರುವ ಇವರಿಂದ ಜಿಲ್ಲೆಯ ಅಭಿವೃದ್ಧಿ ಸಾಧ್ಯವಿಲ್ಲ. ಆಕಸ್ಮಿಕವಾಗಿ ನಾನು ಚುನಾವಣಾ ರಾಜಕೀಯಕ್ಕೆ ಬಂದು ಗೆದ್ದ ನಾಲ್ಕು ವರ್ಷದಲ್ಲಿ ಜಿಲ್ಲೆಗೆ ಜಲ ಜೀವನ್ ಮಿಷನ್, ಜಲಧಾರೆ, ಅಮೃತ ಯೋಜನೆ, ತಾಯಿ-ಮಕ್ಕಳ ಆಸ್ಪತ್ರೆ, ಆಯುಷ್ಮಾನ್ ಭಾರತ್ ಯೋಜನೆ, ಆದರ್ಶ ಗ್ರಾಮ, ಪಿಎಸ್‌ಎಸ್‌ಕೆ ಮತ್ತು ಮೈಷುಗರ್ ಪುನಶ್ಚೇತನ ಹೀಗೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಸಂಸದರ ಅನುದಾನ ಕೋವಿಡ್‌ಗೆ ಮೀಸಲಾದರೂ ಕೂಡ ಸಂಕಷ್ಟದಲ್ಲಿದ್ದ ಜನರಿಗೆ ಆಂಬುಲೆನ್ಸ್, ವೆಂಟಿಲೇಟರ್ ಆಕ್ಸಿಜನ್ ಒದಗಿಸಿದ್ದೇನೆ. ಆದರೆ ಶಾಸಕರು ಕೋವಿಡ್ ಕೇರ್ ಸೆಂಟರ್‌ನಲ್ಲಿ ಡ್ಯಾನ್ಸ್ ಮಾಡುವುದಕ್ಕಷ್ಟೇ ಸೀಮಿತರಾಗಿದ್ದರು ಎಂದರು.

ಬ್ರೇಕ್ ಹಾಕಲು 'ಪಥ ಶಿಸ್ತು' ವ್ಯವಸ್ಥೆ

ಕಾಲ್ನಡಿಗೆಯಲ್ಲಿ ಸಾಗಲಿದ್ದಾರೆ. ಅಂದು ಸಮಾವೇಶದಲ್ಲಿ 1.50 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಮಂಡ್ಯ ಜಿಲ್ಲೆಯಲ್ಲಿ ಪಿಎಂ ಕಿಸಾನ್ ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳೂ, ಕಾರ್ಯಕರ್ತರು, ಹಿತೈಷಿಗಳು ಪಾಲ್ಗೊಳ್ಳಲಿದ್ದಾರೆ. ಮೈಸೂರಿಂದ 35 ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಇದೇ ಸಮಾವೇಶದಲ್ಲಿ ಹೆದ್ದಾರಿ ಲೋಕಾರ್ಪಣೆಯೊಂದಿಗೆ ಮೈಸೂರು-ಕುಶಾಲನಗರ ಹೊಸ ಹೆದ್ದಾರಿ ನಿರ್ಮಾಣಕ್ಕೂ ಭೂಮಿ ಪೂಜೆ, ಅಮೃತ್ ಯೋಜನೆಯಡಿ 135 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆ ಲೋಕಾರ್ಪಣೆ ಮಾಡಲಿದ್ದಾರೆ ಎಂದು ತಿಳಿಸಿದರು.

ಅಪಘಾತಕ್ಕೆ ಕಡಿವಾಣ: ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ ಎರಡೂ ನಗರಗಳ ನಡುವಿನ ಅಂತರ ಕಡಿಮೆ ಮಾಡುವುದಲ್ಲದೆ, ಮೈಸೂರು, ಮಂಡ್ಯ, ರಾಮನಗರದ ಅಭಿವೃದ್ಧಿಗೂ ನಾಂದಿಯಾಗಲಿದೆ. ಕೆಲವರು ಅವೈಜ್ಞಾನಿಕ ಕಾಮಗಾರಿ ಎಂದು ಆರೋಪಿಸುತ್ತಿದ್ದಾರೆ. ಆದರೆ ಕಾಮಗಾರಿ ಗುಣಮಟ್ಟದಿಂದ ಕೂಡಿದೆ. ಈ ರಸ್ತೆಯಲ್ಲಾದ ಅಪಘಾತಗಳು ಚಾಲಕರ ನಿರ್ಲಕ್ಷ್ಯದಿಂದ ಆಗಿವೆ. ಮಿತಿ ಮೀರಿದ ವೇಗದ ಚಾಲನೆ ವೇಳೆ, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಯುತ್ತಿದ್ದಾರೆ. ವಾಹನ ಸವಾರರು ಮಿತಿ ಮೀರಿದ ವೇಗ ಹಾಗೂ ಅಪಘಾತಕ್ಕೆ ಕಡಿವಾಣ ಹಾಕಲು ಕೆಲವು ಕ್ರಮ ಕೈಗೊಳ್ಳಲಾಗುವುದು. ಹೆದ್ದಾರಿ ಲೋಕಾರ್ಪಣೆ ಬಳಿಕ ಪಥ ಶಿಸ್ತು(ಲೇನ್ ಡಿಸಿಪ್ಲೀನ್) ಜಾರಿಗೊಳಿಸಲಾಗುತ್ತದೆ. 60 ಕಿಮಿ, 80 ಕಿಮಿ ವೇಗದಲ್ಲಿ ಸಾಗುವ ವಾಹನಗಳಿಗೆ ನಿರ್ದಿಷ್ಟ ಪಥ ನಿಗದಿ ಮಾಡಲಾಗುತ್ತದೆ. ಇದರಿಂದ ಅಪಘಾತ ತಡೆಗಟ್ಟಬಹುದು ಎಂದರು.

ಮೈಸೂರು ಜಿಲ್ಲೆಯ ವೀರಶೈವ ಲಿಂಗಾಯತ ಪ್ರಾಬಲ್ಯವುಳ್ಳ ಕ್ಷೇತ್ರಗಳಲ್ಲಿ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್‌ಗೆ ಆಗ್ರಹ

ಮೈಸೂರು, ಮಾ.10(ಜಿಎ)-ವಿಧಾನ ಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ವೀರಶೈವ ಲಿಂಗಾಯತರ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಸಮುದಾಯದ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಡುವ ಮೂಲಕ ಪ್ರಾತಿನಿಧ್ಯ ಕಲ್ಪಿಸುವಂತೆ ವೀರಶೈವ-ಲಿಂಗಾಯತ ಮತದಾರರ ಜಾಗೃತಿ ವೇದಿಕೆ ಬಿಜೆಪಿ ಹೈಕಮಾಂಡ್‌ಗೆ ಆಗ್ರಹಿಸಲು ನಿರ್ಧರಿಸಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾ ಭವನದಲ್ಲಿ ವೀರಶೈವ-ಲಿಂಗಾಯತ ಮತದಾರರ ಜಾಗೃತಿ ವೇದಿಕೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮತದಾರ ಜಾಗೃತಿ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ.



ವೀರಶೈವ ಲಿಂಗಾಯತ ಸಮುದಾಯದ ಮುಖಂಡರು ಸಭೆಯಲ್ಲಿ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಕೆ.ಆರ್.ಕ್ಷೇತ್ರದಲ್ಲಿ ಬ್ರಾಹ್ಮಣ ಸಮುದಾಯದ ಎಸ್.ಎ.ರಾಮದಾಸ್ ಅವರನ್ನು ಸಮುದಾಯ ಬೆಂಬಲಿಸುತ್ತಾ ಬಂದಿದೆ. ಈ ಬಾರಿ ಬ್ರಾಹ್ಮಣ ಮುಖಂಡರೇ ರಾಮದಾಸ್ ಅವರಿಗೆ ಟಿಕೆಟ್ ನೀಡದಂತೆ ಸುದ್ದಿಗೋಷ್ಠಿ ಮೂಲಕ ಆಗ್ರಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವೀರಶೈವ ಲಿಂಗಾಯಿತ ಸಮುದಾಯದ ಅಭ್ಯರ್ಥಿಗೆ ಅವರು ಬೆಂಬಲ ನೀಡಬೇಕೆಂದು ಮನವಿ ಮಾಡಲು ನಿರ್ಧರಿಸಲಾಯಿತು.

ಬಿಜೆಪಿ ಮತ್ತು ಕಾಂಗ್ರೆಸ್ ಕೆ.ಆರ್.ಕ್ಷೇತ್ರ ಮತ್ತು ವರುಣಾ ಕ್ಷೇತ್ರದಲ್ಲಿ ವೀರಶೈವ ಲಿಂಗಾಯಿತ ಸಮುದಾಯದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬೇಕು. ಈಗಾಗಲೇ ಕಾಂಗ್ರೆಸ್‌ನಲ್ಲಿ ನಮ್ಮ ಸಮುದಾಯದ ಕೆಲವರು ಟಿಕೆಟ್ ನಿರೀಕ್ಷೆಯಲ್ಲಿದ್ದು, ಅವರಿಗೆ ಅವಕಾಶ ನೀಡುವ ಮೂಲಕ ವೀರಶೈವ ಲಿಂಗಾಯತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಕೆಲ ಮುಖಂಡರು ಆಗ್ರಹಿಸಿದರು. ಈ ಬಾರಿಯ ಚುನಾವಣೆಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಅಭ್ಯರ್ಥಿಗಳಿಗೆ ಸ್ಪರ್ಧೆಗೆ ಅವಕಾಶ ಮಾಡಿಕೊಡುವಂತೆ ಬಿಜೆಪಿಯ ಕೇಂದ್ರ ಮತ್ತು ರಾಜ್ಯ ನಾಯಕರಿಗೆ ಮನವಿ ಸಲ್ಲಿಸುವುದು ಹಾಗೆಯೇ ಬ್ರಾಹ್ಮಣ ಸಮುದಾಯವೂ ಇಂತಹ ಅಭ್ಯರ್ಥಿಗಳಿಗೆ ಬೆಂಬಲ ನೀಡುವಂತೆ ಮನವಿ ಮಾಡಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸಭೆಯಲ್ಲಿ ಮುಖಂಡರಾದ ಯು.ಎಸ್.ಶೇಖರ್, ಕೆ.ಎನ್.ಪುಟ್ಟಬುದ್ಧಿ, ಗುರುಸ್ವಾಮಿ, ಲೋಕೇಶ್, ಮಾರ್ಬಳ್ಳಿ ಚಂದ್ರಶೇಖರ್, ಲಿಂಗರಾಜು, ಬಿ.ಎಸ್.ಪ್ರಶಾಂತ್, ವೀರೇಶ್ ಸೇರಿದಂತೆ ವಿವಿಧ ಬಳಗಗಳ ಅಧ್ಯಕ್ಷರು ಭಾಗಿಯಾಗಿದ್ದರು.

ಮೈಸೂರಲ್ಲಿ ಕಳಪೆ ಗುಣಮಟ್ಟದ ವಾಲ್‌ನಟ್ ಮಾರಾಟ: ಸಾರ್ವಜನಿಕರ ದೂರು





ಮೈಸೂರು, ಮಾ.10-ಮೈಸೂರಲ್ಲಿ ಅತ್ಯಂತ ಕಳಪೆ ಗುಣಮಟ್ಟದ ವಾಲ್‌ನಟ್ ಮಾರಾಟ ಹವ್ಯಾಹತವಾಗಿ ನಡೆದಿದ್ದು, ಗ್ರಾಹಕರು ಕೊಳ್ಳುವಾಗ ಎಚ್ಚರ ವಹಿಸಬೇಕಿದೆ.

ಬೋಗಾದಿ ರಸ್ತೆ, ಕುಕ್ಕರಹಳ್ಳಿ ಕೆರೆ ಬಳಿ ವಾಲ್‌ನಟ್ ಖರೀದಿಸಿದ ವ್ಯಕ್ತಿಯೊಬ್ಬರು, ಈ ರೀತಿ ದೂರಿದ್ದಾರೆ. ಹೊರ ರಾಜ್ಯಗಳಿಂದ ಬಂದಿರುವ ವ್ಯಾಪಾರಿಗಳು ರಸ್ತೆ ಬದಿ ವಾಲ್‌ನಟ್ ಮಾರಾಟ ಮಾಡುತ್ತಿದ್ದಾರೆ. ಕೆಜಿಗೆ 400 ರೂ.ಗೆ ಬಿಕರಿ ಮಾಡುತ್ತಿದ್ದಾರೆ. ಮನೆಗೆ ತೆಗೆದುಕೊಂಡು ಹೋದ ವಾಲ್‌ನಟ್ ಒಡೆಯುವುದು ಕಷ್ಟಕರವಾಯಿತು. ಹೇಗೋ ಅದನ್ನು ಬಿಡಿಸಿದಾಗ ಅದರೊಳಗೆ ತಿರುಳೇ ಇರಲಿಲ್ಲ ಎಂದು ತಿಳಿಸಿದ್ದಾರೆ.

ವಾಲ್‌ನಟ್ ಮಾತ್ರವಲ್ಲ ಹಲವು ಉತ್ಪನ್ನಗಳು ರಸ್ತೆ ಬದಿ ಸಿಗುತ್ತವೆ. ದಾರಿಮಧ್ಯೆ ಸುಲಭವಾಗಿ ಸಿಗುವುದರಿಂದ ಗ್ರಾಹಕರು ಕೊಂಡುಕೊಳ್ಳುತ್ತಾರೆ ಎಂಬ ಉದ್ದೇಶ ಆ ವ್ಯಾಪಾರಿಗಳದ್ದು. ಅಲ್ಲದೆ ಮಳಿಗೆ ಬಾಡಿಗೆ ಇನ್ನಿತರ ವೆಚ್ಚ ಭರಿಸುವ ತಲೆಬಿಸಿ ಇಲ್ಲ. ಇಂದು ಇಲ್ಲಿ, ನಾಳೆ ಅಲ್ಲಿ ಎನ್ನುವಂತೆ ಯಾವುದೋ ಸ್ಥಳದಲ್ಲಿ ಭರ್ಜರಿ ವ್ಯಾಪಾರ ಮಾಡುತ್ತಾರೆ. ಇದೇನೇ ಇರಲಿ ಕಳಪೆ ಗುಣಮಟ್ಟದ ಪದಾರ್ಥಗಳನ್ನು ಮಾರಾಟ ಮಾಡಿ ಗ್ರಾಹಕರ ವಂಚಿಸುವುದು ಅಪರಾಧ. ಕೊಳ್ಳುವಾಗ ಗ್ರಾಹಕರೂ ಎಚ್ಚರ ವಹಿಸುವುದು ಒಳ್ಳೆಯದು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೂ ಎಚ್ಚೆತ್ತುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ಜನರೇ ನಿರ್ಧರಿಸುತ್ತಾರೆ: ಗೊಂದಲ ಸೃಷ್ಟಿಸಬೇಡಿ ಪ್ಲೀಸ್

ಮೈಸೂರು, ಮಾ.10- ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ಯಾರಿಗೆ ಸಲ್ಲಬೇಕೆಂದು ಜನರೇ ತೀರ್ಮಾನಿಸುತ್ತಾರೆ, ಈ ಬಗ್ಗೆ ಅನಗತ್ಯ ಗೊಂದಲ ಸೃಷ್ಟಿಸಬೇಡಿ ಎಂದು ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಹೇಳಿದ್ದಾರೆ.



ದಶಪಥ ಹೆದ್ದಾರಿಯಿಂದ ಮೈಸೂರು-ಬೆಂಗಳೂರು ಪ್ರಯಾಣ ಸಮಯ ಕಡಿತದ ಜೊತೆಗೆ ಉಭಯ ನಗರಗಳ ಅಭಿವೃದ್ಧಿಗೆ ಪೂರಕವಾಗಿದೆ. ಆದರೆ ಈ ವಿಚಾರವಾಗಿ ಚುನಾವಣೆ ಹೊಸ್ತಿಲಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆದಿರುವುದು ಸರಿಯಲ್ಲ. ಯೋಜನೆಯ ಕ್ರೆಡಿಟ್ ಮೂಲಕ ಚುನಾವಣೆಯಲ್ಲಿ ಲಾಭ ಪಡೆಯಬಹುದೆಂಬ ಏಕಮೇವ ಉದ್ದೇಶದಿಂದ ಇಲ್ಲಸಲ್ಲದ ಆರೋಪ, ಟೀಕೆ ಮಾಡುವುದನ್ನು ಜನ ಒಪ್ಪುವುದಿಲ್ಲ ಎಂದಿದ್ದಾರೆ. ಕೆಆರ್‌ಎಸ್ ಅಣೆಕಟ್ಟೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ. ಇದಕ್ಕೆ ಒತ್ತಾಸೆಯಾದವರು ಸರ್.ಎಂ.ವಿಶ್ವೇಶ್ವರಯ್ಯನವರು. ಹಣದ ಕೊರತೆ ಎದುರಾದಾಗ ಮಹಾರಾಣಿಯವರು ತಮ್ಮ ಒಡವೆಗಳನ್ನು ನೀಡುವ ಮೂಲಕ ಸತ್ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಿದರು. ಹೀಗೆ ಹೆದ್ದಾರಿ ನಿರ್ಮಾಣ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿದ ಮಾತ್ರಕ್ಕೆ ಕ್ರೆಡಿಟ್ ಅಪೇಕ್ಷಿಸುವುದು ಎಷ್ಟು ಸರಿ. ಯೋಜನೆಯನ್ನು ಅನುಷ್ಠಾನಕ್ಕೆ ತಂದು ಕಾಲಾನುಸಾರ ಅಗತ್ಯ ಅನುದಾನವನ್ನು ಒದಗಿಸಿದ್ದು ಮುಖ್ಯವಲ್ಲವೆ. ಯಾವುದೇ ಕಾರ್ಯವನ್ನು ಆರಂಭಿಸುವುದಕ್ಕಿಂತ ಅದನ್ನು ಪೂರ್ಣಗೊಳಿಸುವುದು ಬದ್ಧತೆ. ಎಲ್ಲಾ ಬೆಳವಣಿಗೆಗಳನ್ನು ಜನ ಗಮನಿಸುತ್ತಿದ್ದಾರೆ. ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ಯಾರಿಗೆ ಸಲ್ಲಬೇಕೆಂದು ಅವರೇ ತೀರ್ಮಾನಿಸುತ್ತಾರೆ. ಈ ಬಗ್ಗೆ ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಮೈಸೂರಿನ ಡಾ.ಶ್ರೀನಾಥ್ ಅವರ ಮಾರ್ಗ ದರ್ಶನದಲ್ಲಿ ಎಂ.ಎಸ್.ಸುನೀತ ಪಟೇಲ್ ಅವರು 'ಡೆವಲಪಮೆಂಟ್ ಆಫ್ ಇಮೇಜ್ ಪ್ರೊಸೆಸಿಂಗ್ ಅಪ್‌ರೋಚಸ್ ಫಾರ್ ಸೇಫ್ ವೆಹಿಕಲ್ ಡ್ರೈವಿಂಗ್ ಸಿಸ್ಟಮ್' ಕುರಿತು ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪಿಎಚ್.ಡಿ ಅಂಗೀಕರಿಸಿದೆ.

ಒಪ್ಪಿತ ಸಂಬಂಧವನ್ನು ಅತ್ಯಾಚಾರವೆಂದು ಪರಿಗಣಿಸಲು ಸಾಧ್ಯವಿಲ್ಲ: ಹೈಕೋರ್ಟ್

ಬೆಂಗಳೂರು: ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಆರೋಪ ಸಂಬಂಧ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್, ಒಪ್ಪಿತ ಸಂಬಂಧವನ್ನು ಅತ್ಯಾಚಾರವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಹಲವು ಬಾರಿ ಅತ್ಯಾಚಾರ ಎಸಗಿದ್ದಾಗಿ ಮಲ್ಲಿಕಾರ್ಜುನ ದೇಸಾಯಿ ಗೌಡರ್ ಎಂಬಾತನ ವಿರುದ್ಧ ದಾಖಲಿಸಿದ್ದ ಪ್ರಕರಣವನ್ನು ರದ್ದುಗೊಳಿಸಿದ ನ್ಯಾ.ಎಂ.ನಾಗಪ್ರಸನ್ನರಿದ್ದ ಹೈಕೋರ್ಟ್ ಏಕಸದಸ್ಯ ಪೀಠ, ಐದು ವರ್ಷಗಳ ಸಂಬಂಧ ಬಲವಂತದ್ದೆಂದು ಹೇಳಲು ಸಾಧ್ಯವಿಲ್ಲ. ಒಪ್ಪಿತ ಸಂಬಂಧವನ್ನು ಅತ್ಯಾಚಾರವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಅದಾಗ್ಯೂ, ಮಲ್ಲಿಕಾರ್ಜುನ ವಿರುದ್ಧ ದಾಖಲಾದ ಬೆದರಿಕೆ, ಹಲ್ಲೆ ಆರೋಪದ ವಿಚಾರಣೆ ಮುಂದೂಡಿ ಆದೇಶಿಸಿದೆ.



ಅತ್ಯಾಚಾರ ಆರೋಪ ಅಥವಾ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯು ಸಂತ್ರಸ್ತೆಯನ್ನು ವಿವಾಹವಾದರೆ ಆತನ ವಿರುದ್ಧ ದಾಖಲಾದ ಪ್ರಕರಣ ರದ್ದುಗೊಳಿಸಲಾಗುತ್ತದೆ. ಇಂತಹ ಅನೇಕ ನಿದರ್ಶನಗಳು ಕಣ್ಣ ಮುಂದಿವೆ. ಅದಾಗ್ಯೂ, ಕೆಲವೊಮ್ಮೆ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಅಥವಾ ಪೊಲೀಸ್ ತನಿಖೆಯಲ್ಲಿ ದೋಷ ಕಂಡುಬಂದಲ್ಲಿ ಆರೋಪಿತನ ವಿರುದ್ಧ ದಾಖಲಾದ ಪ್ರಕರಣ ರದ್ದುಗೊಂಡ ನಿದರ್ಶನವೂ ಇದೆ. 2022ರ ಡಿಸೆಂಬರ್ 24ರಂದು ಕರ್ನಾಟಕ ಹೈಕೋರ್ಟ್, ಅತ್ಯಾಚಾರ ಆರೋಪದ ಪ್ರಕರಣವೊಂದನ್ನು ರದ್ದುಪಡಿಸಿತ್ತು. ಸಾಧ್ಯಾ ಸಾಧ್ಯತೆಗಳ ಆಧಾರದಲ್ಲಿ ಆರೋಪಿಯನ್ನು ಅಪರಾಧಿ ಎಂದು ತೀರ್ಮಾನಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

ಬಾಲಕಿಯೊಂದಿಗೆ ಬಲವಂತವಾಗಿ ಲೈಂಗಿಕ ಕ್ರಿಯೆ ನಡೆಸಿದ ಆರೋಪದಲ್ಲಿ 45 ವರ್ಷದ ವ್ಯಕ್ತಿಯೊಬ್ಬನ ವಿರುದ್ಧ ಪ್ರಕರಣ ದಾಖಲಾಗಿತ್ತು. ಆದರೆ, ಸಂತ್ರಸ್ತೆ ಹೇಳಿಕೆ ಆರೋಪವನ್ನು ಸಾಬೀತುಪಡಿಸುವಂತಿರಲಿಲ್ಲ. ಜೊತೆಗೆ, ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರಲಿಲ್ಲ. ಅತ್ಯಾಚಾರಕ್ಕೆ ಒಳಗಾಗಿದ್ದಾರೆ ಎಂಬುದಕ್ಕೆ ಅಗತ್ಯವಾದ ವೈದ್ಯಕೀಯ ಸಾಕ್ಷ್ಯಗಳನ್ನು ಒದಗಿಸುವಲ್ಲಿ ಪೊಲೀಸರು ವಿಫಲರಾಗಿದ್ದರು. ಇದೇ ಕಾರಣದಿಂದ 2005ರಲ್ಲಿ ಮಂಡ್ಯದ ವಿಚಾರಣಾ ನ್ಯಾಯಾಲಯ ಆರೋಪಿಗಳನ್ನು ಖುಲಾಸೆಗೊಳಿಸಿತ್ತು

ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ್ದ ಕೋರ್ಟ್, ತನಿಖಾಧಿಕಾರಿಗಳು ಆರೋಪಿಗಳ ಮೇಲೆ ಮಾಡಿರುವ ಆರೋಪವನ್ನು ಸೂಕ್ತ ರೀತಿಯಲ್ಲಿ ದಾಖಲಿಸಿಲ್ಲ. ಸಾಕ್ಷ್ಯಾಧಾರಗಳು ಮತ್ತು ವೈದ್ಯಕೀಯ ದಾಖಲೆಗಳು ಸಂತ್ರಸ್ತ ಬಾಲಕಿಯ ಮೇಲೆ ಅತ್ಯಾಚಾರ ನಡೆದಿದೆ ಎಂಬುದನ್ನು ದೃಢಪಡಿಸಿಲ್ಲ. ಹೀಗಾಗಿ ಆರೋಪಿಯನ್ನು ತಪ್ಪಿತಸ್ಥ ಎನ್ನುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿತ್ತು.



ಮೈಸೂರು ತಾಲೂಕಿನ ಕಾಳಿಸಿದ್ದನಹುಂಡಿ ಗ್ರಾಮದ ಸಿದ್ದರಾಮೇಶ್ವರ ದೇವಸ್ಥಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಮೈಮುಲ್ ಮಾಜಿ ಅಧ್ಯಕ್ಷರೂ ಆದ ಹಾಗೂ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಸಿದ್ದೇಗೌಡರು ಉದ್ಘಾಟಿಸಿದರು. ಈ ವೇಳೆ ಅವರೊಂದಿಗೆ ಜಿಪಂ ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಮಾದೇಗೌಡ ಇನ್ನಿತರ ಮುಖಂಡರನ್ನು ಗ್ರಾಮಸ್ಥರು ಅಭಿನಂದಿಸಿದರು.

ಕೊಡಗು ಪ್ರವೇಶಿಸಿದ ಬಿಜೆಪಿ ವಿಜಯಸಂಕಲ್ಪ ಯಾತ್ರೆ





ಗೋಣಿಕೊಪ್ಪ, ಮಾ.10– ಕೊಡಗು ಜಿಲ್ಲೆಗೆ ಆಗಮಿಸಿದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯನ್ನು ಶುಕ್ರವಾರ ತಿತಿಮತಿಯಲ್ಲಿ ಪೂರ್ಣಕುಂಭದೊಂದಿಗೆ ಅದ್ಧೂರಿಯಾಗಿ ಬರಮಾಡಿಕೊಳ್ಳಲಾಯಿತು.

ಸಂಜೆ 5.30ರ ಸುಮಾರಿಗೆ ತಿತಿಮತಿ ಗಣಪತಿ ದೇವಸ್ಥಾನ ಸಮೀಪ ಸಾವಿರಾರು ಕಾರ್ಯಕರ್ತರು ಯಾತ್ರೆಯನ್ನು ಅದ್ಧೂರಿಯಾಗಿ ಸ್ವಾಗತಿಸಿದರು. ನಂತರ ತಿತಿಮತಿಯಿಂದ ಗೋಣಿಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದವರೆಗೆ ದ್ವಿಚಕ್ರ, ನಾಲ್ಕುಚಕ್ರ ವಾಹನಗಳ ರೋಡ್ ಶೋ ಮೂಲಕ ರಥವನ್ನು ಬರ ಮಾಡಿಕೊಳ್ಳಲಾಯಿತು.

6 ಗಂಟೆಗೆ ಆರ್‌ಎಂಸಿ ಆವರಣದಿಂದ ಕಾಲ್ನಡಿಗೆ ಮೂಲಕ ಸಾವಿರಾರು ಕಾರ್ಯಕರ್ತರು ಬಿಜೆಪಿ ಪಕ್ಷ, ಕೇಂದ್ರದ ನಾಯಕರು, ರಾಜ್ಯಮಟ್ಟದ ನಾಯಕರುಗಳಿಗೆ ಜೈಕಾರ ಕೂಗಿದರು. ಕೊಡವ ವಾಲಗ, ಚಂಡೆ, ತಮಟೆ ಬಾರಿಸಿಕೊಂಡು ಬಸ್ ನಿಲ್ದಾಣಕ್ಕೆ ಆಗಮಿಸಿದರು. ರಥ ಯಾತ್ರೆ ಉಸ್ತುವಾರಿ ವಹಿಸಿಕೊಂಡಿರುವ ಸಂಸದ ಡಿ.ವಿ. ಸದಾನಂದ ಗೌಡ, ಮಾಜಿ ಸಚಿವ ಕೆ. ಎಸ್. ಈಶ್ವರಪ್ಪ, ವಿರಾಜಪೇಟೆ ಶಾಸಕ ಕೆ. ಜಿ. ಬೋಪಯ್ಯ, ಮಡಿಕೇರಿ ಶಾಸಕ, ಬಿಜೆಪಿ ಜಿಲ್ಲಾಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ವಿರಾಜಪೇಟೆ ಮಂಡಲ ಅಧ್ಯಕ್ಷ ನೆಲ್ಲಿರ ಚಲನ್‌ಕುಮಾರ್ ಆಗಮಿಸಿದರು. ದಾರಿಯುದ್ದಕ್ಕೂ ಕಾರ್ಯಕರ್ತರಿಗೆ ಕೈಬೀಸಿ ಧನ್ಯವಾದ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಆಗಮನ ನಿರೀಕ್ಷೆಯಲ್ಲಿದ್ದ ಕಾರ್ಯಕರ್ತರಿಗೆ ನಿರಾಸೆಯಾಯಿತು. ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ರಥಯಾತ್ರೆ ಉಸ್ತುವಾರಿ ಪ್ರತಾಪ್ ಸಿಂಹ ನಾಯಕ್, ಗೋಣಿಕೊಪ್ಪ ಭಾಗದ ಉಸ್ತುವಾರಿ ಸಿ. ಕೆ ಬೋಪಣ್ಣ ಇದ್ದರು.

ಸಂಚಾರ ಸ್ಥಗಿತ: 5 ಗಂಟೆಗೆ ಆರಂಭವಾಗಬೇಕಿದ್ದ ಯಾತ್ರೆ, 6 ಗಂಟೆಗೆ ಆರಂಭವಾದ ಕಾರಣ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು. ಮಧ್ಯಾಹ್ನ 3.30ಕ್ಕೆ ಬೈಪಾಸ್ ಮೂಲಕ ವಾಹನ ಸಂಚರಿಸಲು ಅವಕಾಶ ನೀಡಲಾಯಿತು. ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಕಾರ್ಯಕ್ರಮ ಆಯೋಜನೆ ಹಿನ್ನೆಲೆ, ಖಾಸಗಿ ಬಸ್‌ಗಳನ್ನು ಪಾಲಿಬೆಟ್ಟ ರಸ್ತೆ ಉಮಾಮಹೇಶ್ವರಿ ದೇವಸ್ಥಾನ, ಪೊನ್ನಂಪೇಟೆ ರಸ್ತೆವರೆಗೆ ಸಂಚರಿಸುವ ಕ್ರಮಕೈಗೊಳ್ಳಲಾಗಿತ್ತು ಸೀಗೆತೋಡುವಿನಿಂದ ಗೋಣಿಕೊಪ್ಪ ಪಟ್ಟಣದವರೆಗೂ ಬಿಜೆಪಿ ಕೇಂದ್ರನಾಯಕರುಗಳ ಕಟೌಟ್‌ಗಳು ರಾರಾಜಿಸಿದವು. ದಾರಿಯುದ್ದಕ್ಕೂ ಪಕ್ಷದ ಬಾವುಟ, ಬಸ್ ನಿಲ್ದಾಣದಲ್ಲಿ ಧ್ವಜದ ಮೂಲಕ ಗಮನ ಸೆಳೆಯಲಾಯಿತು.

ತಂಸೀನಾ ಬಾನುಗೆ ಉತ್ತಮ ಅಂಗನವಾಡಿ ಕಾರ್ಯಕರ್ತೆ ರಾಜ್ಯ ಪ್ರಶಸ್ತಿ



ಸಿದ್ದಾಪುರ, ಮಾ.10– ನಿಸ್ವಾರ್ಥ ಸೇವೆಯ ಮೂಲಕ ಮಾದರಿ ಕಾರ್ಯಕರ್ತೆ ಎಂದೇ ಹೆಸರುವಾಸಿಯಾಗಿರುವ ತಂಸೀನಾ ಬಾನು ಉತ್ತಮ ಅಂಗನವಾಡಿ ಕಾರ್ಯಕರ್ತೆ ಪ್ರಶಸ್ತಿಗೆ ಬಾಜನರಾಗಿದ್ದಾರೆ.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಕೊಡಗು ಜಿಲ್ಲೆಯಿಂದ ಆಯ್ಕೆಯಾದ ಮಡಿಕೇರಿ ತಾಲೂಕಿನ ಹೊದ್ದೂರು ಕಬ್ಬಡಕೇರಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ತಂಸೀನಾ ಬಾನು, ಅಂಗನ ವಾಡಿ ಕೇಂದ್ರದ ನಿರ್ವಹಣೆ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಇಲಾಖೆಯಿಂದ ಸಿಗುವ ಸೌಲಭ್ಯ, ಮಾದರಿ ಶಿಕ್ಷಣ ಭೋದನೆಯಲ್ಲಿನ ಮುತುವರ್ಜಿ, ಮಾತೃವಂದನಾ–ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯಗಳನ್ನು ಫಲಾನುಭವಿಗಳಿಗೆ ದೊರಕಿಸಿಕೊಡುವಲ್ಲಿನ ನಿರಂತರ ಪ್ರಯತ್ನ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಸಮರ್ಪಕವಾಗಿ ಒದಗಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಗುರುತಿಸಿ ರಾಜ್ಯದ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿಯವರು ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಗೆ ನೀಡುವ ಪ್ರಶಸ್ತಿಯನ್ನು ತಂಸೀನಾ ಬಾನು ಅವರಿಗೆ ಪ್ರದಾನ ಮಾಡಿದರು.

ಗಾಂಜಾ ಮಾರಾಟಗಾರನ ಬಂಧನ



ಮಡಿಕೇರಿ, ಮಾ.10– ಕುಶಾಲನಗರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಪಿರಿಯಾಪಟ್ಟಣದ ಸುಂಕದಕಟ್ಟೆ... ದಳ್ಳಿ ಗ್ರಾಮ ನಿವಾಸಿಯಾದ ನಿಶಾಂತ್. ಎಸ್.ಜಿ.(20) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತನಿಂದ 170 ಗ್ರಾಂ. ಗಾಂಜಾ ವಶಕ್ಕೆ ಪಡೆಯಲಾಗಿದೆ.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ಮಾರಾಟದ ಬಗ್ಗೆ ಠಾಣೆಗಳಿಗೆ ಸಾರ್ವಜನಿಕರಿಂದ ದೂರು ಬರುತ್ತಿದ್ದು, ಮಾದಕ ವಸ್ತುಗಳ ಮಾರಾಟವನ್ನು ತಡೆಗಟ್ಟುವ ನಿಟ್ಟಿನಲ್ಲಿ ತನಿಖಾ ತಂಡ ರಚಿಸಲಾಗಿತ್ತು. ಮಾ.9ರಂದು ಕುಶಾಲನಗರ ಗೌಡ ಸಮಾಜದ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಕುರಿತು ಈ ತಂಡಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಗಂಗಾಧರಪ್ಪ. ಆರ್.ವಿ, ಕುಶಾಲನಗರ ನಗರ ಪೊಲೀಸ್ ಠಾಣೆ ವೃತ್ತನಿರೀಕ್ಷಕ ಶ್ರೀಕಾಂತ್, ಉಪ ನಿರೀಕ್ಷಕ ಲೋಹಿತ್, ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ. ಈ ಪ್ರಕರಣದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಮಾಹಿತಿ ನೀಡಿ: ಯುವ ಸಮುದಾಯ ಮಾದಕ ವ್ಯಸನಿಗಳಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವುದನ್ನು ತಡೆಗಟ್ಟುವ ಸಲುವಾಗಿ ಮಾದಕ ವಸ್ತುಗಳನ್ನು ಬಳಸುವ ಹಾಗೂ ಮಾರಾಟ ಮಾಡುವ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಹಾಗೂ ಕೆ.ಎಸ್.ಪಿ ತಂತ್ರಾಂಶದ ಮೂಲಕ ಮಾಹಿತಿ ನೀಡುವಂತೆ ಪೊಲೀಸ್ ಇಲಾಖೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಅಕ್ರಮ ಚಟುವಟಿಕೆಗಳ ಕುರಿತು ಮಾಹಿತಿ ಒದಗಿಸುವವರ ವಿವರಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಅಭಯ ನೀಡಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಜೆಡಿಎಸ್ ಪ್ರತಿಭಟನೆ



ಮಡಿಕೇರಿ, ಮಾ.10– ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಕೊಡಗು ಜಿಲ್ಲಾ ಜಾತ್ಯಾತೀತ ಜನತಾದಳ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು. ನಗರದ ಎ.ವಿ ಶಾಲೆಯಿಂದ ಸಿಲಿಂಡರ್‌ನ ಅಣಕು ಶವಯಾತ್ರೆ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿದ ಜೆಡಿಎಸ್ ಪ್ರಮುಖರು ಹಾಗೂ ಕಾರ್ಯ ಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿ ಬೆಲೆ ಏರಿಕೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ನಗರ ಪ್ರದೇಶ ಮಾತ್ರವಲ್ಲದೇ ಹಳ್ಳಿಗಳಲ್ಲೂ ದಿನನಿತ್ಯ ಅಡುಗೆ ಅನಿಲಕ್ಕೆ ಜನರು ಅವಲಂಭಿತರಾಗಿದ್ದಾರೆ. ರೂ.450 ಇದ್ದ ಅಡುಗೆ ಇದೀಗ ರೂ.1140ಕ್ಕೆ ಏರಿಕೆ ಮಾಡಲಾಗಿದೆ. ಹೀಗಾದರೆ ಜನಸಾಮಾನ್ಯರು ಬದುಕು ಕಟ್ಟಿಕೊಳ್ಳಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಮಧ್ಯಮ ವರ್ಗದ ಜನ, ಬಡವರು, ಆಟೋ ಚಾಲಕರು, ಕಾರು ಚಾಲಕರು, ಕೂಲಿ ಕಾರ್ಮಿಕರಿಗೆ ಮುಂದಿನ ದಿನಗಳಲ್ಲಿ ಮತ್ತಷ್ಟು ತೊಂದರೆಯಾಗಲಿದ್ದು, ಸರ್ಕಾರ ಬೆಲೆ ಏರಿಕೆಯನ್ನು ನಿಯಂತ್ರಣಕ್ಕೆ ತರಬೇಕು ಎಂದು ಒತ್ತಾಯಿಸಿದರು. ಬಳಿಕ ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು.

ರಾಜ್ಯ ಸಂಘಟನಾ ಕಾರ್ಯದರ್ಶಿ ಮನ್ಸೂರ್ ಆಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಜೆ ಮೋಹನ್ ಮೌರ್ಯ, ಕಾರ್ಯದರ್ಶಿ ಎನ್.ಸಿ.ಸುನೀಲ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಇಸಾಕ್ ಖಾನ್, ಸೋಮವಾರಪೇಟೆ ತಾಲೂಕು ಅಧ್ಯಕ್ಷ ನಾಗರಾಜು, ಕುಶಾಲನಗರ ಮಹಿಳಾ ಅಧ್ಯಕ್ಷೆ ಪದ್ಮ ಮಧುಕುಮಾರ್, ವಿರಾಜಪೇಟೆ ತಾಲೂಕು ಅಧ್ಯಕ್ಷ ಮಂಜುನಾಥ್, ಪ್ರಮುಖರಾದ ಲೀಲಾ ಶೇಷಮ್ಮ, ಸುನಂದ, ರವಿ ಕಿರಣ್ ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಪ್ಪಚೆಟ್ಟೋಳಂಡ ಹಾಕಿ ಉತ್ಸವಕ್ಕೆ ಕೊಡವ ಹಾಕಿ ಅಕಾಡೆಮಿಯಿಂದ ಬೆಳ್ಳಿ ರೋಲಿಂಗ್ ಟ್ರೋಫಿ



ಮಡಿಕೇರಿ, ಮಾ.10– ನಾಪೋಕ್ಲುವಿನಲ್ಲಿ ಇದೇ ಮಾ.18ರಂದು ಆರಂಭಗೊಳ್ಳುವ ಅಪ್ಪಚೆಟ್ಟೋಳಂಡ ಹಾಕಿ ಉತ್ಸವಕ್ಕೆ ಕೊಡವ ಹಾಕಿ ಅಕಾಡೆಮಿಯಿಂದ ಬೆಳ್ಳಿಯ ಆಕರ್ಷಕ ರೋಲಿಂಗ್ ಟ್ರೋಫಿಯನ್ನು ನೀಡಲಾಗುತ್ತಿದೆ ಎಂದು ಅಕಾಡೆಮಿ ಉಪಾಧ್ಯಕ್ಷ ಕುಕ್ಕೇರ ಜಯಾ ಚಿಣ್ಣಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬೆಳ್ಳಿಯ ರೋಲಿಂಗ್ ಟ್ರೋಫಿಯನ್ನು ಕೊಡವ ಕುಟುಂಬಗಳ ನಡುವಣ ಹಾಕಿ ಉತ್ಸವದಲ್ಲಿ ಸತತ 3 ವರ್ಷ ಗೆಲುವು ಸಾಧಿಸುವ ತಂಡ ತನ್ನದಾಗಿಸಿಕೊಳ್ಳಲಿದೆ ಎಂದು ಮಾಹಿತಿ ನೀಡಿದರು.

ದಿ.ಪಾಂಡಂಡ ಕುಟ್ಟಪ್ಪ ಅವರಿಂದ ಆರಂಭಗೊಂಡ ಕೊಡವ ಹಾಕಿ ಉತ್ಸವದಲ್ಲಿ ಪಾಲ್ಗೊಂಡ ತಂಡಗಳ ಆಧಾರದಲ್ಲಿ, ಪಂದ್ಯಾವಳಿ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ದಾಖಲಾಗಿದೆ. ಈ ಬಾರಿ 'ಗಿನ್ನಿಸ್' ದಾಖಲೆ ಮಾಡುವ ಉದ್ದೇಶವಿದ್ದು, ಇಲ್ಲಿಯವರೆಗೆ ಪಂದ್ಯಾವಳಿಗೆ 336 ತಂಡಗಳು ನೋಂದಣಿಯಾಗಿರುವುದಾಗಿ ತಿಳಿಸಿದರು.

ವಾರ್ಷಿಕ ಮಹಾಸಭೆ: ಕೊಡವ ಹಾಕಿ ಅಕಾಡೆಮಿಯ 2022–23ನೇ ಸಾಲಿನ ವಾರ್ಷಿಕ ಮಹಾ ಸಭೆ ಮಾ.13ರಂದು ಬೆಳಿಗ್ಗೆ 10.30 ಗಂಟೆಗೆ ವೀರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಅಕಾಡೆಮಿ ಅಧ್ಯಕ್ಷರಾದ ಪಾಂಡಂಡ ಬೋಪಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದರು. ಸಭೆಯಲ್ಲಿ ಸಂತಾಪ ಸೂಚನೆ, ಕಳೆದ ಮಹಾಸಭೆಯ ವರದಿ ಮಂಡನೆ, ಲೆಕ್ಕ ಪತ್ರ ಮಂಡನೆಯೊಂದಿಗೆ ಅಪ್ಪಚೆಟ್ಟೋಳಂಡ ಹಾಕಿ ನಮ್ಮೆಗೆ ಬೆಂಬಲ ಸೂಚಿಸುವ ಬಗ್ಗೆ ಚರ್ಚೆ ನಡೆಯಲಿದೆ ಎಂದು ತಿಳಿಸಿದರು. ಅಕಾಡೆಮಿಯು 406 ಕುಟುಂಬಗಳ ಸದಸ್ಯತ್ವ ಹೊಂದಿದ್ದು ಎಲ್ಲರೂ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ ಅವರು ಹೆಚ್ಚಿನ ಮಾಹಿತಿಗೆ ಮೊ. 9110808009 ಅನ್ನು ಸಂಪರ್ಕಿಸಬಹುದೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ನಿರ್ದೇಶಕ ಚೆಯ್ಯಂಡ ಸತ್ಯ, ಕಂಬೀರಂಡ ರಾಕಿ ಪೂವಣ್ಣ ಉಪಸ್ಥಿತರಿದ್ದರು.

ಗ್ರಾಮ ಸಭೆ

ಗುಡ್ಡೆಹೊಸೂರು, ಮಾ.10– ಇಲ್ಲಿನ ಗ್ರಾಮ ಪಂಚಾಯಿತ್ತಿಯ 2022–23ನೇ ಸಾಲಿನ ಗ್ರಾಮ ಸಭೆಯು ಮಾ.14 ರಂದು ಬೆಳಗ್ಗೆ 10.30 ಗಂಟೆಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಎಸ್.ಎಸ್.ನಂದಿನಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ನೋಡಲ್ ಅಧಿಕಾರಿಯಾಗಿ ತೋಟಗಾರಿಕಾ ಇಲಾಖೆಯ ಅಧಿಕಾರಿ ಕಾವ್ಯ ಮತ್ತು ಪಂಚಾಯ್ತಿ ಉಪಾಧ್ಯಕ್ಷರಾದ ಯಶೋಧ ಮತ್ತು ಸದಸ್ಯರು ಹಾಜರಿರುತ್ತಾರೆ. ಸಭೆಯು ಇಲ್ಲಿನ ಸಮುದಾಯ ಭವನದಲ್ಲಿ ನಡೆಯಲಿದೆ.

ಚಾ.ನಗರ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಖಚಿತ : ಕೋಟೆ ಎಂ.ಶಿವಣ್ಣ ವಿಶ್ವಾಸ



ಚಾಮರಾಜನಗರ, ಮಾ.10– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಉತ್ತಮ ವಾತಾವರಣವಿದ್ದು, ಈ ಬಾರಿ ಬಿಜೆಪಿ ಗೆಲುವು ಖಚಿತವಾಗಿದೆ ಎಂದು ಕ್ಷೇತ್ರದ ಬಿಜೆಪಿ ಚುನಾವಣಾ ಪ್ರಭಾರಿ ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಶಂಕರೇಶ್ವರ ಬೆಟ್ಟದಲ್ಲಿ ಮಾದಾಪುರ ಬಿಜೆಪಿ ಮಹಾಶಕ್ತಿ ಕೇಂದ್ರ ವತಿಯಿಂದ ನಡೆದ ಪ್ರಣಾಳಿಕೆ ಸಲಹಾ ಸಮಿತಿ ಸಭೆಯಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ರಾಜ್ಯದಲ್ಲಿ, ಜಿಲ್ಲೆಯಲ್ಲೂ ಬಿಜೆಪಿಗೆ ಉತ್ತಮ ವಾತಾವರಣವಿದ್ದು, ಚಾಮರಾಜನಗರ ಕ್ಷೇತ್ರದಲ್ಲಿ ಕಮಲ ಅರಳಲು ಉತ್ತಮ ಅವಕಾಶ ಒದಗಿ ಬಂದಿದೆ ಎಂದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಆಕಾಂಕ್ಷಿಗಳ ವರದಿಯನ್ನು ಪ್ರಾಮಾಣಿಕವಾಗಿ ಪಕ್ಷದ ವರಿಷ್ಠರಿಗೆ ಕಳುಹಿಸಿಕೊಡಲಾಗುವುದು. ಟಿಕೆಟ್ ಕೊಡುವುದು ವರಿಷ್ಠರಿಗೆ ಬಿಟ್ಟದು. ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿ ನಾವೆಲ್ಲರೂ ಕ್ಷೇತ್ರದಲ್ಲಿ ಹಗಲಿರುಳು ಶ್ರಮಿಸಿ ಪಕ್ಷವನ್ನು ಗೆಲ್ಲಿಸೋಣ ಎಂದರು.

ಕೇಂದ್ರ, ರಾಜ್ಯ ಸರ್ಕಾರದ ಯೋಜನೆಗಳನ್ನು ಕ್ಷೇತ್ರದಲ್ಲಿ ಮನೆಮನೆಗೂ ತಲುಪಿಸುವ ಮೂಲಕ ಪಕ್ಷದ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದೆ ಎಂದರು.

ಮಾದಾಪುರ ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಎಂ.ಕುಮಾರಸ್ವಾಮಿ ಭೋಗಾಪುರ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷ ಜಿ.ನಿಜಗುಣ ರಾಜು, ಡಾ. ಎ.ಆರ್.ಬಾಬು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಮುಖಂಡ ಅಮ್ಮನಪುರ ಮಲ್ಲೇಶ್, ನೂರೊಂದುಶೆಟ್ಟಿ, ಜಿ.ಪಂ.ಮಾಜಿ ಸದಸ್ಯ ಬಾಲರಾಜ್, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ಮಾದಾಪುರ ಬಿಜೆಪಿ ಮಹಾಶಕ್ತಿ ಕೇಂದ್ರ ಕಾರ್ಯದರ್ಶಿ ದೇವರಾಜ್, ಮಂಗಲ ಶಕ್ತಿ ಕೇಂದ್ರ ಅಧ್ಯಕ್ಷ ನಾಗಶೆಟ್ಟಿ, ಆಲೂರುಮಲ್ಲು, ಬಸವನಪುರ ರಾಜಶೇಖರ್ ಇತರರು ಭಾಗವಹಿಸಿದ್ದರು.

ಸಾಮಾಜಿಕ ಬಹಿಷ್ಕಾರ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಮಾ.10– ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿ ಗ್ರಾಮದಲ್ಲಿ ಅಂತರ್ಜಾತಿ ವಿವಾಹಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವ ವ್ಯವಸ್ಥೆ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ಸೇರಿದಂತೆ ಇತರೆ ಸಂಘಟನೆಗಳು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿ ಗ್ರಾಮದ ಯುವಕ ಹಾಗೂ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಹೂವಿನ ಕೊಪ್ಪಲು ಗ್ರಾಮದ ಯುವತಿ 2018ರಲ್ಲಿ ಕಾನೂನು ಬದ್ಧವಾಗಿ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಅಂತರ್ಜಾತಿ ಮದುವೆಯಾಗಿ ಊರಿಗೆ ಬಂದ ಯುವಕನಿಗೆ ಗ್ರಾಮದ ಯಜಮಾನರು 1.25 ಲಕ್ಷ ರೂ. ದಂಡ ವಿಧಿಸಿ ಸಾಮಾಜಿಕ ಬಹಿಷ್ಕಾರ ಹಾಕಿದ್ದರು ಎಂದು ಪ್ರತಿಭಟನಾಕಾರರು ದೂರಿದರು.

ಇದಕ್ಕೆ ಹೆದರಿದ ಯುವಕ ದಂಡ ಪಾವತಿಸಿದ ನಂತರ ಮನೆಯವರಿಗಾದರೂ ಏನೂ ತೊಂದರೆ ಮಾಡದಿರಲಿ ಎಂದು ಊರು ತೊರೆದು ಹೆಂಡತಿಯ ತವರು ಮನೆಯಲ್ಲೇ ವಾಸವಾಗಿದ್ದರು. ಇತ್ತೀಚೆಗೆ ತಮ್ಮ ತಾಯಿಗೆ ಆರೋಗ್ಯ ಸರಿಯಿಲ್ಲ ಎಂದು ನೋಡಲು ತನ್ನ ಹೆಂಡತಿ, ಮಕ್ಕಳೊಡನೆ ಯುವಕ ಕುಣಗಳ್ಳಿಗೆ ಬಂದಾಗ ಅದನ್ನು ಗಮನಿಸಿದ ಗ್ರಾಮದ ಕೆಲವು ಮುಖಂಡರು ಆತನ ತಂದೆಯನ್ನು ನ್ಯಾಯ ಪಂಚಾಯಿತಿಗೆ ಕರೆಸಿ ಮೂರು ಲಕ್ಷ ದಂಡ ವಿಧಿಸಿ ಸಾಮಾಜಿಕ ಬಹಿಷ್ಕಾರ ಹಾಕಿರುತ್ತಾರೆ. ಮಾ.1ರೊಳಗೆ ದಂಡ ಪಾವತಿಸದಿದ್ದರೆ ದಂಡವನ್ನು ಆರು ಲಕ್ಷ ರೂ.ಗಳಿಗೆ ಹೆಚ್ಚಿಸುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಆದ್ದರಿಂದ ಪ್ರಕರಣದಲ್ಲಿ ಭಾಗಿಯಾದ ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. 2018ರಲ್ಲಿ ವಸೂಲಿ ಮಾಡಿರುವ 1.25 ಲಕ್ಷ ರೂ. ದಂಡದ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಡಬೇಕು. ಅಂತರ್ಜಾತಿ ಮದುವೆಯಾಗಿರುವ ಯುವಕನ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕು. 10 ಲಕ್ಷ ರೂ. ಪರಿಹಾರ ನೀಡಬೇಕು. ಸರ್ಕಾರಿ ಉದ್ಯೋಗ ಖಾತ್ರಿಪಡಿಸಬೇಕು. ಜಿಲ್ಲೆಯಲ್ಲಿ ಸಂವಿಧಾನ ಬಾಹಿರವಾಗಿ ಕೆಲಸ ಮಾಡುತ್ತಿರುವ ಪಾಳೇಗಾರಿಕೆ ನ್ಯಾಯ ಪಂಚಾಯಿತಿಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂತ್ರಸ್ತ ದಂಪತಿ ಸೇರಿದಂತೆ ಸಮಿತಿಯ ಟಿ.ಎಲ್. ಕೃಷ್ಣೇಗೌಡ, ಜಗದೀಶ್, ಸೂರ್ಯ, ಆರ್. ಕೃಷ್ಣ ಅಂಬೂಜಿ, ಬೆಳತ್ತೂರು ವೆಂಕಟೇಶ್, ಕೆ.ಎಸ್. ಶಿವಲಿಂಗಯ್ಯ, ವಿಜೇಂದ್ರಕುಮಾರ್, ಭಾನುಪ್ರಕಾಶ್, ಮಲ್ಲಿಕಾರ್ಜುನಸ್ವಾಮಿ, ಶಂಕರ್, ಜನವಾದಿ ಮಹಿಳಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಪದಾಧಿಕಾರಿಗಳಾದ ಲತಾ, ಸುಶೀಲಾ, ಭರತ್‌ರಾಜ್, ಲಿಂಗರಾಜಮೂರ್ತಿ ಸೇರಿದಂತೆ ಇತರರು ಹಾಜರಿದ್ದರು.

ರಾಜಕೀಯ ಪಕ್ಷಗಳಿಂದ ಜಾತಿ ರಾಜಕಾರಣ

ವಾಟಾಳ್ ನಾಗರಾಜ್ ಆರೋಪ



ಚಾಮರಾಜನಗರ, ಮಾ.10– ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಜಾತಿ, ಹಣದ ಆಧಾರದ ಮೇಲೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್‌ನಾಗರಾಜ್ ಆರೋಪಿಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಅವರು ಈಡುಗಾಯಿ ಒಡೆಯುವ ಮೂಲಕ ಕನ್ನಡ ಉಳಿಸಿ, ಕನ್ನಡ ಬೆಳಸಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. 2023 ಚುನಾವಣೆಯನ್ನು ಕರ್ನಾಟಕ ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಬೇಕು. ಚುನಾವಣೆಯಲ್ಲಿ ಬಹಿರಂಗವಾಗಿ ಜನರಿಗೆ ದುಡ್ಡು ಹಂಚುತ್ತಿದ್ದಾರೆ. ಟಿವಿ, ಕುಕ್ಕರ್, ಕುರಿ ಕೊಡಲಾಗುತ್ತಿದೆ. ಮತದಾರರು ಬದಲಾವಣೆ ಆಗಿಲ್ಲ. ರಾಜಕಾರಣಿಗಳು ಬದಲಾಗಿಲ್ಲ. ಚುನಾವಣಾ ಆಯೋಗ ಪ್ರಾಮಾಣಿಕವಾಗಿ ಕರ್ನಾಟಕದ ಮೂಲೆಮೂಲೆಗೂ ಕಣ್ಣಿಡಬೇಕು ಎಂದರು.

ಭ್ರಷ್ಟಾಚಾರ, ಜಾತಿ ರಹಿತ ಚುನಾವಣೆ ನಡೆದಾಗ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ. ಸಾಮಾನ್ಯ ಜನರು ಯಾರೂ ಕೂಡ ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲ. ಚುನಾವಣೆಗೆ ನಿಲ್ಲುವ ಪ್ರತಿಯೊಬ್ಬರೂ ಕನಿಷ್ಠ 50 ಕೋಟಿ ಖರ್ಚು ಮಾಡುವ ಸ್ಥಿತಿ ಇದೆ. ಚುನಾವಣೆಯಲ್ಲಿ ಜಾತಿ, ದ್ವೇಷ, ರೌಡಿಸಂ ಎಲ್ಲಾ ನಡೆಯುತ್ತಿದೆ. ಭಾಷೆ ಹೆಸರಿನಲ್ಲಿ ರಾಜಕಾರಣ ಇರಬೇಕು. ಆದರೆ ಜಾತಿ ರಾಜಕಾರಣವಾಗುತ್ತಿದೆ. ಇದು ಸರಿಯಲ್ಲ ಎಂದರು.

ಗಮನ ಸೆಳೆದ ವಾಟಾಳರ ಸಾರೋಟು ಮೆರವಣಿಗೆ: ಸಾರೋಟಿನಲ್ಲಿ ವಾಟಾಳ್ ನಾಗರಾಜ್ ಅವರನ್ನು ಮೆರವಣಿಗೆ ಮಾಡಲಾಯಿತು. ಕನ್ನಡ ಉಳಿಸಿ, ಕನ್ನಡ ಬೆಳಸಿ ಅಭಿಯಾನವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತ್ತು.

ಈ ಸಂದರ್ಭದಲ್ಲಿ ಚಾ.ರಂ.ಶ್ರೀನಿವಾಸಗೌಡ, ನಿಜಧ್ವನಿ ಗೋವಿಂದರಾಜು, ಚಾ.ರಾ. ಕುಮಾರ್, ಗೋಪಾಲ್ ನಾಯಕ, ಶಿವಲಿಂಗಮೂರ್ತಿ, ಪಣ್ಯದಹುಂಡಿ ರಾಜು, ವರದನಾಯಕ, ಬಸಪ್ಪನಪಾಳ್ಯ ಕುಮಾರ್ ಇತರರು ಹಾಜರಿದ್ದರು.

ಮಾ.16ರಂದು ಗುಂಡ್ಲುಪೇಟೆಯಲ್ಲಿ ಉದ್ಯೋಗ ಮೇಳ



ಗುಂಡ್ಲುಪೇಟೆ, ಮಾ.10– ದಿವಂಗತ ಮಾಜಿ ಸಚಿವ ಹೆಚ್.ಎಸ್. ಮಹದೇವಪ್ರಸಾದ್ ಟ್ರಸ್ಟ್ ಮತ್ತು ಅಕ್ಷರ ಫೌಂಡೇಷನ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಕಾರ ಮತ್ತು ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ನೇತೃತ್ವದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಈ ಕುರಿತು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಭಿತ್ತಿಪತ್ರವನ್ನು ಬಿಡುಗಡೆಗೊಳಿಸಿದ ಹೆಚ್.ಎಂ. ಗಣೇಶ್‌ಪ್ರಸಾದ್ ಮಾತನಾಡಿ, ಮಾ.16ರಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆಯವರೆಗೆ ಪಟ್ಟಣದ ಊಟಿರಸ್ತೆ ಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಎದುರು ಗಡೆಯ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಈ ಮೇಳದಲ್ಲಿ ದೇಶದ ಪ್ರತಿಷ್ಠಿತ 80ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿ ಅರ್ಹರಿಗೆ ಸ್ಥಳದಲ್ಲೇ ನೇಮಕಾತಿಯನ್ನು ಮಾಡಿಕೊಳ್ಳುತ್ತದೆ. ಕ್ಷೇತ್ರದ ನಿರುದ್ಯೋಗಿ ಯುವಕ–ಯುವತಿಯರಿಗೆ ಇದೊಂದು ಸುವರ್ಣ ಅವಕಾಶವಾಗಿದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ.ರಾಜಶೇಖರ್ ಮತ್ತು ಬಿ.ಎಂ.ಮುನಿರಾಜು, ಪುರಸಭೆ ಸದಸ್ಯ ಅಲ್ಲಾಹು, ಮುಖಂಡರಾದ ಗುರು, ಕುಮಾರ್, ಸುರೇಶ್ ಕಾರ್ಗಳ್ಳಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ರಾಷ್ಟ್ರೀಯ ಪಕ್ಷಗಳು ಚಾ.ನಗರ ಕ್ಷೇತ್ರದಲ್ಲಿ ಎಸ್‌ಸಿ, ಎಸ್‌ಟಿ ಮುಖಂಡರಿಗೆ ಟಿಕೆಟ್ ನೀಡಲು ಆಗ್ರಹ



ಚಾಮರಾಜನಗರ, ಮಾ.10– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳು ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಎಸ್‌ಸಿ ಅಥವಾ ಎಸ್‌ಟಿ ಮುಖಂಡರಿಗೆ ಟಿಕೆಟ್ ನೀಡಬೇಕು ಎಂದು ಜನ ಹಿತಾಶಕ್ತಿ ಹೋರಾಟ ವೇದಿಕೆಯ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರ ಅತಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮತದಾರರನ್ನು ಹೊಂದಿದ್ದು, ದಲಿತ ಸಮುದಾಯದ ಮತದಾರರೇ ನಿರ್ಣಾಯಕವಾಗಿರುವುದರಿಂದ ದಲಿತರ ಅಭಿವೃದ್ಧಿ ಹಿತದೃಷ್ಟಿ, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಮುಖಂಡರಿಗೆ ರಾಷ್ಟ್ರೀಯ ಪಕ್ಷಗಳು ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲೂ ಬೇರೆ ಜಿಲ್ಲೆಗಳ ಆಕಾಂಕ್ಷಿಗಳ ಹಾವಳಿ ಹೆಚ್ಚಾಗಿದೆ. ಮತದಾರರಿಗೆ ಇಲ್ಲದ ಸಲ್ಲದ ಆಮಿಷಗಳನ್ನು ಒಡ್ಡುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿದ್ದು, ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ರಾಜಕೀಯ ಕ್ಷೇತ್ರವು ಇತ್ತೀಚೆಗೆ ವ್ಯಾಪಾರೀಕರಣವಾಗುತ್ತಿದೆ. ಇದರಿಂದ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿಯಾಗುತ್ತಿಲ್ಲ ಎಂದರು.

ಕ್ಷೇತ್ರಗಳಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸುವ ಸ್ಥಳೀಯ ಮುಖಂಡರಿಗೆ ಟಿಕೆಟ್ ಕೊಡುವ ಮೂಲಕ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀಮಹರ್ಷಿ ವಾಲ್ಮೀಕಿ ನಾಯಕರ ಮಹಾವೇದಿಕೆ ಜಿಲ್ಲಾಧ್ಯಕ್ಷ ಪುರಿಮೂರ್ತಿ, ನಿಜಧ್ವನಿ ಗೋವಿಂದರಾಜು, ಬಿಸಲವಾಡಿ ಪಾಪಣ್ಣ, ಹರದನಹಳ್ಳಿ ಸಂತೋಷ್‌ಕುಮಾರ್, ಮೂರ್ತಿ, ಲಕ್ಷ್ಮಣನಾಯಕ ಹಾಜರಿದ್ದರು.

ಮಾ.15, ಪಿಂಚಣಿ ಅದಾಲತ್

ಚಾಮರಾಜನಗರ, ಮಾ.10– ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಪಿಂಚಣಿದಾರರ ಕುಂದು ಕೊರತೆ ಅಹವಾಲು ಆಲಿಸಲು ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ 15 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮೈಸೂರಿನ ಜಿಲ್ಲಾಡಳಿತ ಕಾರ್ಯಾಲಯದ ಕಾನ್ಫರೆನ್ಸ್ ಹಾಲ್‌ನಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ.

ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆಯ ಹೆಚ್ಚುವರಿ ನಿರ್ದೇಶಕ ಡಾ.ವಿ ಭಾಗ್ಯಲಕ್ಷ್ಮಿ, ಡೆಪ್ಯೂಟಿ ಅಕೌಂಟೆಂಟ್ ಜನರಲ್ ಪ್ರಿನ್ಸ್ ವರ್ಗೀಸ್, ಸಿಪಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಮೂರು ಜಿಲ್ಲೆಗಳ ಖಜಾನಾಧಿಕಾರಿಗಳು ಭಾಗವಹಿಸುವರು. ಚಾಮರಾಜನಗರ ಜಿಲ್ಲೆಯ ಪಿಂಚಣಿದಾರರು ಅದಾಲತ್‌ನ ಕಾರ್ಯಕ್ರಮವನ್ನು ಸದುಪಯೋಗ ಮಾಡಿಕೊಳ್ಳುವಂತೆ ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆಯ ಹೆಚ್ಚುವರಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಪ್ರತಿಯೊಬ್ಬರಿಗೂ 'ಮತ'ದ ಮಹತ್ವ ಮನವರಿಕೆ ಮಾಡಿಕೊಡಿ

● ತಂತ್ರಜ್ಞಾನ ಬಳಸಿಕೊಂಡು ಅಧಿಕ ಮತದಾನ ಮಾಡಿಸುವುದು ನಮ್ಮ ಕರ್ತವ್ಯ ● ಮತದಾರರ ಸಾಕ್ಷರತಾ ಸಂಘಗಳ ತರಬೇತುದಾರರಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯತ್ರಿ ಸಲಹೆ



ಮೈಸೂರು, ಮಾ.10– ಚುನಾವಣಾ ಸಮಯದಲ್ಲಿ ವಿವಿಧ ರೀತಿಯ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು, ಪ್ರತಿಯೊಬ್ಬರಲ್ಲೂ ಅರಿವು ಮೂಡಿಸಿ ಮತದಾನ ಮಾಡಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮತದಾರರ ಸಾಕ್ಷರತಾ ಸಂಘಗಳ ತಾಲೂಕು ಮಟ್ಟದ ತರಬೇತುದಾರರ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಮತದಾರರನ್ನು ಮತದಾನದಲ್ಲಿ ಭಾಗಿಯಾಗುವಂತೆ ಮಾಡಬೇಕು. ತಾಲೂಕು ಮಟ್ಟದಲ್ಲಿ ಪ್ರತಿಯೊಬ್ಬ ಶಿಕ್ಷಕರ ಪಾತ್ರವು ಪ್ರಮುಖವಾಗಿದೆ. ಶಾಲಾ ಮಟ್ಟದಲ್ಲಿ ಚುನಾವಣೆಯ ಬಗ್ಗೆ ಅರಿವನ್ನು ಮೂಡಿಸಬೇಕು. ಯಾರೊಬ್ಬರು ಮತದಾನವನ್ನು ಮಾಡದೇ ಉದಾಸೀನತೆಯಿಂದ ನಡೆದುಕೊಳ್ಳದ ರೀತಿ ಅವರಲ್ಲಿ ಅರಿವು ಮೂಡಿಸುವುದು ನಮ್ಮ ಕರ್ತವ್ಯ ಎಂದರು.

ಈ ವರ್ಷ ಚುನಾವಣಾ ಹಬ್ಬವನ್ನು ಆಚರಿಸುತ್ತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಮಹತ್ವವಾದದ್ದು. ಚುನಾವಣೆ ಎಂಬುದು ಹೊಸದಲ್ಲ. ಆದರೆ ಚುನಾವಣೆ ಸಂಬಂಧಿತ ಅನುಭವಗಳು ಹೊಸದು. ಚುನಾವಣೆ ಕುರಿತ ತರಬೇತಿ ಎಂಬುದು ಅತ್ಯವಶ್ಯಕ. ತರಬೇತಿಯಲ್ಲಿ ತಮ್ಮ ಚುನಾವಣಾ ಅನುಭವ ಹಂಚಿಕೊಂಡು ಗೊಂದಲಗಳನ್ನು ನಿವಾರಿಸಿಕೊಳ್ಳಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಪಾತ್ರ ಪ್ರಮುಖವಾದುದು ಎಂದರು. ಚುನಾವಣಾ ಸಂದರ್ಭದಲ್ಲಿ ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಿ, ಮತದಾನದಲ್ಲಿ ಸಕ್ರಿಯವಾಗಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಬೇಕು ಎಂಬುದು ನಮ್ಮ ಧ್ಯೇಯವಾಗಿದೆ. ಚುನಾವಣಾ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಮತದ ಪ್ರಾಮುಖ್ಯತೆಯನ್ನು ತಿಳಿಸಿ ನೈತಿಕವಾಗಿ ಮತದಾನ ಮಾಡುವಂತೆ ತಿಳಿಸಬೇಕು ಎಂದು ತಿಳಿಸಿದರು.

ಚುನಾವಣೆ ಬೇಸಿಗೆ ಸಮಯದಲ್ಲಿ ನಡೆಯುತ್ತಿದೆ. ಯಾರೊಬ್ಬರೂ ಮತದಾನ ಮಾಡುವಲ್ಲಿ ಅಸಡ್ಡೆ ಮಾಡಬಾರದು. ನನ್ನ ಒಂದು ಮತದಾನದಿಂದ ಯಾವುದೇ ಬದಲಾವಣೆ ಸಾಧ್ಯವಿಲ್ಲ ಎಂಬ ನಕಾರಾತ್ಮಕ ಮನೋಭಾವನೆ ಇಟ್ಟುಕೊಳ್ಳಬಾರದು. ಪ್ರತಿಯೊಂದು ಮತವು ಅಮೂಲ್ಯವಾದದ್ದು ಎಂದರು. 18 ವರ್ಷ ಮೇಲ್ಪಟ್ಟ ಮತದಾರರು, ವಯಸ್ಕ ಪೋಷಕರು ಹಾಗೂ ಪೌರಕಾರ್ಮಿಕರಲ್ಲಿಯೂ ಕೂಡ ಮತದಾನದ ಅರಿವನ್ನು ಮೂಡಿಸಿ ಹೆಚ್ಚಿನ ಮತದಾನ ಮಾಡಿಸಬೇಕು. ನಗರ ಪ್ರದೇಶ, ಗ್ರಾಮೀಣ ವಿಭಾಗ ಹಾಗೂ ಬುಡಕಟ್ಟು ಜನಾಂಗಳಲ್ಲಿ ಕಡಿಮೆ ಮತದಾನ ಕಳೆದ ಚುನಾವಣಾ ಸಂದರ್ಭದಲ್ಲಿ ನಡೆದಿದೆ. ಈ ಬಾರಿ ಪ್ರತಿಯೊಂದು ಪ್ರದೇಶಗಳಿಂದಲೂ ಹೆಚ್ಚಿನ ಮತದಾನ ಮಾಡಿಸಬೇಕು. ಹೆಚ್ಚಾಗಿ ಬುಡಕಟ್ಟು ಜನಾಂಗಗಳಲ್ಲಿ ಮತದಾನದ ಅರಿವು ಮೂಡಿಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ. ನಗರ ವಿಭಾಗಗಳಲ್ಲಿ ವಿವಿಧ ರೀತಿಯ ಕಾರ್ಯಾಗಾರವನ್ನು ನಡೆಸಿ ಚುನಾವಣೆಯ ಅರಿವನ್ನು ಮೂಡಿಸಬೇಕು ಎಂದು ಸೂಚಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಮಾತನಾಡಿ, 18 ವರ್ಷ ತುಂಬಿದ ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಪ್ರತಿ ಕಾಲೇಜು ಹಂತದಲ್ಲಿ ಮತದಾರರ ಸಾಕ್ಷರತಾ ಸಂಘಗಳನ್ನು ಸ್ಥಾಪಿಸಿ ಅರಿವು ಮೂಡಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿಯೂ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳಬಹುದು. ಮತದಾರರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದರು.

ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ವಿಶ್ವನಾಥ್, ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ ಮತ್ತು ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಮಾಸ್ಟರ್ ತರಬೇತಿದಾರ ಮಹದೇವಯ್ಯ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ತಾಲೂಕುಗಳ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಮಾ.16, ಪೊಲೀಸ್ ತರಬೇತಿ ಶಾಲೆಯಲ್ಲಿ ನಿರ್ಗಮನ ಪಥ ಸಂಚಲನ

ಮೈಸೂರು,ಮಾ.10– ಮೈಸೂರಿನ ಪೊಲೀಸ್ ತರಬೇತಿ ಶಾಲೆಯ 8ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್, ರೈಲ್ವೇಸ್ ಮತ್ತು ಕೆಎಸ್‌ಐಎಸ್‌ಎಫ್ ಪ್ರಶಿಕ್ಷಣಾರ್ಥಿಗಳು ಹಾಗೂ ಮೈಸೂರು ನಗರ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 4ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಮಾ.16 ರಂದು ಬೆಳಗ್ಗೆ 8 ಗಂಟೆಗೆ ಮೈಸೂರು ಜ್ಯೋತಿನಗರದ ಡಿಎಆರ್ ಕವಾಯಿತು ಮೈದಾನದಲ್ಲಿ ನಡೆಲಿದ್ದು, ಬೆಂಗಳೂರು ತರಬೇತಿ ವಿಭಾಗ ಐಜಿಪಿ ಡಾ.ಪಿ.ರವೀಂದ್ರನಾಥ್ ಪಥಸಂಚಲನ ಪರಿವೀಕ್ಷಣೆ ಮತ್ತು ಬಹುಮಾನ ವಿತರಣೆ ಮಾಡಲಿದ್ದು, ಇತರೆ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿರುತ್ತಾರೆ.

ಅಗ್ನಿಹೋತ್ರ ಹೋಮ

ಮೈಸೂರು, ಮಾ.10–ವಿಶ್ವ ಅಗ್ನಿಹೋತ್ರ ದಿನಾಚರಣೆ ಅಂಗವಾಗಿ ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಧ್ಯಾನಧಾಮ ಮತ್ತು ಸನಾತನ ಸಂಸ್ಥೆ ವತಿಯಿಂದ ನಗರದ ರಾಮಕೃಷ್ಣನಗರದಲ್ಲಿರುವ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಮಾ.12ರ ಸಂಜೆ 6 ಗಂಟೆಗೆ ಅಗ್ನಿಹೋತ್ರ ಹೋಮ, ಸೈಂಟಿಫಿಕ್ ಮೆಡಿಟೇಷನ್ ಮತ್ತು ಅಂತರ್‌ದೃಷ್ಟಿ ಮಹತ್ವ ಹಾಗೂ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.20, ಯುವ ಉತ್ಸವ: ವಿವಿಧ ಸ್ಪರ್ಧೆಗಳು

ಮೈಸೂರು,ಮಾ.10–ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಜಿಲ್ಲಾ ನೆಹರು ಯುವ ಕೇಂದ್ರವು ಮಾ.20 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ವರೆಗೆ ಜಿಲ್ಲಾಮಟ್ಟದ ಯುವ ಉತ್ಸವ ಕಾರ್ಯಕ್ರಮವನ್ನು ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಹಮ್ಮಿಕೊಂಡಿದೆ.

ಭಾರತದ 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಜೊತೆಗೆ ಇಂಡಿಯಾ@2047 ಸಂಕಲ್ಪದೊಂದಿಗೆ ಪಂಚಪ್ರಾಣ್ ಮಂತ್ರದೊಡನೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, 15 ರಿಂದ 29 ವರ್ಷದೊಳಗಿನ ಯುವ ಜನರಿಗೆ ಯುವ ಬರಹಗಾರರ ಸ್ಪರ್ಧೆ – ಕವನ, ಯುವ ಕಲಾವಿದರ ಸ್ಪರ್ಧೆ – ಚಿತ್ರಕಲೆ, ಛಾಯಾಗ್ರಹಣ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ಜಿಲ್ಲಾ ಸಾಂಸ್ಕೃತಿಕ ಉತ್ಸವ (ಗುಂಪು ಕಾರ್ಯಕ್ರಮ) ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೀನಾ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ಟಿಬೆಟಿಯನ್ನರು ಧರಣಿ

ಮೈಸೂರು,ಮಾ.10(ಎಂಟಿವೈ)– ಟಿಬೆಟಿಯನ್ನರ ಮೇಲೆ ದೌರ್ಜನ್ಯ ನಡೆಸಿಕೊಂಡು ಹಾಕುತ್ತಿರುವ ಚೀನಾ ನಡೆ ಖಂಡಿಸಿ ಮೈಸೂರಲ್ಲಿ ಟಿಬೆಟಿಯನ್ನರು ಕರಾಳ ದಿನವನ್ನಾಗಿ ಆಚರಿಸಿ, ಶಾಂತಿಯುತ ಮೆರವಣಿಗೆ ನಡೆಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಮೆರವಣಿಗೆ ಆರಂಭಿಸಿದ ಟಿಬೆಟಿಯನ್ನರು ದೊಡ್ಡಗಡಿಯಾರ, ಚಿಕ್ಕಗಡಿಯಾರ ವೃತ್ತ, ದೇವರಾಜ ಅರಸ್ ರಸ್ತೆ, ವಿನೋಬಾ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿ ಧರಣಿ ನಡೆಸಿದರು.

ಟಿಬೆಟಿಯನ್ ವುಮೆನ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಟಿಬೆಟಿಯನ್ನರು ಚೀನಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚೀನಾ 1959ರ ಮಾ.10ರಂದು ಲಕ್ಷಾಂತರ ಟಿಬೆಟಿಯನ್ನರನ್ನು ಕೊಂದ ದಿನವಾಗಿದೆ. ಈ ದಿನವನ್ನು ಟಿಬೆಟಿಯನ್ನರು ರಾಷ್ಟ್ರೀಯ ಬಂಡಾಯ ದಿನವಾಗಿ ಆಚರಿಸುತ್ತಾರೆ. ಚೀನಾದ ಆಳ್ವಿಕೆಯಲ್ಲಿ ಟಿಬೆಟಿಯನ್ನರ ಮಾರಣ ಹೋಮ ನಡೆಸಲಾಗುತ್ತಿದೆ. ಚೀನೀಯರ ದಬ್ಬಾಳಿಕೆ, ಚಿತ್ರಹಿಂಸೆ, ಮಾನಸಿಕ ಕಿರುಕುಳಗಳಿಂದಾಗಿ 1.2 ಮಿಲಿಯನ್ ಟಿಬೆಟಿಯನ್ನರು ಪ್ರಾಣ ತ್ಯಾಗ ಮಾಡಿದ್ದಾರೆ. ಚೀನಾ ಟಿಬೆಟಿಯನ್ ಭಾಷೆ, ಸಂಸ್ಕೃತಿ, ಧರ್ಮ ಮತ್ತು ಗುರುತನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿದೆ. ಟಿಬೆಟಿಯನ್ ಮಕ್ಕಳು ಟಿಬೆಟ್ ಭಾಷೆ ಕಲಿಯುವುದನ್ನು ನಿಷೇಧಿಸಲಾಗಿದೆ. ಚೀನಾದ ಅನುಮತಿಯಿಲ್ಲದೆ ಮಠಗಳು ಶಿಷ್ಯರನ್ನು ಸೇರಿಸಿಕೊಳ್ಳಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

1959ರಿಂದ ಇಲ್ಲಿಯವರೆಗೆ ಚೀನೀಯರು ಟಿಬೆಟಿಯನ್ನರ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಭಾಷಾ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳ ಮೇಲೆ ನಿರಂತರ ದಬ್ಬಾಳಿಕೆ ಮಾಡುತ್ತಲೇ ಬಂದಿದ್ದಾರೆ. ಚೀನೀಯರ ಈ ಅಮಾನವೀಯ ಹಾಗೂ ಹೇಯ ಕೃತ್ಯಗಳಿಂದ 157 ಟಿಬೆಟಿಯನ್ನರು ದೇಶಕ್ಕಾಗಿ ಪ್ರಾಣ ತೆತ್ತಿದ್ದಾರೆ. ದಲೈಲಾಮಾ ಅವರು ಟಿಬೆಟ್ ಸಮಸ್ಯೆಗೆ ತೋರಿದ ಅತ್ಯಂತ ಸಮಂಜಸವಾದ ಮಧ್ಯ ಮಾರ್ಗ ಪರಿಹಾರವನ್ನು ಚೀನಾ ಸರ್ಕಾರ ಒಪ್ಪಿಕೊಳ್ಳಬೇಕು. ಕೇಂದ್ರೀಯ ಟಿಬೆಟಿಯನ್ ಆಡಳಿತದೊಂದಿಗೆ ಮಾತುಕತೆಗೆ ಮುಂದಾಗಬೇಕು. ಪಂಚೆನ್ ಲಾಮಾ ಹಾಗೂ ಇತರೆ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು. ಟಿಬೆಟಿಯನ್ನರ ಧಾರ್ಮಿಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಭಾಷಾ ಭಾವನೆಗಳನ್ನು ಗೌರವಿಸಬೇಕೆಂದು ಒತ್ತಾಯಿಸಿದರು. ಬಳಿಕ ತಹಸೀಲ್ದಾರ್ ಶಿವಪ್ರಸಾದ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಟಿಬೆಟಿಯನ್ ಮಹಿಳಾ ಸಂಘದ ಅಧ್ಯಕ್ಷೆ ಟಿಮ್ಲಿಂಗ್, ಮುಖಂಡರಾದ ಚೆಮಿಲಾಮೊ, ತ್ಸೆರಿಂಗ್ ಲಾಕ್ಯಪ್ ಜನ್‌ಯೀಲ್, ತ್ಸೆರಿಂಗ್ ಚೊಡನ್, ತ್ಸೆರಿಂಗ್ ದೋರ್ಜೆ ಚಂಗ್, ತಮ್‌ಡಿನ್ ತ್ಸೆವಾಂಗ್ ಸೇರಿದಂತೆ ನೂರಾರು ಮಂದಿ ಟಿಬೆಟಿಯನ್ನರು ಪಾಲ್ಗೊಂಡಿದ್ದರು.

ಮಾ.15 ರಂದು ಪಿಂಚಣಿ ಅದಾಲತ್

ಮೈಸೂರು, ಮಾ.10– ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಪಿಂಚಣಿದಾರರ ಕುಂದುಕೊರತೆ ಮತ್ತು ಅಹವಾಲುಗಳಿಗೆ ಸಂಬಂಧಿಸಿದಂತೆ ಮಾ.15 ರಂದು ಪಿಂಚಣಿ ಅದಾಲತ್ ಅನ್ನು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ವರೆಗೆ ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಪಿಂಚಣಿದಾರರು ಪಿಂಚಣಿ ಅದಾಲತ್‌ಗೆ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆಯ ಅಪರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ತಪಾಸಣಾ, ಚಿಕಿತ್ಸಾ ಶಿಬಿರ

ಮೈಸೂರು, ಮಾ.10– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಆಯುರ್ವೇದ ಸಂಹಿತ ಮತ್ತು ಸಿದ್ಧಾಂತ ವಿಭಾಗದಲ್ಲಿ (ರೂಮ್ ನಂಬರ್–10) ಮಾ.13 ರಿಂದ 18 ರವರೆಗೆ ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ "ಹೃದಯ ಸಂಬಂಧಿ ಖಾಯಿಲೆಗಳಾದ ಪಾರ್ಶ್ವ ವಾಯು (Paralysis) ಮತ್ತು ರಕ್ತ ಹೆಪ್ಪುಗಟ್ಟುವಿಕೆ (Vericos Veins)" ಈ ಎಲ್ಲಾ ತೊಂದರೆಗಳಿಗೆ ತಪಾಸಣಾ ಮತ್ತು ಉಚಿತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯಾದ ಡಾ.ಸುಷ್ಮಾ ಬಿ.ಎನ್ (7619232301) ಅವರನ್ನು ಬೆಳಗ್ಗೆ 9 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣ ಸಂಗ್ರಹಿಸಿ ಮನೆ ನೀಡದೆ ವಂಚನೆ ಆರೋಪ: ಪ್ರಜಾ ಪಾರ್ಟಿ ಪ್ರತಿಭಟನೆ



ಮೈಸೂರು,ಮಾ.10(ಎಂಟಿವೈ)– ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಮನೆ ಮಂಜೂರು ಮಾಡುವುದಾಗಿ ತಲಾ 10 ಸಾವಿರ ರೂ. ಹಣ ಸಂಗ್ರಹಿಸಿ ಮನೆ ನೀಡದೆ ವಂಚಿಸಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರು ಮಹಾನಗರ ಪಾಲಿಕೆ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಪ್ರಜಾ ಪಾರ್ಟಿ ಕಾರ್ಯಕರ್ತರು ಕೆ.ಆರ್.ಕ್ಷೇತ್ರದಲ್ಲಿ 850 ಫಲಾನುಭವಿಗಳಿಂದ ಮನೆ ಮಂಜೂರು ಮಾಡಿಸಿಕೊಡುವುದಾಗಿ ತಲಾ 10 ಸಾವಿರ ರೂ. ಸಂಗ್ರಹಿಸಲಾಗಿದೆ. ಆದರೆ, ಇದುವರೆಗೂ ಮನೆ ನೀಡದೆ ಫಲಾನುಭವಿಗಳಿಗೆ ತೊಂದರೆ ನೀಡಲಾಗುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿಯ ರಾಜ್ಯಾಧ್ಯಕ್ಷ ಡಾ. ಶಿವಣ್ಣ, ಕೆಆರ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ತೇಜಸ್ವಿ ನಾಗಲಿಂಗಸ್ವಾಮಿ, ಯುವ ಘಟಕದ ಅಧ್ಯಕ್ಷ ರವಿಶಂಕರೇಗೌಡ, ಜಂಟಿ ಕಾರ್ಯದರ್ಶಿ ಬಿ.ಆರ್. ಲೋಕೇಶ್, ಭಾಗ್ಯಮ್ಮ, ಗುರುದತ್, ಶಿಲ್ಪ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಜೋಸೆಫ್ ಸ್ಟೀಫನ್, ಹೋಬಳಿಯ ಅಧ್ಯಕ್ಷ ಬೋರೇಗೌಡ, ಶೈಲೇಶ್ ಮತ್ತು ಮಂಜುನಾಥ್ ಪಾಲ್ಗೊಂಡಿದ್ದರು.

ಪುನೀತ್‌ರಾಜ್‌ಕುಮಾರ್ ಸ್ಮರಣಾರ್ಥ ನಾಳೆ ರಕ್ತದಾನ ಶಿಬಿರ



ಮೈಸೂರು,ಮಾ.10(ಪಿಎಂ)– ಒಂಟಿಕೊಪ್ಪಲ್ ಮತ್ತು ಗೋಕುಲಂ ಸ್ನೇಹಿತರ ಬಳಗ, ಜೀವಧಾರ ಬ್ಲಡ್ ಬ್ಯಾಂಕ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಮಾ.12ರಂದು ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರದ ಆಯೋಜಕ ಕೆ.ಕಾರ್ತಿಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂಟಿಕೊಪ್ಪಲಿನ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಶಿಬಿರ ನಡೆಯಲಿದ್ದು, ಅಂದು ಬೆಳಗ್ಗೆ 9ಕ್ಕೆ ಶಿಬಿರಕ್ಕೆ ಚಾಲನೆ ದೊರೆಯಲಿದೆ. ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್ ಸೇರಿದಂತೆ ಮತ್ತಿತರ ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಚಿತ್ರ ನಟರಾದ ಚಿಕ್ಕಣ್ಣ, ಧೀರೇನ್ ರಾಮ್‌ಕುಮಾರ್, ಗರುಡ ರಾಮ್ ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದಾರೆ. ರಕ್ತದಾನ ಮಾಡಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ ಮೊ.ಸಂ. 8123089837 ಅಥವಾ 9535371537 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಜೀವಧಾರ ಬ್ಲಡ್ ಬ್ಯಾಂಕ್‌ನ ಆಡಳಿತಾಧಿಕಾರಿ ರಶ್ಮಿ ಎನ್.ರಾಜ್, ತಾಂತ್ರಿಕ ಮೇಲ್ವಿಚಾರಕಿ ಮಮತಾ, ಬ್ಲಡ್ ಆನ್ ಕಾಲ್ ಕ್ಲಬ್‌ನ ಸಂಸ್ಥಾಪಕರಾದ ದೇವೇಂದ್ರ ಕುಮಾರ್, ಆನಂದ್ ಗೋಷ್ಠಿಯಲ್ಲಿದ್ದರು.

ನಾಳೆ ಮಹಿಳಾ ದಿನಾಚರಣೆ; ಸಾಧಕ ಮಹಿಳೆಯರಿಗೆ ಸನ್ಮಾನ



ಮೈಸೂರು,ಮಾ.10(ಪಿಎಂ)–ಫೋರಂ ಫಾರ್ ಹ್ಯೂಮನ್ ರೈಟ್ಸ್ ಅಂಡ್ ಆಂಟಿ ಕರಪ್ಷನ್ ಸಂಘಟನೆ ವತಿಯಿಂದ ಮಾ.12ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಘಟನೆಯ ರಾಜ್ಯಾಧ್ಯಕ್ಷ ಸಿ.ವಿ.ಶ್ರೀನಾಥ್‌ಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಹೈವೆ ವೃತ್ತದ ಸಮೀಪದ ಕುಮಾರ್ ದ ವೈಟ್‌ಹೌಸ್ ಹೋಟೆಲ್‌ನ ಸಭಾಂಗಣದಲ್ಲಿ ಅಂದು ಸಂಜೆ 5.30ಕ್ಕೆ ಸಮಾರಂಭ ನಡೆಯಲಿದೆ. ವಿವಿಧ ಕ್ಷೇತ್ರಗಳ 15 ಮಹಿಳಾ ಸಾಧಕರನ್ನು ಇದೇ ವೇಳೆ ಸನ್ಮಾನಿಸಲಾಗುವುದು. ಬಳಿಕ ಹಿರಿಯ ನಾಗರಿಕರಿಗೆ ಊರುಗೋಲು, ಅಂಗವಿಕಲರಿಗೆ ವಾಕರ್‌ಗಳನ್ನು ವಿತರಣೆ ಮಾಡಲಾಗುವುದು ಎಂದರು. ಸಂಘಟನೆಯ ಮೈಸೂರು ಪಶ್ಚಿಮ ವಲಯದ ಅಧ್ಯಕ್ಷ ಡಿ.ನರಸಿಂಹ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಡಾ.ಸುಜಾತ, ಪದಾಧಿಕಾರಿಗಳಾದ ಪ್ರವೀಣ್‌ಕುಮಾರ್, ಸುಮನ್, ಮಮತಾ ಗೋಷ್ಠಿಯಲ್ಲಿದ್ದರು.

ನಾಳೆ ಮಹಿಳಾ ದಿನಾಚರಣೆ, ಕಾನೂನು ಅರಿವು ಕಾರ್ಯಕ್ರಮ



ಮೈಸೂರು,ಮಾ.10(ಪಿಎಂ)–ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಮಾ.12ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಪುರಭವನದಲ್ಲಿ ಅಂದು ಬೆಳಗ್ಗೆ 11.30ಕ್ಕೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮೈಸೂರು ವಿಭಾಗದ ಎಸ್‌ಪಿ ಡಾ.ಬಿ.ಟಿ.ಕವಿತಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಲ ಅಧ್ಯಕ್ಷೆ ಜಿ.ಟಿ.ಲಲಿತಾ ಜಿ.ಟಿ.ದೇವೇಗೌಡ, ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿವಿಧ ಕ್ಷೇತ್ರದ 30ಕ್ಕೂ ಹೆಚ್ಚು ಮಹಿಳಾ ಸಾಧಕಿಯರನ್ನು ಇದೇ ವೇಳೆ ಸನ್ಮಾನಿಸಲಾಗುವುದು. ಬಳಿಕ ಮಹಿಳಾ ಹಕ್ಕುಗಳು ಹಾಗೂ ಮಹಿಳೆಯರಿಗೆ ದೊರೆಯುವ ಉಚಿತ ಕಾನೂನು ನೆರವಿನ ಬಗ್ಗೆ ವಕೀಲರಾದ ಆರ್.ಸರಸ್ವತಿ, ರುಕ್ಮಿಣಿ ರಾಮಕೃಷ್ಣ ಉಪನ್ಯಾಸ ನೀಡಲಿದ್ದಾರೆ ಎಂದರು. ಸಮಿತಿ ಗೌರವಾಧ್ಯಕ್ಷ ಡಾ.ಉಮಾಪತಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟರಾಜು, ರಾಜ್ಯ ಉಪಾಧ್ಯಕ್ಷೆ ಅಮೀನಬೇಗಂ, ಸಂಘಟನಾ ಕಾರ್ಯದರ್ಶಿ ಅನುಷಾ, ಕಾರ್ಯದರ್ಶಿ ಭಾಗ್ಯಮ್ಮ ಗೋಷ್ಠಿಯಲ್ಲಿದ್ದರು.

ನಾಳೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಣೆ



ಮೈಸೂರು,ಮಾ.10(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮತ್ತು ಶ್ರೀ ಪಂಚಾಚಾರ್ಯರ ಯುಗಮಾನೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮಾ.12ರಂದು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ–ಯುಗಮಾನೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಉಪಾಧ್ಯಕ್ಷ ಹಾಗೂ ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದಲ್ಲಿ ಅಂದು ಸಂಜೆ 5ಕ್ಕೆ ಅರಮನೆ ಜಪದಕಟ್ಟೆ ಮಠದ ಡಾ.ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ ಸಾನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಯಂತಿ ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್ ಸೇರಿದಂತೆ ಶಾಸಕರು, ನಿಗಮ–ಮಂಡಳಿ ಅಧ್ಯಕ್ಷರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಡಾ.ಸಿ.ಶಿವಕುಮಾರಸ್ವಾಮಿ ಮುಖ್ಯಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು. ಅರಮನೆ ಜಪದಕಟ್ಟೆ ಮಠದ ಡಾ.ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸಮಿತಿ ಅಧ್ಯಕ್ಷ ಪ್ರಸನ್ನ, ಸದಸ್ಯ ಜ್ಞಾನಶಂಕರ್, ಮೈಸೂರು ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷ ಕಾನ್ಯ ಶಿವಮೂರ್ತಿ, ರೇಣುಕಾಚಾರ್ಯ ದೇವಸ್ಥಾನದ ಅರ್ಚಕ ವೇದಮೂರ್ತಿ ಗೋಷ್ಠಿಯಲ್ಲಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.10– ಕಾಮಗಾರಿ ನಿಮಿತ್ತ ಮಾ.12ರ ಭಾನುವಾರರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜಯಪುರ, ಮಾರ್ಬಳ್ಳಿ, ಗೋಪಾಲಪುರ, ಉದ್ಬೂರು, ದನಗಳ್ಳಿ, ಹಾರೋಹಳ್ಳಿಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು. ಗೋಕುಲಂ 1ನೇ ಮತ್ತು 2ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇ ಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿ ಪುರಂ, ಸಿ.ಎಫ್.ಟಿ.ಆರ್.ಐ, ಡಿ.ಸಿ.ಹೌಸ್, ನರ್ಸ್ ಕ್ವಾಟ್ರಸ್, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಎಂ.ಎ.ಸಿ ಲೇಡಿಸ್ ಹಾಸ್ಟೆಲ್, ಜನರಲ್ ತಿಮ್ಮಯ್ಯರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಬಾರ್ ಬೇ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಟಿಎವಿಆರ್ ವಿಧಾನದ ಮೂಲಕ ಯಶಸ್ವಿ ಕವಾಟ ಬದಲಾವಣೆ

11 ಪ್ರಕರಣದ ಪೈಕಿ ವಯೋಸಹಜ ಅನಾರೋಗ್ಯ ಕಾರಣಗಳಿಂದ ಎರಡು ಪ್ರಕರಣಗಳು ಗಮನಾರ್ಹ



ಮೈಸೂರಿನ ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹಿರಿಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ವಿ.ಕೇಶವಮೂರ್ತಿ (ಎಡದಿಂದ 4ನೇಯವರು) ಮಾತನಾಡಿದರು. ಎಡದಿಂದ, ಚಿಕಿತ್ಸೆ ಪಡೆದವರಾದ ಚೆಂಗಪ್ಪ, ಡಾ.ಅಣ್ಣಪ್ಪ ಹೆಗ್ಡೆ, ಆಸ್ಪತ್ರೆಯ ಮಕ್ಕಳ ಹೃದ್ರೋಗ ತಜ್ಞ ಡಾ.ಆನಂದ್ ಲಿಂಗನ್, ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ, ಆಡಳಿತ ನಿರ್ದೇಶಕ ಪವನ್‌ಕುಮಾರ್ ಚಿತ್ರದಲ್ಲಿದ್ದಾರೆ.

ಮೈಸೂರು,ಮಾ.10(ಪಿಎಂ)– ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಇಲ್ಲದೆ, 11 ಪ್ರಕರಣಗಳಲ್ಲಿ 'ಟ್ರಾನ್ಸ್‌ಕ್ಯಾಥೆಟರ್ ವಾಲ್ವ್ ರಿಪ್ಲೇಸೆಮೆಂಟ್ (ಟಿಎವಿಆರ್)' ವಿಧಾನದ ಮೂಲಕ ಯಶಸ್ವಿಯಾಗಿ ಕವಾಟ (ವಾಲ್ವ್) ಬದಲಿಸಲಾಗಿದೆ. ಈ ಪೈಕಿ ವಯೋಸಹಜ ಅನಾರೋಗ್ಯ ಕಾರಣಗಳಿಂದ ಹೆಚ್ಚು ಸವಾಲು ಎನ್ನುವಂತಿದ್ದ ಎರಡು ಪ್ರಕರಣಗಳು ಗಮನಾರ್ಹ. ಆ ಮೂಲಕ ಹೃದಯ ಚಿಕಿತ್ಸೆಯ ಶ್ರೇಷ್ಠ ಕೇಂದ್ರವಾಗಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹೊರಹೊಮ್ಮಿದೆ.

ಮೈಸೂರಿನ ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಆಸ್ಪತ್ರೆಯ ಹಿರಿಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ವಿ.ಕೇಶವಮೂರ್ತಿ, ವಯಸ್ಸು ಹಾಗೂ ವಯೋಸಹಜ ಅನಾರೋಗ್ಯ ಕಾರಣಗಳಿಂದ ತೆರೆದ ಹೃದಯ ಶಸ್ತ್ರಚಿಕಿತ್ಸೆ ಕಷ್ಟಸಾಧ್ಯ. ಇಂತಹ ಎರಡು ಗಂಭೀರ ಪ್ರಕರಣಗಳಲ್ಲಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 'ಟ್ರಾನ್ಸ್‌ಕ್ಯಾಥೆಟರ್ ವಾಲ್ವ್ ರಿಪ್ಲೇಸ್‌ಮೆಂಟ್ (ಟಿಎವಿಆರ್)' ವಿಧಾನದ ಮೂಲಕ ಯಶಸ್ವಿಯಾಗಿ ಹೃದಯ ಕವಾಟ ಬದಲಿಸಲಾಗಿದೆ ಎಂದು ತಿಳಿಸಿದರು.

ವಯಸ್ಸು ಆದಂತೆ ಹೃದಯದ ವಾಲ್ವ್ ಚಿಕ್ಕದಾಗುತ್ತದೆ. ಕೆಲವರಿಗೆ ಇದರಿಂದ ಸಾಕಷ್ಟು ಸಮಸ್ಯೆಯಾಗಲಿದೆ. ಇದಕ್ಕೆ ಸೂಕ್ತ ಚಿಕಿತ್ಸೆ ನೀಡದೇ ಇದ್ದರೆ ಅವರು ಕೇವಲ ಎರಡು ವರ್ಷ ಕಾಲ ಮಾತ್ರ ಬದುಕಲು ಸಾಧ್ಯ. ಈ ಹಿಂದೆ ವಾಲ್ವ್‌ನ ಬದಲಾವಣೆಗೆ ತೆರೆದ ಶಸ್ತ್ರಚಿಕಿತ್ಸೆ ಒಂದೇ ಆಯ್ಕೆ ಇತ್ತು. ಇದಕ್ಕೆ ದೊಡ್ಡ ಶಸ್ತ್ರಚಿಕಿತ್ಸೆ ಅನಿವಾರ್ಯವಾಗಿತ್ತು. ಇದೊಂದು ದೊಡ್ಡ ಸವಾಲೇ ಆಗಿತ್ತು. ಆದರೆ ಈಗ ಈ ಟಿಎವಿಆರ್ ವಿಧಾನದಿಂದ ತೆರೆದ ಶಸ್ತ್ರಚಿಕಿತ್ಸೆಯೇ ಬೇಕೆಂದಿಲ್ಲ. ಈ ನೂತನ ವಿಧಾನದಲ್ಲಿ ಕಾಲಿನ ಮೂಲಕ ಕಿರುಬೆರಳು ಗಾತ್ರದ ಟ್ಯೂಬ್ ಕಳುಹಿಸಿ ಹಳೇ ವಾಲ್ವ್ ತೆಗೆದು, ಹೊಸ ವಾಲ್ವ್ ಅನ್ನು ಅಲ್ಲಿ ಕೂರಿಸಲಾಗುತ್ತದೆ. ಇಡೀ ಚಿಕಿತ್ಸೆ ಒಂದೂವರೆ ಗಂಟೆಯೊಳಗೆ ಪೂರ್ಣಗೊಳ್ಳುತ್ತದೆ ಎಂದು ವಿವರಿಸಿದರು. ಈ ಟಿಎವಿಆರ್ ವಿಧಾನದಿಂದ ಹೃದಯಕ್ಕೆ ಮರುಜೀವ ಬಂದಂತೆ ಆಗಲಿದೆ. ಈ ವಿಧಾನದಲ್ಲಿ ಈವರೆಗೆ ನಮ್ಮ ಆಸ್ಪತ್ರೆಯಲ್ಲಿ 11 ಮಂದಿಗೆ ವಾಲ್ವ್ ಬದಲಾವಣೆ ಮಾಡಲಾಗಿದೆ. ಅದರಲ್ಲಿ 84 ವರ್ಷ ವಯಸ್ಸಿನ ಡಾ.ಅಣ್ಣಪ್ಪ ಹೆಗ್ಡೆ ಮತ್ತು 70 ವರ್ಷ ವಯಸ್ಸಿನ ಚೆಂಗಪ್ಪ, ಈ ಇಬ್ಬರು ಹಿರಿಯ ನಾಗರಿಕರ ಪ್ರಕರಣಗಳು ವಯೋಸಹಜ ಅನಾರೋಗ್ಯಗಳ ಹಿನ್ನೆಲೆಯಲ್ಲಿ ತುಂಬ ಜಟಿಲತೆಯಿಂದ ಸವಾಲು ಎದುರಾಗಿತ್ತು. ಈ ಪ್ರಕರಣಗಳಲ್ಲಿಯೂ ನಾವು ಯಶಸ್ವಿಯಾಗಿದ್ದೇವೆ. ಈ ವಿಧಾನದಲ್ಲಿ ಯಾವುದೇ ರೀತಿಯ ಅರವಳಿಕೆ ಕೊಡುವ ಅಗತ್ಯವಿಲ್ಲ. ರೋಗಿಗೆ ಯಾವುದೇ ದೊಡ್ಡ ಪ್ರಮಾಣದ ನೋವಿನ ಅನುಭವ ಆಗುವುದಿಲ್ಲ ಎಂದರು.

> **"ತೆರೆದ ಶಸ್ತ್ರಚಿಕಿತ್ಸೆಗೆ ಪರ್ಯಾಯವಾಗಿ ಆವಿಷ್ಕಾರಗೊಂಡ ವಿಧಾನವೇ ಟಿಎವಿಆರ್. ಯಾವಾಗ ತೆರೆದ ಶಸ್ತ್ರಚಿಕಿತ್ಸೆ ಕಷ್ಟಸಾಧ್ಯವೋ ಆಗ ಈ ವಿಧಾನವು ಮಹತ್ವದ ಪಾತ್ರ ವಹಿಸಲಿದೆ. ವಾಲ್ವ್‌ಗೆ (ಕವಾಟ) 10 ಲಕ್ಷ ರೂ. ವೆಚ್ಚವಾಗಲಿದೆ. ಟಿಎವಿಆರ್ ವಿಧಾನ ಕೈಗೊಳ್ಳುವುದೂ ಸೇರಿದಂತೆ ಒಟ್ಟಾರೆ 15 ಲಕ್ಷ ರೂ. ವೆಚ್ಚವಾಗಲಿದೆ. ಸಹಜವಾದ ವಾಲ್ವ್ ರೀತಿಯಲ್ಲೇ ಇದು ಕೆಲಸ ಮಾಡಲಿದ್ದು, 10ರಿಂದ 12 ವರ್ಷಗಳ ಕಾಲ ಕೆಲಸ ಮಾಡಲಿದೆ. ಇದಾದ ಬಳಿಕ ಇದೇ ಮಾದರಿಯಲ್ಲಿ ಮತ್ತೊಂದು ವಾಲ್ವ್ ಅಳವಡಿಸಲೂ ಸಾಧ್ಯವಿದೆ.** –ಡಾ.ವಿ.ಕೇಶವಮೂರ್ತಿ

ಟಿಎವಿಆರ್ ವಿಧಾನದ ಮೂಲಕ ಯಶಸ್ವಿ ಕವಾಟ ಬದಲಾವಣೆ ಮಾಡಿಸಿಕೊಂಡಿರುವ ಡಾ.ಅಣ್ಣಪ್ಪ ಹೆಗ್ಡೆ ಮತ್ತು ಚೆಂಗಪ್ಪ ಅವರು ಆಸ್ಪತ್ರೆಯ ಉತ್ತಮ ಸೌಲಭ್ಯ ಮತ್ತು ಸ್ಪಂದನೆ ಬಗ್ಗೆ ಮೆಚ್ಚುಗೆಯ ಮಾತುಗಳಾನ್ನಾಡಿದರು. ಆಸ್ಪತ್ರೆಯ ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ, ಆಡಳಿತ ನಿರ್ದೇಶಕ ಪವನ್‌ಕುಮಾರ್, ಮಕ್ಕಳ ಹೃದ್ರೋಗ ತಜ್ಞ ಡಾ.ಆನಂದ್ ಲಿಂಗನ್ ಗೋಷ್ಠಿಯಲ್ಲಿದ್ದರು.

ವಿನಯ್ ರಾಜ್‌ಕುಮಾರ್ ನಟನೆಯ 'ಒಂದು ಸ(ವಿ)ರಳ ಪ್ರೇಮ ಕಥೆ' ಪೋಸ್ಟರ್ ಬಿಡುಗಡೆ



ಮೈಸೂರು, ಮಾ.10(ಜಿಎ)– ನಟ ವಿನಯ್ ರಾಜ್‌ಕುಮಾರ್ ಅಭಿನಯದ 'ಒಂದು ಸ(ವಿ)ರಳ ಪ್ರೇಮ ಕಥೆ' ಚಿತ್ರದ ಪೋಸ್ಟರ್ ಅನ್ನು ಮೈಸೂರಿನ ಖಾಸಗಿ ಕನ್ವೆನ್ಷನ್ ಹಾಲ್ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರತಂಡ ಬಿಡುಗಡೆಗೊಳಿಸಿದೆ.

ಈ ವೇಳೆ ನಾಯಕ ನಟ ವಿನಯ್ ರಾಜಕುಮಾರ್ ಮಾತನಾಡಿ, ನಾನೊಂದು ರಾ ಕಥೆಯನ್ನು ಹುಡುಕುತ್ತಿದ್ದೆ. ಪ್ರಸನ್ನ ಅವರ ಕಥೆ ಇಷ್ಟವಾಯಿತು. ಸುನಿ ಅವರು ನಿರ್ದೇಶನ ಮಾಡುತ್ತಾರೆ ಎಂದು ತಿಳಿದ ತಕ್ಷಣ ಒಪ್ಪಿದೆ. ಈ ಸಿನಿಮಾದಲ್ಲಿ ನಾನು ಸಂಗೀತ ನಿರ್ದೇಶಕನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಸಿನಿಮಾದ ಚಿತ್ರೀಕರಣ ಅರ್ಧದಷ್ಟು ಮುಗಿದಿದೆ. ಉಳಿದದ್ದು ಬೆಂಗಳೂರಿನಲ್ಲಿ ನಡೆಯಲಿದೆ ಎಂದರು.

ಮೈಸೂರು ಮೂಲದ ರಮೇಶ್ ಮೈಸೂರು ನಿರ್ಮಾಣ ಹಾಗೂ ಸಿಂಪಲ್ ಸುನಿ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಈ ಸಿನಿಮಾದ ಕಥೆಯನ್ನು ಮೊದಲು ಪುನೀತ್ ರಾಜಕುಮಾರ್ ಕೇಳಿದ್ದರು. ಈ ಸಿನಿಮಾದ ಬಗ್ಗೆ ಅಭಿಪ್ರಾಯ ತಿಳಿಸುವುದಾಗಿಯೂ ಹೇಳಿದ್ದರು ಎಂದು ಕಥೆಗಾರ ಎಂ.ಎಲ್. ಪ್ರಸನ್ನ ನೆನಪು ಮಾಡಿಕೊಂಡರು.

ನಿರ್ದೇಶಕ ಸುನಿ ಅವರ ನಿರ್ದೇಶನದ 'ಸಿಂಪಲ್ಲಾಗಿ ಒಂದು ಲವ್ ಸ್ಟೋರಿ' ಸಿನಿಮಾ ತೆರೆಕಂಡು ಹತ್ತು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಚಿತ್ರತಂಡ ಕೇಕ್ ಕತ್ತರಿಸಿ ಸಂಭ್ರಮಿಸಿತು. ಈ ವೇಳೆ ಚಿತ್ರನಟಿಯರಾದ ವಿಕ್ರಮ್ ಖ್ಯಾತಿಯ ಸ್ವಾತಿಷ್ಟಾ, ಕಿರುತರೆಯ ನಟಿ ಮಲ್ಲಿಕಾ ಸಿಂಗ್, ಸಂಗೀತ ನಿರ್ದೇಶಕ ವೀರ ಸಮರ್ಥ್, ನಿರ್ಮಾಪಕ ರಮೇಶ್ ಉಪಸ್ಥಿತರಿದ್ದರು.

ಪರಿಶ್ರಮ, ದೃಢಸಂಕಲ್ಪದಿಂದ ಸಾಧನೆ ಸಾಧ್ಯ

ಮಹಿಳೆಯರಿಗೆ ಮೈಸೂರು ಕೇಂದ್ರ ಕಾರಾಗೃಹ ಮುಖ್ಯ ಅಧೀಕ್ಷಕಿ ದಿವ್ಯಶ್ರೀ ಸಲಹೆ

ಮೈಸೂರು, ಮಾ.10(ಎಸ್‌ಬಿಡಿ)– ಮಹಿಳೆಯರು ದೃಢ ಸಂಕಲ್ಪ ಹಾಗೂ ಪರಿಶ್ರಮದಿಂದ ಯಾವ ಕ್ಷೇತ್ರದಲ್ಲಾದರೂ ಸಾಧನೆ ಮಾಡಬಹುದು ಎಂದು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಹೇಳಿದರು.

ಮೈಸೂರಿನ ದಿ ಆರ್ಗನೈಜೇಷನ್ ಫಾರ್ ದ ಡೆವಲಪ್‌ಮೆಂಟ್ ಆಫ್ ಪೀಪಲ್ (ಓಡಿಪಿ) ಹಾಗೂ ಮಹಿಳೋದಯ ಮಹಿಳಾ ಒಕ್ಕೂಟದ ಸಹಯೋಗದಲ್ಲಿ ಸಂತ ಫಿಲೋಮಿನಾ ಕಾಲೇಜು ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ' ವಿಶೇಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಸಾಧನೆಗೆ ದೃಢ ಸಂಕಲ್ಪ ಹಾಗೂ ಪರಿಶ್ರಮ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಹಿಳೆಯರ ಪ್ರಯತ್ನಕ್ಕೆ ಪುರುಷ ಪ್ರಧಾನ ಸಮಾಜವೂ ಬೆಂಬಲವಾಗಿ ನಿಲ್ಲುತ್ತದೆ. ಮಹಿಳೆಯರ ಅಭಿವೃದ್ಧಿಯಲ್ಲಿ ಸಂಘಗಳ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.



ಮೈಸೂರಿನ ಓಡಿಪಿ ಹಾಗೂ ಮಹಿಳೋದಯ ಮಹಿಳಾ ಒಕ್ಕೂಟದ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ' ವಿಶೇಷ ಕಾರ್ಯಕ್ರಮವನ್ನು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಉದ್ಘಾಟಿಸಿದರು.

ನೆಕ್ಟರ್–ಫ್ರೆಶ್ ವ್ಯವಸ್ಥಾಪಕಿ ಶ್ರೀಮತಿ ಛಾಯಾ ನಂಜಪ್ಪ ಮಾತನಾಡಿ, ಉದ್ಯಮದಲ್ಲಿ ಹಂತ ಹಂತವಾಗಿ ಬೆಳೆದು ಬಂದಿದ್ದನ್ನು ತಿಳಿಸುವುದರೊಂದಿಗೆ ಮಹಿಳೆಯರು ಶ್ರದ್ಧೆ ಮತ್ತು ವ್ಯಾಪಾರದ ಕೌಶಲಗಳನ್ನು ಅರಿತುಕೊಂಡರೆ ಉತ್ತಮ ಉದ್ಯಮಶೀಲರಾಗ ಬಹುದು. ಈ ನಿಟ್ಟಿನಲ್ಲಿ ಓಡಿಪಿ ನಡೆಸುವ ಕಾರ್ಯಚಟುವಟಿಕೆಯಲ್ಲಿ ಭಾಗಿಯಾಗುತ್ತೇವೆ ಎಂದರು.

ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ.ರಶ್ಮಿ ಮಾತನಾಡಿ, ತಂತ್ರಜ್ಞಾನ ಮತ್ತು ಮೌಲ್ಯವರ್ಧಿತ ಉತ್ಪಾದನೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದೆ. ಬಾಳೆಕಾಯಿ, ಹಲಸಿನ ಕಾಯಿ, ಪಪ್ಪಾಯ ಉತ್ಪನ್ನಗಳು ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಪೂರಕವಾಗಿವೆ ಎಂದು ವಿವರಣೆ ನೀಡಿದರು. ಕೃಷಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ.ನಾಗಮಣಿ, ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನಗಳ ಬಳಕೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ತಿಳಿಸಿಕೊಟ್ಟರು.

ಮೈಸೂರು ಧರ್ಮ ಪ್ರಾಂತ್ಯದ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರು ಮಹಿಳೆಯರ ಪ್ರಾಧಾನ್ಯತೆ ಬಗ್ಗೆ ಮಾತನಾಡಿದರು. ಇದೇ ವೇಳೆ ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರೀಶ್ ಮತದಾನದ ಬಗ್ಗೆ ಹಾಗೂ ಸೈಬರ್ ಕ್ರೈಂ ಸಬ್‌ಇನ್ಸ್‌ಪೆಕ್ಟರ್ ಶೇಕ್ ಫಿರೋಜ್ ಖಾನ್ ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಓ.ಡಿ.ಪಿ. ಸಂಸ್ಥೆಯ ನಿರ್ದೇಶಕ ಫಾ. ಅಲೆಕ್ಸ್ ಪ್ರಶಾಂತ್ ಸಿಕ್ವೇರಾ ಅವರು, ಕ್ಯಾನ್ಸರ್ ಪೀಡಿತ 37 ರೋಗಿಗಳಿಗೆ ಸಹಾಯಧನ ನೀಡಿದರು. ಅಲ್ಲದೆ ಮನೆಯಲ್ಲಿ ಅತ್ಯುತ್ತಮ ಕೈ ತೋಟ ನಿರ್ವಹಣೆ ಮಾಡಿದ 20 ಸದಸ್ಯರಿಗೆ ಬಹುಮಾನ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬ್ಬಂದಿ, ವಿವಿಧೆಡೆಯ ಸಾವಿರಾರು ಮಹಿಳೆಯರು ಉಪಸ್ಥಿತರಿದ್ದರು. ಸಂಘದ ಮಹಿಳೆಯರು ಮತ್ತು ಸಂಸ್ಥೆಯ ಸಿಬ್ಬಂದಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಇಂದು ಮಹಿಳಾ ದಿನಾಚರಣೆ

ಮೈಸೂರು, ಮಾ.10–ಮೈಸೂರು ವಿವಿ ಸಮಾಜಕಾರ್ಯ ವಿದ್ಯಾರ್ಥಿ ವೇದಿಕೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾ.11ರಂದು ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಮಹಿಳಾ ಆರೋಗ್ಯದ ಕುರಿತು ಉಪನ್ಯಾಸ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 11.30ಕ್ಕೆ ವಿವಿ ಕುಲಸಚಿವೆ ವಿ.ಆರ್.ಶೈಲಜಾ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಡಿಸಿಪಿ ಎಸ್.ಜಾಹ್ನವಿ ಭಾಗವಹಿಸಲಿದ್ದು, ಸ್ತ್ರೀರೋಗ ತಜ್ಞೆ ಡಾ. ರೂಪ ಪ್ರಕಾಶ್ ಮಹಿಳಾ ಆರೋಗ್ಯದ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಬ್ರೈಲ್ ಪ್ರೆಸ್‌ನಿಂದ 20 ಶಾಲೆಗಳಿಗೆ ಪಠ್ಯಪುಸ್ತಕ ಪೂರೈಕೆ

ಮೈಸೂರು, ಮಾ.10(ಎಸ್‌ಪಿಎನ್)–ಮೈಸೂರು ತಿಲಕ್‌ನಗರದ ಅಂಗವಿಕಲರ ಶಾಲಾ ಆವರಣದಲ್ಲಿರುವ ರಾಜ್ಯದ ಏಕೈಕ ಸರ್ಕಾರಿ ಬ್ರೈಲ್ ಲಿಪಿ ಪಠ್ಯಪುಸ್ತಕಗಳ ಮುದ್ರಣಾಲಯದಿಂದ (2022–23ನೇ ಸಾಲಿನಲ್ಲಿ) ರಾಜ್ಯದ 20ಕ್ಕೂ ಹೆಚ್ಚು ವಿಶೇಷ ಚೇತನರ ಶಾಲೆಗಳಿಗೆ 4,955 ಬ್ರೈಲ್ ಲಿಪಿ (1ರಿಂದ10ನೇ ತರಗತಿ ವಿದ್ಯಾರ್ಥಿಗಳಿಗೆ) ಪಠ್ಯಪುಸ್ತಕಗಳು ಸರಬರಾಜಾಗಿವೆ.

ದಾವಣಗೆರೆಯ ಪಿ.ಯುಕ್ತಿ ಶ್ರೀ ಸಿದ್ದಗಂಗಾ ಹೈಸ್ಕೂಲ್, ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ, ಮೈಸೂರಿನ ಮಹಾರಾಣಿ ಕಾಲೇಜು, ಮೈಸೂರು ಮೆಟ್ಟಗಳ್ಳಿಯ ರಂಗರಾವ್ ಶಾಲೆ, ಕುಣಿಗಲ್‌ನ ನವಚೇತನ ಅಂಧ ಮಕ್ಕಳ ಶಾಲೆ, ಬೀದರ್‌ನ ಶ್ರೀ ಮಾಣಿಕ್ ಪ್ರಭು ಶಾಲೆ, ಬೆಂಗಳೂರಿನ ಜ್ಯೋತಿಸೇವಾ ಶಾಲೆ, ಚಿಕ್ಕಮಗಳೂರಿನ ಆಶಾಕಿರಣ ಶಾಲೆ, ತುಮಕೂರಿನ ಸಿದ್ದಗಂಗಾ ಶಾಲೆ, ಮೈಸೂರಿನ ಸರ್ಕಾರಿ ಶಾಲೆ, ಕಲಬುರಗಿಯ ಸರ್ಕಾರಿ ಶಾಲೆ, ಹಾಲದಕಟ್ಟಾ ಮುರುಘಾರಾಜೇಂದ್ರ ಶಾಲೆ, ಹುಬ್ಬಳ್ಳಿಯ ಆರೂಢ ಶಾಲೆ, ಅಪ್ಜಲಪುರ ವಿಕೆಜಿ ಶಾಲೆ, ಕಲಬುರಗಿಯ ಅಂಬುಬಾಯಿ ಶಾಲೆ, ರಾಯಚೂರಿನ ಮಾಣಿಕ್ ಪ್ರಭು ಶಾಲೆ, ಬೆಳಗಾವಿಯ ಮಾಹೇಶ್ವರಿ ಶಾಲೆ, ರಾಮನಗರ ಬಿಜೆಪಿ ಶಾಲೆ, ಚಿತ್ರದುರ್ಗದ ತೀಕ್ಷ್ಣಶಾಲೆಗಳಿಗೆ ಅಂದಾಜು 4,955 ಬ್ರೈಲ್ ಲಿಪಿ ಪಠ್ಯಪುಸ್ತಕಗಳು ಉಚಿತವಾಗಿ ಸರಬರಾಜಾಗಿವೆ.




ಕೋವಿಡ್ ಹಿನ್ನೆಲೆಯಲ್ಲಿ 2021–22ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶಾಲೆಗಳಿಗೆ ಒಟ್ಟು 358 ಪಠ್ಯ ಪುಸ್ತಕಗಳು ಸರಬರಾಜಾಗಿವೆ. ಕೋವಿಡ್–19 ಕಾಣಿಸಿಕೊಳ್ಳುವ ಮುನ್ನ 15 ಸಾವಿರಕ್ಕೂ ಹೆಚ್ಚು ಪುಸ್ತಕಗಳು ಸರಬರಾಜಾಗುತ್ತಿದ್ದವು. ಆದರೆ, ಕೋವಿಡ್ ನಂತರ 10 ಸಾವಿರ ಪಠ್ಯಪುಸ್ತಕಗಳ ಬೇಡಿಕೆಯಲ್ಲಿ ಕಡಿಮೆಯಾಗಿರುವುದು ಏಕೆ ಎಂಬುದು ತಿಳಿಯುತ್ತಿಲ್ಲ. ಈ ಮುದ್ರಣಾಲಯದಲ್ಲಿ 1ರಿಂದ10ನೇ ತರಗತಿಯವರೆಗೆ 53 ವಿಷಯಗಳ ಪುಸ್ತಕಗಳು ಮುದ್ರಣವಾಗುತ್ತಿದ್ದು, 153 ಸಂಪುಟಗಳಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಿದೆ ಎಂದು ಇಲ್ಲಿನ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಂದು ಪ್ರಿಟಿಂಗ್ ಮಿಷನ್ ರಿಪೇರಿ: ಬ್ರೈಲ್ ಲಿಪಿ ಪಠ್ಯಪುಸ್ತಕಗಳ ಮುದ್ರಣಾಲಯದಲ್ಲಿ ಎರಡು ಪ್ರಿಟಿಂಗ್ ಮಿಷನ್ ಇವೆ. ಈ ಮಿಷನ್‌ಗಳನ್ನು ವಿದೇಶದಿಂದ ತರಿಸಲಾಗಿದೆ. ಸಣ್ಣಪುಟ್ಟ ರಿಪೇರಿ ಬಂದರೆ, ಆ ಕಂಪನಿಯ ಪ್ರತಿನಿಧಿಯನ್ನು ಸಂಪರ್ಕಿಸಿ, ರಿಪೇರಿ ಮಾಡಿಸಬೇಕು. ಈಗ ಒಂದು ಮಿಷನ್ ರಿಪೇರಿಗೆ ಬಂದಿದೆ. ಇದನ್ನು ಸರಿಪಡಿಸಲು ಸಾಧ್ಯವಾಗುತ್ತಿಲ್ಲ. ಒಂದು ಮಿಷನ್ ಕೆಟ್ಟರೆ, ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಇಲ್ಲಿನ ಸಿಬ್ಬಂದಿಗಳ ಅಳಲು.

ಟೆಲಿಫೋನ್ ಕಟ್: ಅನುದಾನದ ಕೊರತೆಯಿಂದ ರಾಜ್ಯದ ಏಕೈಕ ಬ್ರೈಲ್ ಲಿಪಿ ಮುದ್ರಣಾಲಯದ ಟೆಲಿಫೋನ್ ಬಿಲ್ ಕಟ್ಟಲು ಸಾಧ್ಯವಾಗುತ್ತಿಲ್ಲ. ಕಳೆದೊಂದು ವರ್ಷದಿಂದ ಟೆಲಿಫೋನ್ ಸಂಪರ್ಕವಿಲ್ಲ.

10 ನೇ ತರಗತಿ ಪುಸ್ತಕವಿಲ್ಲ: 1ರಿಂದ 10 ತರಗತಿ ಓದುವ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಮಾತ್ರ ಬ್ರೈಲ್ ಲಿಪಿಯಲ್ಲಿ ಪಠ್ಯಪುಸ್ತಕಗಳು ಲಭ್ಯವಿದೆ. ಆದರೆ, 10ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಬ್ರೈಲ್‌ಲಿಪಿ ಪಠ್ಯಪುಸ್ತಕ ಲಭ್ಯವಿಲ್ಲ. ಇದರ ಬಗ್ಗೆಯೂ ಶೈಕ್ಷಣಿಕ ತಜ್ಞರು ಚಿಂತಿಸಬೇಕಿದೆ ಎನ್ನುತ್ತಾರೆ ವಿಶೇಷ ಚೇತನ ವಿದ್ಯಾರ್ಥಿ ಲೋಕೇಶ್.

'ಬ್ಯಾಬ್ಲರ್ ಫೀಡಿಂಗ್ ಕಾಮನ್ ಕುಕ್ಕು' ಅಪರೂಪದ ಛಾಯಾಚಿತ್ರಕ್ಕೆ ಮಧುಸೂದನ್‌ಗೆ ಅಂತರ್‍ರಾಷ್ಟ್ರೀಯ ಪ್ರಶಸ್ತಿ





ಮೈಸೂರು, ಮಾ.10 – ಮೈಸೂರಿನ ಪತ್ರಿಕಾ ಛಾಯಾಗ್ರಾಹಕ ಎಸ್.ಆರ್. ಮಧುಸೂದನ್ ಅವರ 'ಬ್ಯಾಬ್ಲರ್ ಫೀಡಿಂಗ್ ಕಾಮನ್ ಕುಕ್ಕು' ಪಕ್ಷಿಗಳ ಚಿತ್ರಕ್ಕೆ ಅಂತರರಾಷ್ಟ್ರೀಯ ಮಟ್ಟದ ವಿಶೇಷ ಪ್ರಶಸ್ತಿ ಲಭಿಸಿದೆ.

ಪಶ್ಚಿಮ ಬಂಗಾಳದ ಇ–ಮ್ಯಾಜಿಕ್ ಫೋಟೋ ಕ್ಲಬ್ ಆಫ್ ಶಾಂತಿಪುರ (ಐಎಇಸಿಎಸ್) ಹಾಗೂ ಫೋಟೋಗ್ರಾಫಿಕ್ ಸೊಸೈಟಿ ಆಫ್ ಅಮೇರಿಕಾ (ಪಿಎಸ್‌ಎ) ಸಂಯುಕ್ತಾಶ್ರಯದಲ್ಲಿ ನಡೆದ ಐಎಇಸಿಎಸ್ ಇಂಟರ್ ನ್ಯಾಷನಲ್ ಸರ್ಕಿಟ್ 2023 ಛಾಯಾಚಿತ್ರ ಸ್ಪರ್ಧೆಯಲ್ಲಿ ಪತ್ರಿಕಾ ಹಾಗೂ ವನ್ಯಜೀವಿ ಛಾಯಾ ಗ್ರಾಹಕರಾದ ಎಸ್.ಆರ್.ಮಧುಸೂದನ್ ಅವರು ತೆಗೆದಿರುವ ಬ್ಯಾಬ್ಲರ್ ಫೀಡಿಂಗ್ ಕಾಮನ್ ಕುಕ್ಕು ಚಿತ್ರಕ್ಕೆ IPCS ಅಂತರರಾಷ್ಟ್ರೀಯ ಹಾನರರಿ ಮೆಡಲ್ ಲಭಿಸಿದೆ. ಕೋಗಿಲೆ ಜಾತಿಗೆ ಸೇರಿದ ಕಾಮನ್ ಕುಕ್ಕು ಪಕ್ಷಿ, ತನ್ನ ಮರಿಗೆ ಆಹಾರ ನೀಡುವ ಅಪರೂಪದ ಚಿತ್ರವಾಗಿದೆ. ಈ ಪಕ್ಷಿಯೂ ಇನ್ನಿತರ ಪಕ್ಷಿಯ ಗೂಡುಗಳಲ್ಲಿ ಮೊಟ್ಟೆ ಇಡುತ್ತದೆ. ಅನಂತರ ಗೂಡಿನ ಮೂಲ ಪಕ್ಷಿಯೇ ಮರಿ ಮಾಡುತ್ತದೆ. ಆ ಮರಿಗಳು ಭಕಪಕ್ಷಿಯಾಗಿದ್ದು, ಮಲತಾಯಿ ತರುವ ಊಟವನ್ನೆಲ್ಲ ತಾವೇ ತಿಂದು, ಬೆಳವಣಿಗೆ ಹೊಂದಿ ಮಲತಾಯಿಗೆ ಇದು ನನ್ನ ಮರಿ ಅಲ್ಲ ಎಂದು ಗೊತ್ತಾಗುವಷ್ಟರಲ್ಲಿ ಸ್ವಸಾಮರ್ಥ್ಯ ಹೊಂದಿರುತ್ತವೆ. ಕೆಲವೊಮ್ಮೆ ಆಹಾರ ಸಮರ್ಪಕವಾಗಿ ಪೂರೈಕೆ ಆಗದೇ ಇದ್ದಲ್ಲಿ ತಾಯಿಯನ್ನೇ ಕೊಂದಿರುವ ನಿದರ್ಶನಗಳು ಇವೆ.



ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಶುಕ್ರವಾರ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಬಿ. ಮಹದೇವಸ್ವಾಮಿ, ಉಪಾಧ್ಯಕ್ಷ ರಮೇಶ್, ನಿರ್ದೇಶಕರಾದ ನಟೇಶ್, ಸುಧಾಕರ್, ನಂಜುಂಡಸ್ವಾಮಿ, ರಫೀಕ್, ಶಿವೇಗೌಡ, ವೆಂಕಟಾಚಲ, ಚಿದಂಬರ, ಶ್ರೀಮತಿ ಮಂಜುಳಾ, ಶ್ರೀಮತಿ ಸಾವಿತ್ರಮ್ಮ, ಎಂ. ರಾಜು, ಸಿಇಓ ಎಂ.ಎನ್. ಪ್ರಕಾಶ್ ಹಾಗೂ ಗ್ರಾಮದ ಮುಖಂಡರು ಹಾಜರಿದ್ದಾರೆ.

ಪ್ರಣಾಳಿಕೆಯಲ್ಲಿ ವಿದ್ಯಾರ್ಥಿ ಯುವಜನ ಪರ ಕಾರ್ಯಕ್ರಮಗಳ ಸೇರ್ಪಡೆಗೆ ಎಸ್‌ಐಓ ಒತ್ತಾಯ


ಸಂಘಟನೆಯಿಂದ ವಿದ್ಯಾರ್ಥಿ ಬೇಡಿಕೆ ಬಿಡುಗಡೆ



ಮೈಸೂರು,ಮಾ.10(ಪಿಎಂ)– ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ವಿದ್ಯಾರ್ಥಿ–ಯುವ ಜನರ ಶ್ರೇಯೋಭಿವೃದ್ಧಿಗೆ ಪೂರಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಬೇಕೆಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಷನ್ ಆಫ್ ಇಂಡಿಯಾ (ಎಸ್‌ಐಓ) ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್‌ಐಓ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಪೀರ್ ಲಟಗೇರಿ, ವಿದ್ಯಾರ್ಥಿ–ಯುವ ಜನರ ಶ್ರೇಯೋಭಿವೃದ್ಧಿಗೆ ಪೂರಕ ಅಂಶಗಳ ಕುರಿತಂತೆ ನಮ್ಮ ಸಂಘಟನೆ ವತಿಯಿಂದ ವಿದ್ಯಾರ್ಥಿ ಪ್ರಣಾಳಿಕೆಯನ್ನು ಬೆಂಗಳೂರಿನ ಶಾಸಕರ ಭವನದಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಸದರಿ ಪ್ರಣಾಳಿಕೆಯಲ್ಲಿರುವ ಅಂಶಗಳಿಗೆ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಆದ್ಯತೆ ನೀಡಬೇಕು. ಅಂತಹ ಪಕ್ಷಗಳಿಗೆ ಸಂಘಟನೆ ಬೆಂಬಲ ನೀಡಲಿದೆ ಎಂದು ತಿಳಿಸಿದರು.

ಅಂಗನವಾಡಿ ವ್ಯವಸ್ಥೆ ಸಶಕ್ತಗೊಳಿಸಿ, ಕಾರ್ಯಕರ್ತೆಯರಿಗೆ ಸೇವಾ ಭದ್ರತೆ ನೀಡಬೇಕು. ಇತ್ತೀಚೆಗೆ ನಡೆದ ಪಠ್ಯಪುಸ್ತಕ ಮರುಪರಿಷ್ಕರಣೆ ಹಿಂಪಡೆದು ಈ ಹಿಂದಿನ ಪರಿಷ್ಕೃತ ಪಠ್ಯಕ್ರಮವನ್ನೇ ಮುಂದುವರೆಸಬೇಕು. ಮಕ್ಕಳ ಶಾಲಾ ದಾಖಲಾತಿಯನ್ನು ಖಚಿತ ಪಡಿಸಲು ಸಮವಸ್ತ್ರ, ಶೂ, ಸಾಕ್ಸ್, ಬ್ಯಾಗ್ ಹಾಗೂ ಪುಸ್ತಕಗಳನ್ನು ಸಕಾಲದಲ್ಲಿ ನೀಡಬೇಕು. ಮದರಸಾ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದತ್ತ ಉತ್ತೇಜಿಸಲು ವಿಶೇಷ ಕಾರ್ಯಕ್ರಮ ರೂಪಿಸಬೇಕು ಎಂದು ಒತ್ತಾಯಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಸಂವಿಧಾನದ ಒಕ್ಕೂಟ ತತ್ವಗಳಿಗೆ ಅನುಗುಣವಾಗಿ ಪರಾಮರ್ಶಿಸಿ ರಾಜ್ಯದ ಅಗತ್ಯಕ್ಕೆ ಪೂರಕವಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸಬೇಕು. ಶಿಕ್ಷಣದ ವ್ಯಾಪಾರೀಕರಣ ತಡೆಗಟ್ಟಲು ಖಾಸಗಿ ಶಾಲಾ–ಕಾಲೇಜುಗಳ ಪ್ರವೇಶಾತಿಯ ಶುಲ್ಕ ನಿಯಂತ್ರಣಕ್ಕಾಗಿ ನಿರ್ದಿಷ್ಟ–ಏಕರೂಪ ಶುಲ್ಕ ನಿಗದಿ ಮಾಡಬೇಕು. ಶೈಕ್ಷಣಿಕ ವಾತಾವರಣದಲ್ಲಿ ಜಾತಿ ಮತ್ತು ಧರ್ಮದ ನಿಂದನೆ ಹಾಗೂ ತಾರತಮ್ಯ ತಡೆಗಟ್ಟಲು ವಿಶೇಷ ಕಾನೂನು ರೂಪಿಸಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಸಂಘಟನೆಯ ವಿದ್ಯಾರ್ಥಿ ಪ್ರಣಾಳಿಕೆಯಲ್ಲಿ ಉಲ್ಲೇಖಿಸಲಾಗಿದೆ ಎಂದರು. ನಮ್ಮ ಸಂಘಟನೆಯ ವಿದ್ಯಾರ್ಥಿ ಪ್ರಣಾಳಿಕೆ ಯಲ್ಲಿನ ಬೇಡಿಕೆಗಳು ಕೇವಲ ಅಲ್ಪಸಂಖ್ಯಾತರಿಗೆ ಸೀಮಿತವಾಗಿಲ್ಲ. ಬದಲಿಗೆ ರಾಜ್ಯದ ಸಮಸ್ತ ವಿದ್ಯಾರ್ಥಿ–ಯುವ ಜನರ ಶ್ರೇಯೋಭಿವೃದ್ಧಿಗೆ ಪೂರಕ ಬೇಡಿಕೆಗಳನ್ನು ಮುಂದಿಡಲಾಗಿದೆ ಎಂದು ತಿಳಿಸಿದರು. ಸಂಘಟನೆಯ ಮೈಸೂರು ಸ್ಥಾನೀಯ ಅಧ್ಯಕ್ಷ ಮಹಮ್ಮದ್ ಉಸಾಮಾ, ಜಿಲ್ಲಾ ಸಂಚಾಲಕ ಮಹಮ್ಮದ್ ಸಾದ್ ಗೋಷ್ಠಿಯಲ್ಲಿದ್ದರು.



ಜಯಪುರ ಹೋಬಳಿಯ ಶೆಟ್ಟಿನಾಯಕನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಅಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಮೈಸೂರು ಜಿಪಂ ಮಾಜಿ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ಉಪಸ್ಥಿತರಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಶನಿವಾರ 11 ಮಾರ್ಚ್ 2023

ನಂಜನಗೂಡಿನ ನವೀಕೃತ ಪ್ರವಾಸಿ ಮಂದಿರ ಉದ್ಘಾಟನೆ



ನಂಜನಗೂಡು, ಮಾ.10– ನಗರದ ಪ್ರವಾಸಿ ಮಂದಿರದ ಹಳೇ ಕಟ್ಟಡವನ್ನು ಹಿಂದಿನ ವಾಸ್ತುಶಿಲ್ಪಕ್ಕೆ ಧಕ್ಕೆಯಾಗದಂತೆ ಮೈಸೂರಿನ ಜಲದರ್ಶಿನಿ ಮಾದರಿ 1 ಕೋಟಿ ವೆಚ್ಚದಲ್ಲಿ ನವೀಕರಿಸಲಾಗಿದ್ದು, ಕಟ್ಟಡವನ್ನು ನವೀನ ಮಾದರಿಯ ಪಿಠೋಪಕರಣಗಳಿಂದ ಸಜ್ಜುಗೊಳಿಸಲಾಗಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಶುಕ್ರವಾರ ನವೀಕರಣಗೊಂಡ ಪ್ರವಾಸಿ ಮಂದಿರ ಉದ್ಘಾಟಿಸಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಕಂದಾಯ ಸಚಿವನಾಗಿದ್ದಾಗ ಪ್ರವಾಸಿ ಮಂದಿರ ನವೀಕರಣಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದೆ. ನಗರಕ್ಕೆ ಗಣ್ಯರು ಆಗಮಿಸಿದಾಗ ಉಳಿದುಕೊಳ್ಳಲು ಹಾಗೂ ಉನ್ನತ ಮಟ್ಟದ ಸಭೆ ನಡೆಸಲು ಅನುಕೂಲವಾಗುವಂತೆ ಸಭಾ ಭವನ, ವಿವಿಪಿಐ ಗಣ್ಯರು ತಂಗಲು 2 ಕೊಠಡಿಗಳು ಸೇರಿದಂತೆ ಪ್ರವಾಸಿ ಮಂದಿರದ ಹೊರಗೆ ಸಸ್ಯಕಾಶಿ ನಿರ್ಮಿಸಲಾಗಿದೆ. ಕಟ್ಟಡದ ಹೊರಗೆ ನೀರಿನ ಚಿಲುಮೆ ಹಾಗೂ ಅಲಂಕಾರಿಕ ಸಸ್ಯಗಳನ್ನು ಬೆಳೆಸಿ ಸಿಂಗರಿಸಲಾಗುವುದು ಎಂದರು.

ದೇವಾಲಯದ ಹಣ ಬಡ್ಡಿಗೆ ಬಿಡಲು ಅಲ್ಲ: ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿರುವ 6.5 ಎಕರೆ ಜಾಗದಲ್ಲಿ ವಿವಿಧ 15 ಹಿಂದುಳಿದ ವರ್ಗದವರ ಸಮುದಾಯ ಭವನಗಳನ್ನು ನಿರ್ಮಿಸಲು ನಿವೇಶನ ಹಾಗೂ ಅನುದಾನ ನೀಡಲಾಗಿದೆ. ಮುಖ್ಯಮಂತ್ರಿಗಳು ನಗರಕ್ಕೆ ಭೇಟಿ ನೀಡಿದಾಗ, ಸಮುದಾಯ ಭವನಗಳ ಮುಂದುವರೆದ ಕಾಮಗಾರಿಗಳಿಗಾಗಿ ದೇವಾಲಯದ ಹಣ ಹಣ ನೀಡುವಂತೆ ಕೋರಲಾಗಿತ್ತು ಮುಖ್ಯಮಂತ್ರಿಗಳು ನಗರದಲ್ಲಿ ಎಲ್ಲಾ ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ಸಮಾನತೆಯ ಸಮುಚ್ಛಯ ನಿರ್ಮಾಣ ಮಾಡುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅನುದಾನ ನೀಡಿದ್ದರು. ಆದರೆ ರಾಜಕೀಯ ವಿರೋಧಿಗಳು ದೇವಾಲಯದ ಹಣವನ್ನು "ಶಾದಿ ಮಹಲ್ ನಿರ್ಮಿಸಲು ಬಳಸಲಾಗುತ್ತಿದೆ" ಎಂಬ ಇಲ್ಲಸಲ್ಲದ ಟೀಕೆಯಲ್ಲಿ ತೊಡಗಿದ್ದಾರೆ. ನಿಯಮದಂತೆ ದೇವಾಲಯದ ಹಣವನ್ನು ಶಾದಿ ಮಹಲ್ ನಿರ್ಮಾಣಕ್ಕೆ ಬಳಸಲು ಬರುವುದಿಲ್ಲ. ವಕ್ಫ್ ಬೋರ್ಡ್ ಅನುದಾನದಿಂದ ಶಾದಿ ಮಹಲ್ ನಿರ್ಮಿಸಲಾಗುತ್ತದೆ. ದೇವಾಲಯದಲ್ಲಿ ಭಕ್ತರು ಕಾಣಿಕೆಯಾಗಿ ನೀಡಿದ 140 ಕೋಟಿಗೂ ಹೆಚ್ಚು ಹಣ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗಿದ್ದು, ಹಣ ಬಡ್ಡಿಗೆ ಬಿಡಬೇಕೇನು? ಎಂದು ಪ್ರಶ್ನಿಸಿದ ಅವರು, ದೂರದಿಂದ ದೇವರ ದರ್ಶನಕ್ಕೆ ಬರುವ ವಿವಿಧ ಹಿಂದುಳಿದ ಸಮುದಾಯಗಳ ಜನ ತಂಗಲು ಸಮುದಾಯ ಭವನಗಳು ಉಪಯೋಗವಾಗಲಿ ಎಂಬ ದೂರ ದೃಷ್ಟಿಯಿಂದ ಭವನಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಕಳೆ ಕೀಳಲು, ಆರಂಭ ಮಾಡಲು ಬಾರದವನನ್ನು ನಮ್ಮ ಹಳ್ಳಿ ಕಡೆ ಹಾಡು ಭಾಷೆಯಲ್ಲಿ "ಹೋಗಿ ದನ ಕಾಯಿ" ಅಂತಾರೆ. ಉಪ ಚುನಾವಣೆಯಲ್ಲಿ ನನ್ನ ವಿರುದ್ಧ ಗೆದ್ದು 1 ವರ್ಷ ಏನು ಕೆಲಸ ಮಾಡದ ಮಾಜಿ ಶಾಸಕ ಕಳಲೆ ಕೇಶವಮೂರ್ತಿಯನ್ನು "ದನ ಕಾಯುತ್ತಿರಬೇಕು" ಎಂದು ಮುದಲಿಸಿದ್ದೆ. ಮಾಜಿ ಸಂಸದ ಧ್ರುವನಾರಾಯಣ ಕ್ಷೇತ್ರಕ್ಕೆ ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಹೇಳಲಿ. ಅದು ಬಿಟ್ಟು ಹಳ್ಳಿ-ಹಳ್ಳಿಗಳಿಗೆ ಓಟ್ ಲಿಸ್ಟ್ ಹಂಚುತ್ತಿದ್ದಾನೆ ಎಂದು ಜರಿದರು.

ಕಾರ್ಯಕ್ರಮದಲ್ಲಿ ಶಾಸಕ ಬಿ.ಹರ್ಷವರ್ಧನ್, ತಹಸೀಲ್ದಾರ್ ಶಿವಮೂರ್ತಿ, ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಪಿ.ಮಹೇಶ್, ಮುಖಂಡರಾದ ಸುಬ್ಬಣ್ಣ, ಶ್ರೀನಿವಾಸರೆಡ್ಡಿ, ಬಿ.ಎಸ್.ರಾಮು, ನಗರಸಭೆ ಸದಸ್ಯ ಬಾಲಚಂದ್ರ, ರಂಗಸ್ವಾಮಿ, ನವೀನ್, ಅಂಕಿತ್, ಧನರಾಜ್ ಬೂಲಾ, ಅಬ್ದುಲ್ ರಜಾಕ್, ಪುಟ್ಟಸ್ವಾಮಿ, ಶಿವರುದ್ರ, ಎಇಇ ಮುತ್ತುರಾಜು ಉಪಸ್ಥಿತರಿದ್ದರು.

7 ವರ್ಷಗಳ ಬಳಿಕ 'ಕೈ' ತೆಕ್ಕೆಗೆ ಭೇರ್ಯ ಗ್ರಾಪಂ

ಅಧ್ಯಕ್ಷೆಯಾಗಿ ಜಯಲಕ್ಷ್ಮಿ ಕೃಷ್ಣೇಗೌಡ ಆಯ್ಕೆ



ಭೇರ್ಯ, ಮಾ.10– 7 ವರ್ಷಗಳ ಬಳಿಕ ಭೇರ್ಯ ಗ್ರಾಪಂ ಅಧಿಕಾರವನ್ನು ಕಾಂಗ್ರೆಸ್ ಪಕ್ಷ ಹಿಡಿದಿದೆ. ಶುಕ್ರವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಜಯಲಕ್ಷ್ಮಿ ಕೃಷ್ಣೇಗೌಡ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಜೆಡಿಎಸ್ ಬೆಂಬಲಿತ ಸದಸ್ಯೆ ಜ್ಯೋತಿ ಮಹೇಶ್ ನಾಯಕ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಜಯಲಕ್ಷ್ಮಿ ಕೃಷ್ಣೇಗೌಡ, ಜೆಡಿಎಸ್ ಬೆಂಬಲಿತ ಸದಸ್ಯೆ ರೂಪ ಹರೀಶ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಜಯಲಕ್ಷ್ಮಿ ಕೃಷ್ಣೇಗೌಡ 8 ಮತ ಪಡೆದು ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ರೂಪ ಹರೀಶ್ 7 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಪಶುವೈದ್ಯ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ನೂತನ ಅಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿದರು. ಪಿಡಿಓ ಮಂಜುನಾಥ್ ಇದ್ದರು.

ಗ್ರಾಪಂ ಉಪಾಧ್ಯಕ್ಷ ಬಿ.ಬಿ.ಶಿವಣ್ಣ, ಸದಸ್ಯರಾದ ಬಿ.ಕೆ.ಶಿವಕುಮಾರ್, ಬಿ.ಕೆ.ಕುಮಾರ್, ಬಿ.ಪಿ.ಪ್ರಕಾಶ್, ಮಂಜಪ್ಪ, ಕೃಷ್ಣೇಗೌಡ, ಬಿ.ಎಲ್.ರಾಜಶೇಖರ್, ಹರ್ಷವರ್ಧನಿ, ರೇಖಾ ಮಹದೇವ್, ತಾಯಮ್ಮ, ಶಿವಮ್ಮ, ಮೊಹಸಿನ್ ತಾಜ್, ಕಾರ್ಯದರ್ಶಿ ಪ್ರೇಮ್ ಕುಮಾರ್, ಸಿಬ್ಬಂದಿಗಳಾದ ಮುಬಶಿರಾ ತಪಸ್ಸಂ, ಜಯಂತ್, ಕುಮಾರ್ ಇದ್ದರು.

ನೂತನ ಅಧ್ಯಕ್ಷೆ ಜಯಲಕ್ಷ್ಮಿ ಕೃಷ್ಣೇಗೌಡ ಅವರಿಗೆ ಕಾಂಗ್ರೆಸ್ ಮುಖಂಡ ಸಿ.ಪಿ.ರಮೇಶ್ ಪಕ್ಷದ ಬಾವುಟ ನೀಡಿ ಶಾಲು ಹೊದಿಸಿ ಹಾರಹಾಕಿ ಅಭಿನಂದಿಸಿದರು. ನಂತರ ಮಾತನಾಡಿದ ಅವರು ಕಳೆದ 7 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಭೇರ್ಯ ಗ್ರಾಪಂ ಅಧಿಕಾರ ಹಿಡಿದಿರಲಿಲ್ಲ. ಈ ಬಾರಿ ನಮ್ಮ ನಾಯಕರಾದ ಡಿ.ರವಿಶಂಕರ್ ನೇತೃತ್ವದಲ್ಲಿ ಹಾಗೂ ಕೆಪಿಸಿಸಿ ಮಾಜಿ ಸದಸ್ಯ ದೊಡ್ಡಸ್ವಾಮಿಗೌಡರ ಮಾರ್ಗದರ್ಶನದಲ್ಲಿ ಅಧಿಕಾರಕ್ಕೆ ಹಿಡಿಯಲು ಶ್ರಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಡಿ.ತಮ್ಮಯ್ಯ, ಕಾಂಗ್ರೆಸ್ ಮುಖಂಡರಾದ ಬಿ.ಟಿ.ಮೋಹನ್, ಸುದರ್ಶನ್, ಕೃಷ್ಣ, ಟಿ.ಸಿ.ಮಂಜು, ಹುಚ್ಚೇಗೌಡ ಸೇರಿದಂತೆ ಅನೇಕರು ಶುಭಾಶಯ ಕೋರಿದರು.

ನಾಳೆ ಜೆಡಿಎಸ್ ಕಾರ್ಯಕರ್ತರ ಸಮಾವೇಶ

ಚುಂಚನಕಟ್ಟೆ, ಮಾ.10– ಇಲ್ಲಿನ ಮಾಯಿಗೌಡನಹಳ್ಳಿ ಗ್ರಾಪಂ ಆವರಣದಲ್ಲಿ ಮಾ.12 ರಂದು ಚುಂಚನಕಟ್ಟೆ ಹೋಬಳಿ ಜೆಡಿಎಸ್ ಕಾರ್ಯಕರ್ತರ ಸಮಾವೇಶ ನಡೆಯಲಿದೆ ಎಂದು ಸಾಲಿಗ್ರಾಮ ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹಳಿಯೂರು ಬಡಾವಣೆಯಲ್ಲಿ ನಡೆದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9 ಗಂಟೆಗೆ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಪೂಜೆ ಹಮ್ಮಿಕೊಳ್ಳಲಾಗಿದೆ. ಬಳಿಕ ಶ್ರೀರಾಮ ದೇವಾಲಯದಿಂದ ಮಾಯಿಗೌಡಹಳ್ಳಿವರೆಗೂ ಸಾವಿರಾರು ಮಂದಿ ಬೈಕ್ ರ್‍ಯಾಲಿ ನಡೆಸಲಿದ್ದು, ಶಾಸಕ ಸಾ.ರಾ ಮಹೇಶ್ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 11.30ಕ್ಕೆ ಸಮಾವೇಶ ಆರಂಭವಾಗಲಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಇಂದು ಶ್ರೀದುರ್ಗಾಪರಮೇಶ್ವರಿ ಅಮ್ಮನವರ ಜಾತ್ರೆ

ಹಂಪಾಪುರ, ಮಾ.10– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿಯಲ್ಲಿ ಮಾ.11 ರಿಂದ 13ರವರೆಗೆ ಶ್ರೀದುರ್ಗಾ ಪರಮೇಶ್ವರಿ ಅಮ್ಮನವರ ಜಾತ್ರೆ ಮಹೋತ್ಸವ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಜಾತ್ರೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಪ್ರಕಟಣೆ ತಿಳಿಸಿದೆ.



ನಂಜನಗೂಡು ತಾಲೂಕಿನ ಹೆಡತಲೆ ಶ್ರೀಆದಿಶಕ್ತಿ ಭಂಗಿ ಮಾರಮ್ಮನ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು. ರಥ ಎಳನೀರು, ಬಾಳೆಹಣ್ಣಿನ ಗೋನೆ, ಹೂವಿನ ಅಲಂಕಾರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತ್ತು. ಈ ವೇಳೆ ಭಕ್ತರಿಗೆ ಮಜ್ಜಿಗೆ, ಪಾನಕ, ಹಣ್ಣು ಹಂಪಲು ವಿತರಿಸಲಾಯಿತು. ನವಜೋಡಿಗಳು ರಥಕ್ಕೆ ಹಣ್ಣು ಜವನ ಎಸೆದು ಹರಕೆ ತೀರಿಸಿದರು. ಶಾಸಕ ಬಿ. ಹರ್ಷವರ್ಧನ್ ರಥೋತ್ಸವದಲ್ಲಿ ಭಾಗಿಯಾಗಿ ದೇವರಿಗೆ ಪೂಜೆ ಸಲ್ಲಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆದಿವಾಸಿಗಳ ಪ್ರತಿಭಟನೆ



ಹೆಚ್.ಡಿ.ಕೋಟೆ, ಮಾ.10– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಾಲೂಕಿನ ಆದಿವಾಸಿ ಸಮುದಾಯದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದ ಬಳಿ ಜಮಾಯಿಸಿದ ಆದಿವಾಸಿಗಳು ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು.

ಆದಿವಾಸಿ ಮುಖಂಡ ಶೈಲೇಂದ್ರ ಮಾತನಾಡಿ, ಅರಣ್ಯದೊಳಗೆ ಹಾಗೂ ಅರಣ್ಯದಂಚಿನಲ್ಲಿ ವಾಸಿಸುತ್ತಿದ್ದ ಜೇನುಕುರುಬ, ಯರವ, ಕಾಡುಕುರುಬ, ಸೋಲಿಗ ಸಮುದಾಯವರನ್ನು 1972ರ ವನ್ಯಜೀವಿ ಸಂರಕ್ಷಣೆ ಕಾಯ್ದೆಯಡಿ ಹಾಗೂ ಕಬಿನಿ, ತಾರಕ, ಹೆಬ್ಬಾಳ ಮತ್ತು ನುಗು ಅಣೆಕಟ್ಟೆ ಕಟ್ಟುವಾಗ ಯಾವುದೇ ಪುನರ್ವಸತಿ ಕಲ್ಪಿಸದೇ ಏಕಾಏಕಿ ಸ್ಥಳಾಂತರಿಸಲಾಗಿದೆ. ಈ ಸಮಸ್ಯೆಗಳನ್ನು ಬಗೆಹರಿಸಲು ಅರಣ್ಯ ಹಕ್ಕು ಕಾಯ್ದೆ 2006ರ ನಿಯಮ 2008ರ ತಿದ್ದುಪಡಿ 2012ರ ಪ್ರಕಾರ ಕಾನೂನಿನಲ್ಲಿ ಅವಕಾಶವಿದೆ. ಆದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಆದಿವಾಸಿಗಳನ್ನು ಅತಂತ್ರಗೊಳಿಸಿದ್ದಾರೆ ಎಂದು ಆರೋಪಿಸಿದರು.

ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯವಾದ ಯರವ ಸಮುದಾಯದ ಮನೆಗಳಿಗೆ ಅಲೆಮಾರಿ,ಅರೆ ಅಲೆಮಾರಿ ಹಾಗೂ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಬುಡಕಟ್ಟುಗಳಿಗೆ 4 ಲಕ್ಷ ರೂ. ಅನುದಾನ ನೀಡುತ್ತೇವೆಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ನಿಗಮದಿಂದ ಅರ್ಜಿ ಆಹ್ವಾನಿಸಿ ರಾಜೀವ್ ಗಾಂಧಿ ನಿಗಮದಿಂದ 1.75 ಲಕ್ಷ ರೂ. ನೀಡಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 2.25 ಲಕ್ಷ ರೂ.ಗಳನ್ನು ನೀಡದೆ ಸರ್ಕಾರ ಅನ್ಯಾಯವೆಸಗಿರುತ್ತದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಹತ್ತೂರು ಗ್ರಾಪಂ ವ್ಯಾಪ್ತಿಗೆ ಬರುವ ಕುಂದ ಗ್ರಾಮದಲ್ಲಿ ವಾಸವಾಗಿರುವ 116 ಯರವ ಕುಟುಂಬಗಳಿಗೆ 3.50 ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಾಣಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಈ ಮಾದರಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಯರವ ಸಮುದಾಯಗಳಿಗೆ ಮನೆ ನಿರ್ಮಾಣಕ್ಕೆ ಅನುದಾನ ನೀಡಬೇಕು. ಸರಗೂರು ತಾಲೂಕಿನ ಲಕ್ಷ್ಮಣಪುರ ಸರ್ವೇ ನಂ.30,17,21 ನಂಬರ್‌ನ ಭೂಮಿ ಕಂದಾಯ ಇಲಾಖೆಗೆ ಸೇರಿದ್ದು 1998–99ರಲ್ಲಿ ದರಖಾಸ್ತು ಅರ್ಜಿ ಫಾರಂ ನಂ.57ನ್ನು ಸಲ್ಲಿಸಿದ್ದು ಈ ಭೂಮಿ ಸರ್ವೇ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ ಎಂದು ತಹಸೀಲ್ದಾರ್ ಮಹೇಶ್‌ಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಮಹೇಶ್, ನಿಮ್ಮ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಪ್ರತಿಭಟನೆ ಕೈಬಿಟ್ಟರು.

ಪ್ರತಿಭಟನೆಯಲ್ಲಿ ಆದಿವಾಸಿ ಮುಖಂಡರಾದ ಕಾಳಮ್ಮ, ಜಯರಾಜು, ಸಿದ್ದರಾಜು, ಮಂಜುನಾಥ್, ಇಂದ್ರಮ್ಮ, ಭಾಗ್ಯಮ್ಮ, ಚಿನ್ನಮಣಿ, ಬಿಳಿಯಪ್ಪ, ಲೋಹಿತ್, ರುದ್ರ, ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಅಭಿವೃದ್ಧಿಗಾಗಿ ಮತ್ತೊಮ್ಮೆ ಆಶೀರ್ವದಿಸಿ: ಹರ್ಷವರ್ಧನ್



ಮಲ್ಲುಂಡಿ, ಮಾ.10–ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತೊಮ್ಮೆ ಆಶೀರ್ವದಿಸಿ ಎಂದು ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ಹುರ ಗ್ರಾಮದಿಂದ ಚಿಕ್ಕಚೆನ್ನಪ್ಪ ದೇವಸ್ಥಾನಕ್ಕೆ ತೆರಳುವ 1.50 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹುರ ಗ್ರಾಮದಿಂದ ಚಿಕ್ಕಚನ್ನಪ್ಪ ದೇವಸ್ಥಾನ ಮಾರ್ಗವಾಗಿ ಮಲ್ಲಹಳ್ಳಿ ಗ್ರಾಮಕ್ಕೆ ತೆರಳುವ ರಸ್ತೆ ಹದ್ದಗೆಟ್ಟಿದ್ದು, ರಾತ್ರಿ ವೇಳೆ ಓಡಾಡಲು ಹರಸಾಹಸ ಪಡಬೇಕಾಗಿತ್ತು. ನಾನು ಶಾಸಕನಾದ ಬಳಿಕ ಪ್ರತಿ ಗ್ರಾಮಗಳಿಗೂ ಅನುದಾನ ನೀಡಿ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದ ಹೆಚ್ಚಿನ ಅಭಿವೃದ್ಧಿಗೆ ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ಆಶೀರ್ವದಿಸಿ ಎಂದು ಮನವಿ ಮಾಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಚಂದ್ರು, ಮಹದೇವಸ್ವಾಮಿ, ಮಹದೇವಯ್ಯ, ರಜಾಕ್, ಲ್ಯಾಂಡ್ ಆರ್ಮಿ ಸಹಾಯಕ ಅಭಿಯಂತರ ಸೌರಬ, ಇಂಜಿನಿಯರ್ ಲೋಕೇಶ್ ಸೇರಿದಂತೆ ಇತರರಿದ್ದರು.

ದಕ್ಷತೆಯಿಂದ ಕೆಲಸ ಮಾಡಿದರೇ ಜನತೆ ಸ್ಮರಿಸುತ್ತಾರೆ: ಸಾರಾ



ಕೆ.ಆರ್.ನಗರ, ಮಾ.10– ನೌಕರರು ಮತ್ತು ಅಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ದಕ್ಷತೆ ಮತ್ತು ಕ್ರಿಯಾಶೀಲವಾಗಿ ಕೆಲಸ ಮಾಡಿದರೇ ಜನತೆ ಸದಾಕಾಲ ಸ್ಮರಿಸುತ್ತಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಶುಕ್ರವಾರ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ನಿವೃತ್ತ ಮೈಮುಲ್ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡರಿಗೆ ಬೀಳ್ಕೊಡುಗೆ, ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾಗಿರುವ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್‌ಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಮೈಮುಲ್‌ನಲ್ಲಿ 30 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಡಾ.ಸಣ್ಣತಮ್ಮೇಗೌಡರ ಕಾರ್ಯವೈಖರಿ ಇತರರಿಗೆ ಮಾದರಿ. ದಶಕದ ಹಿಂದೆ ಹಳ್ಳಿಗಳಿಗೆ ತೆರಳಿ ಪಶು ವೈದ್ಯರಾಗಿ ಕೆಲಸ ಮಾಡುತ್ತಿದ್ದ ಇವರ ಕಾರ್ಯವೈಖರಿ ಮನೆ ಮಾತಾಗಿದ್ದು, ಗೋವುಗಳ ಸೇವೆ ಮಾಡುವ ಪುಣ್ಯದ ಕೆಲಸವಾಗಿದ್ದು, ಇಂತಹ ಸೇವೆ ಮಾಡಿರುವ ಇವರ ನಿವೃತ್ತ ಜೀವನ ಸುಖಕರ ವಾಗಿರಲೆಂದು ಹಾರೈಸಿದರು.


ಸಹಕಾರಿ ಕ್ಷೇತ್ರದಲ್ಲಿ ಮೈಮುಲ್ ನಿರ್ದೇಶಕರಾಗಿ, ಅಧ್ಯಕ್ಷರಾಗಿ ತಾಲೂಕಿನಲ್ಲಿ ಪ್ರತಿ ಹಳ್ಳಿಗಳಲ್ಲಿ ಡೈರಿ ಸ್ಥಾಪನೆಗೆ ಕಾರಣರಾದ ಎ.ಟಿ.ಸೋಮಶೇಖರ್ ಅವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿರುವುದು ಹೆಮ್ಮೆ ವಿಚಾರ ಎಂದರು. ಕೆ.ಆರ್.ನಗರ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ರಾಜ್ಯದಲ್ಲಿ ಉತ್ತಮ ಸ್ಥಾನಗಳಿಸಲು ಅವಿರತವಾಗಿ ಕೆಲಸ ಮಾಡುತ್ತಿರುವ ಪ್ರಸೂತಿ ತಜ್ಞೆ ಡಾ.ಕೆ.ಆರ್.ಚಂದ್ರಕಲಾ ಅವರ ಕಾರ್ಯ ದಕ್ಷತೆಯನ್ನು ಶಾಸಕ ಸಾ.ರಾ.ಮಹೇಶ್ ಕೊಂಡಾಡಿದರು.

ಈ ಸಂದರ್ಭ ಡಾ.ಸಣ್ಣತಮ್ಮೇಗೌಡ, ಅವರ ಪತ್ನಿ ಪಟ್ಟಣದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಸೂತಿ ತಜ್ಞೆ ಡಾ.ಕೆ.ಆರ್.ಚಂದ್ರಕಲಾ ದಂಪತಿ ಹಾಗೂ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಮೈಮುಲ್ ನಿರ್ದೇಶಕ ಸಿ.ಓಂಪ್ರಕಾಶ್, ಮಾಜಿ ನಿರ್ದೇಶಕಿ ವಿಜಯಲಕ್ಷ್ಮಿ, ಪ್ರಧಾನ ವ್ಯವಸ್ಥಾಪಕ ಡಾ.ವಿಜಯಕುಮಾರ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಪುರಸಭೆ ಮಾಜಿ ಸದಸ್ಯ ರಾ.ಜ.ಶ್ರೀಕಾಂತ್, ಟಿಎಪಿಸಿಎಂಎಸ್ ನಿರ್ದೇಶಕ ಚಂದ್ರೇಗೌಡ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ಹಾಲು ಉತ್ಪಾದಕರ ನೌಕರರ ಸಂಘಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ಕೆ.ಮಹದೇವ್, ಬೆಟ್ಟಹಳ್ಳಿ ದಿನೇಶ್, ಭೇರ್ಯ ಲೋಕೇಶ್ ಇತರರಿದ್ದರು.

ರಾಜ್ಯ ಕಲ್ಯಾಣ ಕರ್ನಾಟಕವಾಗಲು ಜೆಡಿಎಸ್ ಅನಿವಾರ್ಯ

ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯ



ತಿ.ನರಸೀಪುರ, ಮಾ.10– ರಾಜ್ಯ ಕಲ್ಯಾಣ ಕರ್ನಾಟಕದತ್ತ ಸಾಗಲು ಜೆಡಿಎಸ್ ಅಧಿಕಾರಕ್ಕೆ ಬರುವುದು ಅನಿವಾರ್ಯ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯಪಟ್ಟರು.

ರಾಜ್ಯ ಜೆಡಿಎಸ್ ಕಾರ್ಯದರ್ಶಿಯಾಗಿ ನೇಮಕಗೊಂಡ ಬನ್ನೂರಿನ ವೈಎನ್.ರಾಮಸ್ವಾಮಿ ಹಾಗೂ ರಾಜ್ಯ ವಕ್ತಾರರಾಗಿ ನೇಮಕಗೊಂಡ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರನ್ನು ಸನ್ಮಾನಿಸುವ ಸಲುವಾಗಿ ತಾಲೂಕಿನ ಯಾಚೇನಹಳ್ಳಿಯಲ್ಲಿ ಶುಕ್ರವಾರ ಗ್ರಾಮಸ್ಥರು ಹಮ್ಮಿಕೊಂಡಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸಿ, ತಮ್ಮ ಅಧಿಕಾರಾವಧಿಯಲ್ಲಿ ಜನಪರ ಯೋಜನೆಗಳನ್ನು ಜಾರಿಗೊಳಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗುವುದು ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಅಗತ್ಯವಿದೆ. ಆ ನಿಟ್ಟಿನಲ್ಲಿ ರಾಜ್ಯದ ಜನತೆ ಜೆಡಿಎಸ್ ಬೆಂಬಲಿಸುವ ಮೂಲಕ ಮತ್ತೊಮ್ಮೆ ಅವರಿಗೆ ಅಧಿಕಾರ ನೀಡಬೇಕು ಎಂದು ಮನವಿ ಮಾಡಿದರು.

ರಾಮಸ್ವಾಮಿಯವರು ಪಕ್ಷ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಈ ಭಾಗದಲ್ಲಿ ಕಾರ್ಯಕರ್ತರ ಪಡೆ ಹುಟ್ಟುಹಾಕಿದ್ದಾರೆ. ಅವರ ಪಕ್ಷ ಸಂಘಟನೆ ಗುರುತಿಸಿ ಸ್ವತಃ ಹೆಚ್.ಡಿ.ಕುಮಾರಸ್ವಾಮಿ ಹಾಗೂ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರೇ ರಾಜ್ಯ ಕಾರ್ಯದರ್ಶಿ ಸ್ಥಾನ ನೀಡಿ ಹೆಚ್ಚಿನ ಜವಾಬ್ದಾರಿ ವಹಿಸಿದ್ದಾರೆ. ರಾಮಸ್ವಾಮಿಯವರು ಮುಂಬರುವ ಚುನಾವಣೆಯಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸಿ ಹೆಚ್ಚಿನ ಮತಗಳನ್ನು ಪಕ್ಷಕ್ಕೆ ಕೊಡಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಆ ಕೆಲಸ ಮಾಡುತ್ತಾರೆಂಬ ನಂಬಿಕೆ ನನಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕುಮಾರಣ್ಣ ಮುಖ್ಯಮಂತ್ರಿಯಾಗಲು ಮುಂಬರುವ ಚುನಾವಣೆಯಲ್ಲಿ ನನಗೆ ಮತ್ತೊಮ್ಮೆ ಅವಕಾಶ ನೀಡುವಂತೆ ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಹೆಚ್ಚಿನ ಸ್ಥಾನ ಗೆಲ್ಲುವ ಮೂಲಕ ರಾಜ್ಯದ ಮುಖ್ಯಮಂತ್ರಿಯಾಗಿ ಕುಮಾರಣ್ಣ ಆಯ್ಕೆಯಾಗಲಿದ್ದಾರೆ. ಕ್ಷೇತ್ರದಲ್ಲಿ ಸರಳ ಸ್ವಭಾವದ, ಕ್ರಿಯಾಶೀಲ ಶಾಸಕರಾಗಿ ಅಭಿವೃದ್ಧಿ ಕಾರ್ಯ ಮಾಡುತ್ತಾ ಬಂದಿರುವ ಅಶ್ವಿನ್ ಕುಮಾರ್ ಅವರಿಗೆ ಮತ್ತೊಂದು ಅವಕಾಶ ನೀಡುವುದರೊಂದಿಗೆ ಸಚಿವ ಸ್ಥಾನ ಅಲಂಕರಿಸಲು ಕಾರಣರಾಗುವಂತೆ ಮನವಿ ಮಾಡಿದರು.

ಇದಕ್ಕೂ ಮೊದಲು ಗ್ರಾಮಕ್ಕೆ ಆಗಮಿಸಿದ ಶಾಸಕ ಅಶ್ವಿನ್ ಕುಮಾರ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ವೈಎನ್.ರಾಮಸ್ವಾಮಿ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಅವರನ್ನು ಎತ್ತಿನ ಗಾಡಿಯಲ್ಲಿ ಅದ್ದೂರಿ ಮೆರವಣಿಗೆಯೊಂದಿಗೆ ವೇದಿಕೆಗೆ ಕರೆ ತರಲಾಯಿತು.

ಈ ವೇಳೆ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಬನ್ನೂರು ಹೋಬಳಿ ಅಧ್ಯಕ್ಷ ಕುಮಾರಸ್ವಾಮಿ, ಮಾಜಿ ಜಿಪಂ ಸದಸ್ಯ ಜೈಪಾಲ್ ಭರಣಿ, ಯುವ ಜೆಡಿಎಸ್ ಜಿಲ್ಲಾಧ್ಯಕ್ಷ ಗಂಗಾಧರಗೌಡ, ಮುಖಂಡರಾದ ಬಿ.ಆರ್.ಮಂಜುನಾಥ್, ಶಿವಕುಮಾರ್, ಜಯರಾಮ್, ಸೌಮ್ಯ ರಾಣಿ, ಶ್ವೇತಾ, ಚಂದ್ರು, ವೆಂಕಟೇಶ್, ರಾಜಣ್ಣ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.




ಮೇಘಾಲಯ, ತ್ರಿಪುರ, ನಾಗಲ್ಯಾಂಡ್‌ಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿ ಸರ್ಕಾರ ರಚಿಸಿದ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆಯ ಬಾಪೂಜಿ ಸರ್ಕಲ್‌ನಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಈ ವೇಳೆ ತಾಲೂಕು ಅಧ್ಯಕ್ಷ ಗುರುಸ್ವಾಮಿ, ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಡಾ.ಹೆಚ್.ವಿ.ಕೃಷ್ಣಸ್ವಾಮಿ, ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಉಸ್ತುವಾರಿಗಳಾದ ಸೂರ್ಯಕುಮಾರ್, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ, ತಾಪಂ ಮಾಜಿ ಅಧ್ಯಕ್ಷೆ ಮಂಜುಳಾ, ದರ್ಕಾಸ್ ಕಮಿಟಿ ನೂತನ ಸದಸ್ಯ ನಂದೀಶ್, ಸ್ವಾಮಿ, ನಂಜುಂಡಸ್ವಾಮಿ, ಮಾಜಿ ಎಪಿಎಂಸಿ ಅಧ್ಯಕ್ಷ ನಟರಾಜ್, ಪ್ರಧಾನ ಕಾರ್ಯದರ್ಶಿ ವಿವೇಕಾನಂದ, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಗೋಪಾಲಯ್ಯ, ದಿನೇಶ್, ಮಹದೇವಪ್ಪ, ಗುರುಸ್ವಾಮಿ, ನಾಗರಾಜ ರಾಮು, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜು, ಬಿ.ಗುರುಸ್ವಾಮಿ, ಪಟ್ಟಣದ ಅಧ್ಯಕ್ಷ ನಂದೀಶ್, ಚಂದ್ರಮೌಳಿ, ಮಹೇಶ್, ಶಿವರಾಜು ಇನ್ನಿತರರಿದ್ದರು.



ತ್ರಿಪುರಾ, ನಾಗಾಲ್ಯಾಂಡ್ ಮತ್ತು ಮಿಜೋರಾಂನಲ್ಲಿ ಬಿಜೆಪಿ ಸರ್ಕಾರ ರಚಿಸಿದ ಹಿನ್ನೆಲೆಯಲ್ಲಿ ವರುಣಾ ಮತ್ತು ತಿ.ನರಸೀಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಈ ವೇಳೆ ವರುಣಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಸದಾನಂದ, ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು, ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗೂನಾಯಕ್, ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ರೂಪಾ, ರಾಜ್ಯ ಕಾರ್ಯಕಾರಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಭೈರಾಪುರ ಬಾಲು, ಜಿಲ್ಲಾ ಎಸ್‌ಟಿ ಘಟಕದ ಉಪಾಧ್ಯಕ್ಷ ಮುದ್ದುಕೃಷ್ಣ, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಸಿದ್ದರಾಜು, ಮೋಹನ್, ಚಿರಂಜೀವಿ, ಅನಿಲ್, ಸ್ವಾಮಿ, ಶಿವಕುಮಾರ್, ಕಿಟ್ಟಿ, ದಿಲೀಪ್, ದೀಪು ಮತ್ತಿತರರಿದ್ದರು.

ಸಣ್ಣತಾಯಮ್ಮ ನಿಧನ



ಹುಣಸೂರು, ಮಾ.10– ಜಿಪಂ ಸದಸ್ಯ ಮಾಜಿ ಡಿ.ಕೆ.ಕುನ್ನೇಗೌಡರ ತಾಯಿ ಸಣ್ಣತಾಯಮ್ಮ(95) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಧರ್ಮಾಪುರದಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜೇಶ್



ಸರಗೂರು, ಮಾ.10– ಪಟ್ಟಣದ 11ನೇ ವಾರ್ಡ್ ಬಿಡಗಲು ನಿವಾಸಿ, ಚಾಲಕ ರಾಜೇಶ್ ಅಲಿಯಾಸ್ ತಂಬಿ(38) ಶುಕ್ರವಾರ ನಿಧನರಾದರು. ಮೃತರು ತಂದೆ, ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹುಟ್ಟುಹಬ್ಬದ ಶುಭಾಶಯಗಳು

ದಿನಾಂಕ: 12–03–2023



ಅಶೋಕಪುರಂ
ಬೋರಯ್ಯ
(ಕೆ.ಎಸ್.ಐ.ಸಿ) ರವರಿಗೆ
60ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು

ಶುಭಕೋರುವವರು:
ಗೋಪಿನಾಥ್ ಮತ್ತು ಹನುಮಂತಯ್ಯ

COMMERCIAL PLOT FOR SALE

37000 sq.ft Commercial Plot For Sale Next To Central Mall City Centre, Mysore

9945535398

SHOPS FOR SALE

In the Heart of the Mysore City - Prime Location - Hanumantha Rao Street-2/ Old Bank Road.

Contact:- 95902 77728

SITE FOR SALE

40x50 E/F, 42/C, 1st Cross KD Road, J L Puram (Brokers Excuse)

9342188042
9945563021

ಬೇಕಾಗಿದ್ದಾರೆ

Hero Electric ಮತ್ತು Exide ಕಂಪನಿಗಳ ಬ್ಯಾಟರಿ ಚಾಲಿತ ಸ್ಕೂಟರ್‌ಗಳು, ಬ್ಯಾಟರಿಗಳು ಹಾಗೂ UPS ಗಳ 'ಸರ್ವಿಸ್ ಸೆಂಟರ್' ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.

ವಿದ್ಯಾರ್ಹತೆ : PUC / ITI

(ಇಲೆಕ್ಟ್ರಾನಿಕ್ ಉಪಕರಣಗಳ ರಿಪೇರಿ ತಿಳಿದವರಿಗೆ/ ಮೈಸೂರಿನಲ್ಲಿ ವಾಸವಿರುವವರಿಗೆ ಆದ್ಯತೆ)

– ಉತ್ತಮ ಬೆಳವಣಿಗೆಯ ಅವಕಾಶಗಳು –
ಕೂಡಲೆ ಸಂಪರ್ಕಿಸಿ

ಶ್ರೀಧರ್ 98451 97718

ಶ್ರೀವರ್ಧಿನಿ ವೆಂಚರ್ಸ್, ಕುವೆಂಪುನಗರ

JOCKEY



FACTORY SECONDS

UP TO 50% OFF*

• 10 am to 8 pm • Open All Days
Master/Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

* T & C apply

Venue in Mysore : The Institution Of Engineers, (Auditorium Hall) Jhansi Lakshmibai Road, JLB Road - 5

Venue in Hassan : Sri Sringeri Shankar Math, Shankar Math Road, K.R. Puram

Org. by: Surya Agency Pvt. Ltd.

WELL KNOWN CORPORATE COMPANY IN MYSORE LOOKING FOR MANAGERS

WALK-IN: ON 13-03-2023, TIME: 11:00AM TO 5:00PM

Qualification: Degree in any Discipline is must,
Exp: 2 years in any Discipline,
Age: Should be between 25 years to 38 years
Salary: Rs. 30,000/- to Rs. 50,000/- per month

Address: Byhrava Complex, First Floor, Chamarajapuram, Opposite Fashion Factory, Mysore-570005

Contact: **9164223639 / 9844121106**

NOTE: Walk-in should be in Formals with Resume

Let a premium builder build your home @ just Rs.1899/sqft

We offer

- Secure payments
- Best-in-class material
- 400+ quality checkpoints
- On-time construction
- 10 years warranty

Curious? Call now:

96069 07154
96069 07153



WE ARE HIRING

Position	Vacancies	Experience
Sales Managers	04	2+ Yrs Experience
Senior Sales Managers	02	5+ Yrs Experience
Sales Executive	02	2+ Yrs Experience
Site Engineers	02	Freshers/1+ Yrs Exp.
Accounts & Tally	01	2+ Yrs Experience

Sales experience in interior & construction industry is an added advantage. (Male Candidates Only)

Ph: 9632090006/8971791543
WhatsApp: 9538323022

ಮೈಸೂರು ಮಿತ್ರ ಬೇಕಾಗಿದ್ದಾರೆ

1. **ಉಪ ಸಂಪಾದಕರು / ವರದಿಗಾರರು**
   ಅನುಭವಿಗಳಿಗೆ ಆದ್ಯತೆ
2. **ಡಿಟಿಪಿ ಆಪರೇಟರ್**
   ಪೇಜ್‌ಮೇಕರ್-7, ಫೋಟೋಶಾಪ್, ಕೋರಲ್‌ಡ್ರಾ, ನುಡಿ ಮತ್ತು ಬರಹ ಲಿಪಿ ತಿಳಿದಿರಬೇಕು.

ಅನುಭವ ಆಧರಿಸಿ ಉತ್ತಮ ಸಂಭಾವನೆ, ಇತರೆ ಭತ್ಯೆ ನೀಡಲಾಗುವುದು ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸಲು ಇಚ್ಛೆಯುಳ್ಳವರು, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವುಳ್ಳ ಸ್ವ-ವಿವರದೊಂದಿಗೆ ಕೂಡಲೇ ಸಂಪರ್ಕಿಸಿ.

ಸಮಯ: ಮಧ್ಯಾಹ್ನ 3 ರಿಂದ 5

ವ್ಯವಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ'
ಪ್ರಾದೇಶಿಕ ಬೆಳಗಿನ ದಿನಪತ್ರಿಕೆ, ಬನ್ನಿಮಂಟಪ, ಮೈಸೂರು 570015.

SRI SAI ANGELS GROUP OF EDUCATIONAL INSTITUTIONS (R.)

Sirgapura, Malalur Post, Chikmagalur - 577133

HIRING POSITIONS FOR SCHOOL

- Vice Principal : M.Sc.(Maths /Physics / Chem.) Should have a min. Experience of 5+ years having Served in CBSE School
- English Teacher : MA / BA
- Social Studies : MA with fluency in english
- Warden (Boys & Girls Hostels) : Any Degree / Diploma in any branch
- Physical Educator : M.P.Ed / B.P. Ed.
- Biology : M.Sc. Botony or Zoology

LECTURERS FOR THE COLLEGE

- Biology : M.Sc.(Biology/ Zoology)
- Chemistry: M.Sc.
  Should have a min. Experience of 5 years in Coaching for NEET/CET/JEE
- Remuneration is not a constraint for deserving candidates

Call or Whatsapp your resume to
9740136375 / 9448944945
EMAIL : karthikmj2007@gmail.com

ಪ್ರಕಟಣೆ

ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಕೆ. ಕೋಟಯ್ಯ ರವರ ಮಗನಾದ ಶ್ರೀ **ಬೀರೇಗೌಡ** [Aadhaar no. : 7430 4873 6192] ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, **ಮಂಡಕಳ್ಳಿ ಗ್ರಾಮಕ್ಕೆ** ಸೇರಿದ **ಸರ್ವೆ ನಂ. 14/6,** ಇದರ ವಿಸ್ತೀರ್ಣ **1 ಎಕರೆ 06 ಗುಂಟೆ** ಜಮೀನು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಶ್ರೀ. ಬೋರೇಗೌಡ ರವರಿಗೆ ಸೇರಿದ ಸರ್ವೆ ನಂ. 14/5 ರ ಜಮೀನು, ಪಶ್ಚಿಮಕ್ಕೆ : ನೀರು ಹರಿಯುವ ಹಳ್ಳ ಮತ್ತು ಶ್ರೀಮತಿ. ರೇಣುಕಾದೇವಿ ರವರಿಗೆ ಸೇರಿದ ಜಮೀನು, ಉತ್ತರಕ್ಕೆ : ಶ್ರೀ. ಸಿದ್ದನಾಯಕ ರವರಿಗೆ ಸೇರಿದ ಸರ್ವೆ ನಂ. 14/4 ರ ಜಮೀನು, ದಕ್ಷಿಣಕ್ಕೆ : ಮಂಡಕಳ್ಳಿ ಗ್ರಾಮದ ರಸ್ತೆ.

ಸ್ಥಳ: ಮೈಸೂರು
ದಿನಾಂಕ: 10/3/2023

ಕೆ.ಎನ್. ಮಹಾದೇವಸ್ವಾಮಿ,
ಬಿ.ಎಸ್ಸಿ., ಎಲ್.ಎಲ್.ಬಿ.,
ವಕೀಲರು ಮತ್ತು ನೋಟರಿ,
ರೂಂ ನಂ. ಎಫ್–1 & 2, ಒಂದನೇ ಮಹಡಿ,
5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್,
ರಾಮಾನುಜ ರಸ್ತೆ, ಮೈಸೂರು – 570 004.
Mobile No. : 94482 22522;
Office No. : 0821- 4287998.

HOUSE FOR LEASE

Well conditioned 2 BHK N/F
I Floor at New Kantharaj Urs Road, Basaveshwara Nagar (Sharadadevi Nagar)
Opp. to Med Plus
Near Annapoorna Eye Hospital

9448679146, 7483824007

SITES FOR SALE

30x40, 30x50, 40x60
Near Infosys, MUDA Approved.
River View 45x65, Rs. 1400/sft
12 kms from Bus Stand

Call: **90714 01234**

WANTED TEACHERS FOR CBSE SCHOOL

- **Higher Primary English Teachers** - 5 posts
- **Higher Primary Social Science Teachers** - 5 posts
- **ScienceTeachers** - 2 posts
- **Nursery Teachers** - 4 posts
- **PT Teacher** - 1 post
- **Art teacher** 1 post
- **Front Desk Executive** - 1 post

Note: Minimum of 2-3 years of experience is expected, preferably in CBSE English Medium School
Place : Nanjangud

8150857937 / 7676110063

2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನೆಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು:
ಶ್ರೀಮತಿ ಜಯಮ್ಮ,
ಮಗ ಯೋಗೇಶ ಕುಮಾರ್,
ಸೊಸೆ ಅನಿತಾ, ಮಗಳು ಕುಸುಮ ಮತ್ತು ಮಮತ
ಅಳಿಯಂದಿರು ಮತ್ತು ಮೊಮ್ಮಕ್ಕಳು
ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಶ್ರೀಮಾನ್ ಎಲ್.ಕೆ.ಮಂಜುನಾಥಸ್ವಾಮಿ(ಲಕ್ಕಣ್ಣ)

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಾಮರಾಜನಗರ

ಇ–ಟೆಂಡರ್ ಪ್ರಕಟಣೆ

2022-23ನೇ ಸಾಲಿನ TWF ಮತ್ತು TALP ಯೋಜನೆಯಡಿ ಜಿಲ್ಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಹಾರ್ಡ್‌ವೇರ್‌ಗಳನ್ನು **(AIO Computer -03. AIO Printer-01, MINI PC-12, 2KV Online UPS-02)** ಪೂರೈಸಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರಿಂದ ಅರ್ಜಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ **(10 AM** ರಿಂದ **5.30 AM)** ಸಂಪರ್ಕಿಸಬಹುದಾಗಿದೆ. ಹಾಗೂ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಸಂಪರ್ಕಿಸುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17-03-2023**
ಸಮಯ: **5.00 PM**

Eproc.karnataka.gov.in

ಸಹಿ/– ಪ್ರಾಂಶುಪಾಲರು
ಡಯಟ್, ಚಾಮರಾಜನಗರ

ವಾಸಾಸಂ.ಇ/ಚಾ.ನಗರ647/2022–23

ಕೋಟ್ಯಾಂತರ ರೂಪಾಯಿ ಮೌಲ್ಯದ ಅಂತಾರಾಷ್ಟ್ರೀಯ ಗಾರ್ಮೆಂಟ್ಸ್

ವಿಶೇಷ ಬ್ರಾಂಡ್‌ಗಳ ಗಾರ್ಮೆಂಟ್ಸ್ ಮತ್ತು ಶೂಗಳು

ಭಾರಿ ರಿಯಾಯಿತಿ ಮಾರಾಟ ಕೆಲವೇ ದಿನಗಳು ಮಾತ್ರ

ಅಂತಾರಾಷ್ಟ್ರೀಯ ಶೋರೂಂಗಳಿಗಾಗಿ ಸಿದ್ಧಪಡಿಸಲಾಗಿದ್ದ ಕೋಟ್ಯಾಂತರ ಸ್ಟಾಕ್‌ನ್ನು ಈಗ 80% ರವರೆಗೆ ದೊಡ್ಡ ರಿಯಾಯಿತಿ ದರದಲ್ಲಿ ಮೈಸೂರಿನ ರಿಟೇಲ್ ಗ್ರಾಹಕರಿಗೆ ನೇರ ಮಾರಾಟ ಮಾಡಲಾಗುತ್ತಿದೆ.

ಕಲರ್ ಪ್ಲಸ್, ಪಾರ್ಕ್ ಅವೆನ್ಯೂ, ಆ್ಯರೋ, ರೇಮಂಡ್ಸ್ ವ್ಯಾನ್‌ಹುಸೇನ್, ಮಾರ್ಕ್ಸ್ & ಸ್ಪೆನ್ಸರ್ ರೂ. 2000/– ರಿಂದ 4000/– ಮೌಲ್ಯದ ಶರ್ಟ್ಸ್ ಮತ್ತು ಪ್ಯಾಂಟ್ಸ್ ಕೇವಲ ರೂ. **700/–** ಮಾತ್ರ

ರೂ. 2000/– ರಿಂದ 3000/– ಮೌಲ್ಯದ ಲೇಡೀಸ್ ಮತ್ತು ಪುರುಷರ ಗಾರ್ಮೆಂಟ್ಸ್ ಈಗ ಕೇವಲ **200/–** ರಿಂದ **500/–** ಕ್ಕೆ ಪಡೆಯಿರಿ

ರೂ. 3000/– ರಿಂದ 10,000/– ಮೌಲ್ಯದ ಸ್ಪೋರ್ಟ್ಸ್ & ಫಾರ್ಮಲ್ ಲೆದರ್ ಶೂ NIKE adidas PUMA Reebok HRX & many more ರೂ. **350/–** ರಿಂದ **1500/–** ಕ್ಕೆ ಪಡೆಯಿರಿ

ರೂ. 2000/– ರಿಂದ 3000/– ಬೆಲೆಯ ಸ್ಕೂಲ್ & ಕಾಲೇಜು ಬ್ಯಾಗ್, ಜಿಮ್ ಬ್ಯಾಗ್ಸ್ ಕೇವಲ ರೂ. **400/–** ರಿಂದ **500/–** ಕ್ಕೆ ಪಡೆಯಿರಿ

ರೂ. 500/– ರಿಂದ ರೂ. 3000 ಬೆಲೆಯ ಸೀರೆಗಳು, ಪೂನಂ ಸೀರೆ, ಜಾರ್ಜೆಟ್ ಸೀರೆಗಳು ಝರಿ ಬಾರ್ಡರ್ & ಪ್ಲೇನ್ ಸೀರೆಗಳು – ಕೇವಲ ರೂ. **150/–** ರಿಂದ **400/–** ಕ್ಕೆ ಪಡೆಯಿರಿ

enamor ಬ್ರಾ, ಪ್ಯಾಂಟೀಸ್, ಟ್ರ್ಯಾಕ್ ಪ್ಯಾಂಟ್ಸ್, ಶರ್ಟ್ಸ್, ಟಿ–ಶರ್ಟ್ಸ್, ಟಾಪ್ಸ್, ಕೆಮಿಸೋಲ್, ನೈಟ್‌ವೇರ್, ಜಿಮ್ ಪ್ಯಾಂಟ್ಸ್ ಇತ್ಯಾದಿ } ಕೇವಲ ರೂ. **80/-** ರಿಂದ **400/-** ಪಡೆಯಿರಿ

ಸ್ಥಳ: ನಂಜರಾಜ ಬಹದ್ದೂರ್ ಛತ್ರ
ವಿನೋಬಾ ರಸ್ತೆ (ಮೆಟ್ರೋಪೋಲ್ ಸರ್ಕಲ್ ಹತ್ತಿರ) ಮೈಸೂರು

ಕರ್ನಾಟಕ ಸರ್ಕಾರ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

(An Autonomous Institute of Govt. Of
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599

ಇ–ಟೆಂಡರ್ ಪ್ರಕಟಣೆ

ಕ್ರ. ಸಂ.1)ಟೆಂಡರ್ ಅಧಿಸೂಚನೆ ಸಂಖ್ಯೆ ಹಿಮ್ಸ್/ಟಿಎಸ್–2/ರೇಡಿಯಾಲಜಿ/23/2022–23, ದಿನಾಂಕ:07.03.2023 ವಿವರ: ಸಂಸ್ಥೆಯ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಅವಶ್ಯಕವಿರುವ ಸಿ.ಟಿ ಮತ್ತು ಸಿ.ಆರ್ ಫಿಲಂಗಳನ್ನು ಇ–ಟೆಂಡರ್ ಮೂಲಕ ಸರಬರಾಜಿಗೆ ಸಂಬಂಧಿಸಿದಂತೆ ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ: 10.03.2023 ರಿಂದ 24.03.2023 ಅಂದಾಜು ಮೊತ್ತ: 16.80 ಲಕ್ಷಗಳು. ಇ.ಎಂ.ಡಿ ಮೊತ್ತ: 42,200.00 ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ https://www.eproc.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1224/2022–23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

apmcnanjangud@gmail.com ದೂ.ಸಂ.08221–226309

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರುಜಿಲ್ಲೆ.

ಸಂಖ್ಯೆ: ಕೃಉಮಾಸ(ನಂ)/500/2022–23 ದಿನಾಂಕ: 10.03.2023

ಪ್ರಕಟಣೆ

ಈ ಮೂಲಕ ಪೇಟೆ ಕಾರ್ಯಕರ್ತರುಗಳಿಗೆ/ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ಮಹದೇಶ್ವರ ರೈಸ್ ಮಿಲ್, ಮಾ// ಶ್ರೀಮತಿ ಕೆ.ಎಸ್.ಭ್ರಮರಾಂಭ ಕೋಂ ಎ.ಎಸ್.ನಂಜುಂಡಸ್ವಾಮಿ, ಆಲತ್ತೂರು ಗ್ರಾಮ, ಚಿಕ್ಕಯ್ಯನ ಛತ್ರ ಹೋಬಳಿ, ಹೊಸಕೋಟೆ ಅಂಚೆ, ನಂಜನಗೂಡು ಇವರಿಗೆ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ನಿವೇಶನ ಸಂಖ್ಯೆ 34 (12 * 24 ಮೀ ಅಳತೆ) ಅನ್ನು ಲೀಸ್–ಕಂ–ಸೇಲ್ ಆಧಾರದ ಅನ್ವಯ ಹಂಚಿಕೆಯಾಗಿದ್ದು, ನಿವೇಶನದ ಲೀಸ್–ಕಂ–ಸೇಲ್ 10 ವರ್ಷಗಳ ಅವಧಿ ಪೂರ್ಣಗೊಂಡ ತರುವಾಯ ಕ್ರಯಪತ್ರ ಪಡೆದುಕೊಂಡಿರುತ್ತಾರೆ. ಸದರಿಯವರು ನಿವೇಶನ ಸಂಖ್ಯೆ 34ರ ನಿವೇಶನ ಸಹಿತ ಕಟ್ಟಡವನ್ನು ಮೆ// ಎ.ಪಿ.ಎಸ್.ಸಿ ಟ್ರೇಡರ್ಸ್, ಮಾಲೀಕರು, ಶ್ರೀ ಎಸ್.ಚಂದ್ರು ಬಿನ್ ಲೇಟ್. ಜಿ.ಎಸ್.ಶ್ರೀಧರ್, 3 ನೇ ಕ್ರಾಸ್, ವಿದ್ಯಾ ನಗರ, ನಂಜನಗೂಡು ತಾಲ್ಲೂಕು ಇವರಿಗೆ ಮಾರಾಟ ಮಾಡಲು ಅನುಮತಿ ಕೋರಿ, ಮಾರಾಟ ಮಾಡಿದ ನಂತರ ಸಂಸ್ಥೆಯ ಹೆಸರಿನಲ್ಲಿರುವ ಲೈಸನ್ಸ್ ರದ್ದುಪಡಿಸಿಕೊಳ್ಳಲು ಒಪ್ಪಿಗೆ ನೀಡಿರುತ್ತಾರೆ ಹಾಗೂ ಮೆ// ಎ.ಪಿ.ಎಸ್.ಸಿ ಟ್ರೇಡರ್ಸ್, ಮಾಲೀಕರು, ಶ್ರೀ ಎಸ್.ಚಂದ್ರು ಸಂಸ್ಥೆಯ ಮಾಲೀಕರು ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಿದ್ದು, ಗೋದಾಮಿನ ಅವಶ್ಯಕತೆ ಇರುವುದರಿಂದ ಮೇಲ್ಕಂಡ ನಿವೇಶನ ಸಹಿತ ಕಟ್ಟಡವನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಯುಕ್ತ, ಮೆ// ಶ್ರೀ ಮಹದೇಶ್ವರ ರೈಸ್ ಮಿಲ್, ಮಾಲೀಕರು. ಶ್ರೀಮತಿ ಕೆ.ಎಸ್.ಭ್ರಮರಾಂಭ ಕೋಂ ಎ.ಎಸ್ ನಂಜುಂಡಸ್ವಾಮಿ, ಆಲತ್ತೂರು ಗ್ರಾಮ, ಚಿಕ್ಕಯ್ಯನ ಛತ್ರ ಹೋಬಳಿ, ಹೊಸಕೋಟೆ ಅಂಚೆ, ನಂಜನಗೂಡು ಇವರಿಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ 34 (12 ಮೀ * 24 ಮೀ ಅಳತೆ ವಿಸ್ತೀರ್ಣ)ರ ನಿವೇಶನ ಸಹಿತ ಕಟ್ಟಡವನ್ನು ಮೆ// ಎ.ಪಿ.ಎಸ್.ಸಿ ಟ್ರೇಡರ್ಸ್, ಮಾಲೀಕರು, ಶ್ರೀ ಎಸ್.ಚಂದ್ರು ಬಿನ್ ಲೇಟ್. ಜಿ.ಎಸ್.ಶ್ರೀಧರ್, 3 ನೇ ಕ್ರಾಸ್, ವಿದ್ಯಾ ನಗರ, ನಂಜನಗೂಡು ತಾಲ್ಲೂಕು ಇವರಿಗೆ ಮಾರಾಟ ಮಾಡುವ ಕುರಿತು ಯಾವುದೇ ಆಕ್ಷೇಪಣೆ ಸಲಹೆ ಮತ್ತು ತಕರಾರುಗಳು ಏನಾದರೂ ಇದ್ದಲ್ಲಿ ಅದನ್ನು ಪುಷ್ಠೀಕರಿಸುವ ದಾಖಲಾತಿಗಳೊಂದಿಗೆ ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ/ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ 34 ಪೂರ್ವ ಪಶ್ಚಿಮ 12 ಮೀಟರ್ ಉತ್ತರ ದಕ್ಷಿಣ 24 ಮೀಟರ್‌ಗಳುಳ್ಳ ಒಟ್ಟು 288 ಚದರ ಮೀಟರ್ ನಿವೇಶನ ಹಾಗೂ ಅದರಲ್ಲಿರುವ ಕಟ್ಟಡ.

ನಿವೇಶನ ಸಂಖ್ಯೆ 34 ಕ್ಕೆ ಚೆಕ್ಕುಬಂಧಿ

ಪೂರ್ವಕ್ಕೆ: ನಿವೇಶನ ಸಂ– 35 **ಪಶ್ಚಿಮಕ್ಕೆ:** ನಿವೇಶನ ಸಂ– 33
ಉತ್ತರಕ್ಕೆ: ಎ.ಪಿ.ಎಂ.ಸಿ ರಸ್ತೆ **ದಕ್ಷಿಣಕ್ಕೆ:** ಮುಚ್ಚು ಹರಾಜುಕಟ್ಟೆ

ಸಹಿ/– (ಬಿ.ಮಹೇಶ)
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಸಹಿ/– (ಎಂ.ಶಿವಮೂರ್ತಿ)
ಆಡಳಿತಾಧಿಕಾರಿಯವರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಬಿ.ರಾಚಯ್ಯ ಪ್ರತಿಷ್ಠಾನ

ಚಾಮರಾಜನಗರ



ಬೃಹತ್ ಉದ್ಯೋಗ ಮೇಳ

ಮಾರ್ಚ್ 12 ಭಾನುವಾರ, ಬೆಳಗ್ಗೆ 8.30 ರಿಂದ ಪ್ರಾರಂಭ
ಸ್ಥಳ: ಕೊಳ್ಳೇಗಾಲದ **ನ್ಯಾಷನಲ್ ಶಾಲಾ ಆವರಣ**

ಉದ್ಯೋಗಾವಕಾಶಗಳು

- ಫೆಸಿಲಿಟಿ ಮ್ಯಾನೇಜ್ಮೆಂಟ್
- ಸೆಕ್ಯೂರಿಟಿ ಸರ್ವೀಸ್
- ಫುಡ್ ಸರ್ವೀಸಸ್
- ಮೇನೆಜ್ಮೆಂಟ್ ಸರ್ವೀಸಸ್
- ಟೆಲಿ ಕಮ್ಯೂನಿಕೇಷನ್
- ಈ–ಕಾಮರ್ಸ್, ಮ್ಯಾನುಫ್ಯಾಕ್ಚರಿಂಗ್ ಇಂಡಸ್ಟ್ರಿ
- ಇಂಜಿನಿಯರಿಂಗ್ ಸರ್ವೀಸ್
- BFSI, IT, ITES LOGISTICS,
- HEALTH CARE, TSIPL

ವಿದ್ಯಾರ್ಹತೆ: 10ನೇ ತರಗತಿ, ಪಿಯುಸಿ, ಐಟಿಐ, ಬಿಇ, ಎಂಬಿಎ, ಡಿಪ್ಲೋಮಾ, ಯಾವುದೇ ಪದವಿ

ಸಂಬಳ: 12 ರಿಂದ 35 ಸಾವಿರ (ಪಿಎಫ್, ಇಎಸ್ಐ ಮತ್ತು ಇತರೆ ಸೌಲಭ್ಯಗಳು)

ನೋಂದಣಿ ಸಮಯ : ಬೆಳಗ್ಗೆ 9.00ರಿಂದ 10.00

ಸಂದರ್ಶನ: ಬೆಳಗ್ಗೆ 10–30 ರಿಂದ 1–30

ಉಪಹಾರ: ಮಧ್ಯಾಹ್ನ 1.30 ರಿಂದ 2.30ರವರೆಗೆ

ಆಯ್ಕೆ ಪತ್ರ ವಿತರಣೆ: ಮಧ್ಯಾಹ್ನ 3.00ರಿಂದ 4.00ರವರೆಗೆ

ಹೆಚ್ಚಿನ ಮಾಹಿತಿಗಾಗಿ

ಚೇತನ್ ಮೊ: 9538444900	ರಾಘವೇಂದ್ರ ಮೊ: 9972585145
ಮಾಜ್ ಉಲ್ಲಾ ಮೊ: 9164518217	ಕಿರಾತಾರ್ಜುನಮೂರ್ತಿ ಮೊ: 7760312135



ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಿ,
ಯಶಸ್ವಿಗೆ ಸಹಕರಿಸಿ ಎಂಬ ವಿನಮ್ರ ಕೋರಿಕೆಯೊಂದಿಗೆ

ತಮ್ಮ ಪ್ರೀತಿಯ **ಎ.ಆರ್. ಕೃಷ್ಣಮೂರ್ತಿ**
ಮಾಜಿ ಶಾಸಕರು ಹಾಗೂ ಅಧ್ಯಕ್ಷರು, ಬಿ.ರಾಚಯ್ಯ ಪ್ರತಿಷ್ಠಾನ, ಚಾ.ನಗರ ಜಿಲ್ಲೆ

ಕರ್ನಾಟಕ ಸರ್ಕಾರ ಉಪ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ

ಜಿಲ್ಲಾ ಪಂಚಾಯತ್, ಸಿ.ಟಿ.ಐ. ಕಟ್ಟಡ ಸಯ್ಯಾಜಿರಾವ್ ರಸ್ತೆ, ಮೈಸೂರು
ಟೆಂ.ಸಂ.: ಮೈಜಿಪಂ/ಕೈಜಇ/ಆಡಳಿತ/ಡಾ.ಎ.ಅ/ಟೆ.ಪ್ರ–2023–24/2022–23
ದಿ: 09.03.2023

ಟೆಂಡರ್ ಪ್ರಕಟಣೆ

ಉಪನಿರ್ದೇಶಕರವರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿ.ಪಂ. ಮೈಸೂರು ಈ ಕಛೇರಿಯ ದೈನಂದಿನ ಕೆಲಸಕಾರ್ಯಗಳಿಗೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸಲು 2023–24ನೇ ಸಾಲಿಗೆ 01 ಡಾಟಾ ಎಂಟ್ರಿ ಆಪರೇಟರ್ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಹರಾದ ಸಂಸ್ಥೆ/ಏಜೆನ್ಸೀ/ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆಸಕ್ತಿವುಳ್ಳವರು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು ಈ ಕಛೇರಿಯಲ್ಲಿ ರೂ.100/–ಗಳನ್ನು ನಗದಾಗಿ ಪಾವತಿಸಿ ಟೆಂಡರ್ ಅರ್ಜಿಗಳನ್ನು ದಿ: 09.03.2023 ರಿಂದ ದಿ: 05.04.2023 ರವರೆಗೆ ಕಛೇರಿಯ ಕಾರ್ಯನಿರತ ದಿನಗಳಲ್ಲಿ ಬೆಳಿಗ್ಗೆ: 10.30 ರಿಂದ ಸಾಯಂಕಾಲ: 5.00 ಗಂಟೆಯವರಗೆ ಪಡೆಯಬಹುದಾಗಿರುತ್ತದೆ. ದಿ:10.04.2023ರ ಸೋಮವಾರ ಸಂಜೆ:5.00 ಗಂಟೆಯವರೆಗೆ ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಕಛೇರಿಯಲ್ಲಿ ಸ್ವೀಕರಿಸಲಾಗುವುದು. ದಿ: 11.04.2023ರ ಮಂಗಳವಾರ ಬೆಳಿಗ್ಗೆ:11.30 ಗಂಟೆಗೆ ತಾಂತ್ರಿಕ ಬಿಡ್ ಹಾಗೂ ಮಧ್ಯಾಹ್ನ:12.30 ಗಂಟೆಗೆ ಆರ್ಥಿಕ ಬಿಡ್‌ನ್ನು ಟೆಂಡರ್ ಮಾರ್ಗದರ್ಶನಗಳ ಅನುಸಾರವಾಗಿ ತೆರೆಯಲಾಗುವುದು.ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಮೈಸೂರು, ಇವರಿಂದ ಮಾಹಿತಿ ಪಡೆಯಬಹುದು. ದೂ:0821–2441353 ಇ–ಮೇಲ್:ddmysore@gmail.com

ಸಹಿ/– ಉಪ ನಿರ್ದೇಶಕರು

DIPR/DDMYS/KSMCA/1162/2022-23